06 March 2026 Friday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಆಲಸ್ಯ ಯಾವ ಕೆಲಸವನ್ನು ಮಾಡಲು ಬಿಡುವುದಿಲ್ಲ, ಜವಾಬ್ದಾರಿ ವಿಶ್ರಾಂತಿ ಪಡೆಯಲೂ ಅವಕಾಶ ಕೊಡುವುದಿಲ್ಲ!

-ಸ್ನೇಹಾ ಆನಂದ್

info.varthaman@gmail.com



ಮಾದಪ್ಪನ ಬೆಟ್ಟದಲ್ಲಿ ಹುಂಡಿ ಹಣ ಎಣಿಕೆ । ದಾಖಲೆ ಮಟ್ಟದ ಹಣ ಸಂಗ್ರಹ — ಪುಟ ಸಂ. 2



ಎಐಟಿಯುಸಿ ವತಿಯಿಂದ ಹಲವು ಬೇಡಿಕೆ ಈಡೇರಿಕೆಗೆ ಆಗ್ರಹ — ಪುಟ ಸಂ. 2



ಕಾಯಿಲೆಗಳ ಬಗ್ಗೆ ಎಚ್ಚರವಿರಲಿ: ನರರೋಗ ತಜ್ಞ ಡಾ.ಸುಶ್ರುತ ಗೌಡ — ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 115 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಇಂದು ಸಿದ್ದರಾಮಯ್ಯ ಲೆಕ್ಕಾಚಾರ ಬಹಿರಂಗ

## ದಾಖಲೆ ಬಜೆಟ್ ಮಂಡನೆಗೆ ಸಿದ್ಧತೆ । 4.50 ಲಕ್ಷ ಕೋಟಿ ಗಾತ್ರದ ಆಯವ್ಯಯ

**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾ.6ರಂದು ಶುಕ್ರವಾರ ದಾಖಲೆಯ 17ನೇ ಬಜೆಟ್ ಮಂಡಿಸಲಿದ್ದಾರೆ. 4.50 ಲಕ್ಷ ಕೋಟಿ ಗಾತ್ರದ ಆಯವ್ಯಯವನ್ನು ಸಿದ್ದರಾಮಯ್ಯ ಮಂಡಿಸಲಿದ್ದಾರೆ. ಬಜೆಟ್‌ನಲ್ಲಿ ಗ್ಯಾರಂಟಿ ಯೋಜನೆಗಳಿಗೆ ಹೆಚ್ಚಿನ ಅನುದಾನ ಮೀಸಲಿಡುವ ಸಾಧ್ಯತೆ ಇದೆ.

2026-27ನೇ ಸಾಲಿನ ಬಜೆಟ್ ಕುರಿತು ರಾಜ್ಯದ ಜನರಿಗೆ ಹಲವು ನಿರೀಕ್ಷೆಗಳಿವೆ. ದೀರ್ಘಕಾಲದ ಜನಪರ ಯೋಜನೆಗಳಿಗೆ ಹೆಚ್ಚಿನ ಆದ್ಯತೆ ನೀಡುವ ಸಾಧ್ಯತೆ ಇದೆ. ಇಂದಿರಾ ಕಿಟ್ ಮತ್ತು ಆಶ್ರಯ ಯೋಜನೆಯಡಿ ಮನೆಗಳ ಹಂಚಿಕೆ ಘೋಷಣೆಯಾಗಬಹುದು ಎಂದು ತಿಳಿದುಬಂದಿದೆ.

ಬೃಹತ್ ಮೈಸೂರು ಮಹಾನಗರಪಾಲಿಕೆ ರಚನೆ ಆಗಲಿರುವ ಹಿನ್ನೆಲೆಯಲ್ಲಿ ತವರು ಜಿಲ್ಲೆ ಮೈಸೂರಿಗೆ ಬೃಹತ್ ಯೋಜನೆಗಳನ್ನು ಘೋಷಿಸಲಿದ್ದಾರೆ ಎಂದು ನಿರೀಕ್ಷಿಸಲಾಗಿದೆ. ಶಿಕ್ಷಣ, ಉದ್ಯೋಗ, ಆರೋಗ್ಯ, ಕೃಷಿ, ಸಹಕಾರ, ಕೈಗಾರಿಕೆ, ಸಾರಿಗೆ, ಗ್ರೇಟರ್ ಪುಟ 2ಕ್ಕೆ

### ಬಸ್ ನಿಲ್ದಾಣಗಳಲ್ಲಿ ನೇರ ಪ್ರಸಾರ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದ 2026-27 ನೇ ಸಾಲಿನ ಬಜೆಟ್ ಅನ್ನು ಮಾರ್ಚ್ 6ರಂದು ಶುಕ್ರವಾರ ಮಂಡಿಸಲಿರುವ ಬಜೆಟ್ ಅನ್ನು ರಾಜ್ಯದ 230 ಬಸ್ ನಿಲ್ದಾಣದ ಟಿವಿಗಳಲ್ಲಿ ನೇರ ಪ್ರಸಾರ ಮಾಡಲಾಗುತ್ತದೆ.ರಾಜ್ಯದ ಸುದೀರ್ಘ ಅವಧಿಗೆ ಮುಖ್ಯಮಂತ್ರಿ ಆಗಿ ಕಾರ್ಯನಿರ್ವಹಿಸುತ್ತಿರುವ ಸಿದ್ದರಾಮಯ್ಯ ಮಂಡನೆಯ ಬಜೆಟ್ ನೇರ ಪ್ರಸಾರವನ್ನು ರಾಜ್ಯದ ಜನತೆಗೆ ತಲುಪಿಸುವ ಉದ್ದೇಶದಿಂದ ವೃತ್ತಿ ಸೊಲ್ಯೂಷನ್ಸ್ ಲಿಮಿಟೆಡ್ ಸಂಸ್ಥೆಯು ವಾರ್ತಾ ಇಲಾಖೆಯ ಸಹಯೋಗದೊಂದಿಗೆ ರಾಜ್ಯದಾದ್ಯಂತ ಇರುವ 230 ಸರ್ಕಾರಿ ಬಸ್ ನಿಲ್ದಾಣಗಳಲ್ಲಿ ಇರುವ ತನ್ನ ಪುಟ 2ಕ್ಕೆ

### ಆರೋಗ್ಯ ಕ್ಷೇತ್ರಕ್ಕೆ ಒತ್ತು

ಆರೋಗ್ಯ ಸೇವೆಗೆ ಒತ್ತು ನೀಡಲು ಸಿದ್ದರಾಮಯ್ಯ ಮುಂದಾಗಿದ್ದಾರೆ. ಆರೋಗ್ಯ ಸೇವೆ ಕಾರ್ಯಕ್ರಮಗಳ ಅನುಷ್ಠಾನವನ್ನು ಪರಿಣಾಮಕಾರಿಯಾಗಿ ಜಾರಿ ಮಾಡಲು 2026-27ನೇ ಸಾಲಿನ ಬಜೆಟ್‌ನಲ್ಲಿ ಯೋಜನೆಗಳನ್ನು ಘೋಷಿಸುವ ಸಾಧ್ಯತೆ ಇದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಮೂಲಸೌಕರ್ಯ ಹೆಚ್ಚಿಸಲು ಅನುದಾನ, ಅಗತ್ಯವಿರುವೆಡೆ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಹಾಸಿಗೆ ಪ್ರಮಾಣ ಹೆಚ್ಚಳ, ಆಧುನಿಕ ವೈದ್ಯಕೀಯ ಉಪಕರಣಗಳ ನವೀಕರಣ, ಹೊಸ ಐಟಿಯು, ಡಯಾಲಿಸಿಸ್, ಕ್ಯಾನ್ಸರ್ ಚಿಕಿತ್ಸೆ ಘಟಕಗಳ ಸ್ಥಾಪನೆ, ವೈದ್ಯರು ಸಿಬ್ಬಂದಿ ನೇಮಕಾತಿ, ಗರ್ಭಿಣಿ ಮತ್ತು ನವಜಾತ ಶಿಶುಗಳ ಸಾವಿನ ಪ್ರಮಾಣ ಕಡಿಮೆ ಮಾಡಲು ವಿಶೇಷ ಯೋಜನೆ, ಆರೋಗ್ಯ ಕರ್ನಾಟಕ ಆಯುಷ್ಮಾನ್ ಯೋಜನೆ ವಿಸ್ತರಣೆ, ಕೆಲವು ಜಿಲ್ಲೆಗಳಿಗೆ ಹೊಸ ಮೆಡಿಕಲ್ ಕಾಲೇಜು ಸ್ಥಾ ಪುಟ 2ಕ್ಕೆ



## ವಾಣಿಜ್ಯ ಸಿಲಿಂಡರ್ ದರ ಹೆಚ್ಚಳ

**ನವದೆಹಲಿ:** ಮಧ್ಯಪ್ರಾಚ್ಯದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆಯಿಂದಾಗಿ ಅನಿಲ ಪೂರೈಕೆ ಮೇಲೂ ಪರಿಣಾಮ ಬೀರಿದೆ. ಹೀಗಾಗಿ ವಾಣಿಜ್ಯ ಸಿಲಿಂಡರ್‌ಗಳಿಗೆ ನೀಡಲಾಗಿದ್ದ ರಿಯಾಯಿತಿಗಳನ್ನ ಸ್ಥಗಿತಗೊಳಿಸಿರುವುದಾಗಿ ಇಂಡೇನ್ ಆಯಿಲ್ ತಿಳಿಸಿದೆ.

ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ ನಿರ್ದೇಶನದ ಮೇರೆಗೆ 19 ಕೆಜಿ ಮತ್ತು 47 ಕೆಜಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಗಳ ಮೇಲಿನ ರಿಯಾಯಿತಿಗಳನ್ನ ರದ್ದುಗೊಳಿಸಿರುವುದಾಗಿ ಹೇಳಿದೆ.ಮಧ್ಯಪ್ರಾಚ್ಯದಲ್ಲಿನ ಭೌಗೋಳಿಕ ಮತ್ತು ರಾಜಕೀಯ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು 19 ಕೆಜಿ ಮತ್ತು 47.5 ಕೆಜಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಪೂರೈಕೆಗೆ ವಿಸ್ತರಿಸಲಾಗಿದ್ದ ಎಲ್ಲಾ ರಿಯಾಯಿತಿಗಳನ್ನ ಮುಂದಿನ ಅಧಿಸೂಚನೆಯವರೆಗೆ ತಡೆಹಿಡಿಯಲಾಗಿದೆ. ಇಂಡಿಯನ್ ಆಯಿಲ್ ನಿರ್ದೇಶನದ ಮೇರೆಗೆ ಈ ನಿರ್ಧಾರ ಕೈಗೊಂಡಿರುವುದಾಗಿ ಇಂಡೇನ್ ಗ್ಯಾಸ್ ಡಿಸ್ಟ್ರಿಬ್ಯೂಟರ್ಸ್ ತಿಳಿಸಿದೆ. ಬೆಂಗಳೂರಿನಲ್ಲಿ 19 ಕೆಜಿಯ ವಾಣಿಜ್ಯ ಸಿಲಿಂಡರ್ ದರ 1,814 ರೂಪಾಯಿ ಮತ್ತು 47.5 ಕೆಜಿ ಪುಟ 2ಕ್ಕೆ



## ನಾಳೆ ಸಿಎಂ ಮೈಸೂರು ಪ್ರವಾಸ

**ಮೈಸೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್ ಮಂಡಿಸಿದ ಮರುದಿನವೇ ಮಾರ್ಚ್ 7ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ವರುಣ ವಿಧಾನಸಭಾ ಕ್ಷೇತ್ರದ ಪಿಲ್ಲಹಳ್ಳಿ ಗ್ರಾಮಕ್ಕೆ ಹೆಲಿಕಾಪ್ಟರ್‌ನಲ್ಲಿ ಬೆಳಿಗ್ಗೆ 11.40ಕ್ಕೆ ಬರುವರು. ಗ್ರಾಮದಲ್ಲಿ ಆಯೋಜಿಸಿರುವ ದಂಡಿಮಾರಮ್ಮ ದೇವಾಲಯದ ಪ್ರತಿಷ್ಠಾಪನೆ ಮಹೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳುವರು.

ನಂತರ ಎಚ್.ಡಿ.ಕೋಟೆ ತಾಲ್ಲೂಕಿನ ಕಬಿನಿ ಜಲಾಶಯದ ಹೆಲಿಪ್ಯಾಡ್‌ಗೆ ಮಧ್ಯಾಹ್ನ ತೆರಳುವರು. ಅಲ್ಲಿಂದ 1.40ಕ್ಕೆ ಎಚ್.ಡಿ.ಕೋಟೆ ತಾಲ್ಲೂಕಿನ ಶಿರಮಳ್ಳಿಗೆ ರಸ್ತೆ ಮಾರ್ಗವಾಗಿ ತೆರಳುವ ಅವರು, ಲಕ್ಷ್ಮೀದೇವಿ (ಹುಚ್ಚಮ್ಮ) ಅಮ್ಮನವರ ನೂತನ ದೇವಾಲಯದ ಉದ್ಘಾಟನೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.


ಮಧ್ಯಾಹ್ನ 3.30ರ ಸುಮಾರಿಗೆ ಕಬಿನಿ ಜಲಾಶಯದ ಹೆಲಿಪ್ಯಾಡ್‌ನಿಂದ ಮೈಸೂರಿನ ಮಂಡಕಳ್ಳಿ ವಿಮಾನನಿಲ್ದಾಣಕ್ಕೆ ಬಂದಿಳಿಯುವರು. ಅಲ್ಲಿ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸುವರು. ಸಂಜೆ 5ಕ್ಕೆ ವಿಶೇಷ ಪುಟ 2ಕ್ಕೆ



## ಬಿಜೆಪಿಯಲ್ಲಿ ಕೆಲ ಗೊಂದಲ ಇರುವುದು ನಿಜ: ವಿಜಯೇಂದ್ರ

**ದಾವಣಗೆರೆ:** ಬಿಜೆಪಿಯಲ್ಲಿ ಕೆಲವು ಸಮಸ್ಯೆ, ಗೊಂದಲಗಳು ಇರುವುದು ನಿಜ. ಇದನ್ನು ಮುಂದುವರಿಸಲು ಬಿಡುವುದಿಲ್ಲ. ಶೀಘ್ರ ಬಗೆಹರಿಸಿಕೊಳ್ಳುತ್ತೇವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.

ನಗರದ ಹೊರವಲಯದ ಖಾಸಗಿ ರೆಸಾರ್ಟ್‌ನಲ್ಲಿ ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಬಣದ ಜೊತೆಗೆ ಸಭೆ ನಡೆಸಿದ ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು. ಪುಟ 2ಕ್ಕೆ





**ಎನ್ ಆರ್ ಕ್ಷೇತ್ರದಲ್ಲಿರುವ ಮದರಸ ಶಾಲೆಯಲ್ಲಿ ಓದುತ್ತಿದ್ದ 4 ಹೆಣ್ಣು ಮಕ್ಕಳು ಶ್ರೀರಂಗಪಟ್ಟಣದಲ್ಲಿ ಮುಳುಗಿ ಮೃತಪಟ್ಟಿದ್ದು ಅವರ ಕುಟುಂಬದವರಿಗೆ ಮುಖ್ಯಮಂತ್ರಿಗಳಿಂದ ತಲಾ 2 ಲಕ್ಷ ಪರಿಹಾರ ನೀಡಲಾಗಿದ್ದು ಶಾಸಕ ತನ್ವಿರ್ ಸೇಟ್ ಮತ್ತು ಕಾಂಗ್ರೆಸ್ ಮುಖಂಡ ಎಂ. ಲಕ್ಷ್ಮಣ್ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ ವಿತರಣೆ ಮಾಡಿದರು.**

# ಭ್ರಷ್ಟ ಅಧಿಕಾರಿಗಳಿಗೆ ಲೋಕಾಯುಕ್ತ ಶಾಕ್

## ಮೈಸೂರು ಸೇರಿ ವಿವಿಧೆಡೆ ಸರ್ಕಾರಿ ಅಧಿಕಾರಿಗಳ ಮನೆ ಮೇಲೆ ದಾಳಿ

**ಬೆಂಗಳೂರು:** ರಾಜ್ಯದ ವಿವಿಧ ಜಿಲ್ಲೆಗಳ ಹಲವು ಸರ್ಕಾರಿ ಅಧಿಕಾರಿಗಳ ಮನೆ ಮೇಲೆ ಲೋಕಾಯುಕ್ತ ಅಧಿಕಾರಿಗಳು ಗುರುವಾರ ಏಕಕಾಲದಲ್ಲಿ ದಾಳಿ ನಡೆಸಿದ್ದಾರೆ. ಗುರುವಾರ ಬೆಳ್ಳಂಬೆಳಗ್ಗೆ ಭ್ರಷ್ಟರಿಗೆ ಲೋಕಾಯುಕ್ತ ಬಿಸಿಮುಟ್ಟಿಸಿದೆ.

ಬೆಂಗಳೂರಿನ 4 ಕಡೆ ಸೇರಿದಂತೆ ಹಲವೆಡೆ ಲೋಕಾಯುಕ್ತ ದಾಳಿ ನಡೆಸಿದೆ. ಈ ಸಂದರ್ಭ ಅಪಾರ ಪ್ರಮಾಣದ ಆಸ್ತಿ ದಾಖಲಾತಿ ಮತ್ತು ನಗದು, ಚಿನ್ನಾಭರಣ ಪತ್ತೆ ಆಗಿದೆ. ಅಕ್ರಮ ಆಸ್ತಿ ಗಳಿಕೆ ಆರೋಪದ ಮೇಲೆ ಮೈಸೂರು, ಬೆಂಗಳೂರು, ಮಂಡ್ಯ, ಧಾರವಾಡ, ಹಾಸನ, ವಿಜಯಪುರ ಮತ್ತು ಯಾದಗಿರಿ ಸೇರಿದಂತೆ ಹಲವು ಜಿಲ್ಲೆಗಳ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳಿಗೆ ಸಂಬಂಧಿಸಿದ ಅನೇಕ ಸ್ಥಳಗಳ ಮೇಲೆ ದಾಳಿ ನಡೆಸಿ, ಶೋಧ ನಡೆಸಲಾಗಿದೆ.

ಕೆಆರ್‌ಐಡಿಎಲ್ ಚೀಫ್ ಎಂಜಿನಿಯರ್ ವಸಂತ್ ವಿ ನಾಯಕ್, ಬಿಡಿಎ ವ್ಯಾಪ್ತಿಯ ಆರ್‌ಎಫ್‌ಓ ಡಾಲೇಶ್, ರೈತ ಸೇವಾ ಸಹಕಾರ ಸಂಘದ ಸಿಇಓ ಶಶಿಧರ್ ಮನೆ, ಕಚೇರಿಗಳ ಮೇಲೆ ಲೋಕಾಯುಕ್ತ ಪುಟ 2ಕ್ಕೆ



### ಎಇಇ ಇಕ್ಬಾಲ್‌ಗೆ ಲೋಕಾ ಬಿಸಿ

ಮೈಸೂರು: ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಎಇಇ ಇಕ್ಬಾಲ್ ಹಸೀಸ್ ಖಲೀಲ್ ಮನೆಗೆ ಲೋಕಾಯುಕ್ತ ಪೊಲೀಸರು ಗುರುವಾರ ಬೆಳಿಗ್ಗೆ ದಾಳಿ ಮಾಡಿದ್ದಾರೆ. ಸಾರ್ವಜನಿಕ ದೂರು ಆಧರಿಸಿ ಅಧಿಕಾರಿ ಮನೆ ಮೇಲೆ ದಾಳಿ ನಡೆಸಲಾಗಿದೆ. ಕಚೇರಿಯೂ ಸೇರಿದಂತೆ ನಗರದ 4 ಕಡೆ ತಪಾಸಣೆ ನಡೆಸಲಾಗುತ್ತಿದೆ ಎಂದು ಲೋಕಾಯುಕ್ತ ಎಸ್‌ಪಿ ಉದೇಶ್ ತಿಳಿಸಿದ್ದಾರೆ. ಪುಟ 2ಕ್ಕೆ

### ಲೋಕಾಯುಕ್ತ ಅಧಿಕಾರಿಗಳಿಗೆ ಬಾಗಿಲು ತೆರೆಯದೇ ಹೈಡ್ರಾಮ

**ಹಾಸನ:** ಆದಾಯಕ್ಕಿಂತ ಅಧಿಕ ಆಸ್ತಿ ಗಳಿಕೆ ಆರೋಪದಡಿ ಹಾಸನದ ರಕ್ಷಣಾಪುರಂನಲ್ಲಿರುವ ಹಾಸನ ಮಹಾನಗರಪಾಲಿಕೆ ಎಇಇ ಎಂ.ಸಿ ಸತ್ಯನಾರಾಯಣ ಮನೆ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದರು.

ಹಾಸನದ ಸತ್ಯನಾರಾಯಣ ನಿವಾಸದ ಮೇಲೆ ನಡೆದ ದಾಳಿಯ ಸಂದರ್ಭದಲ್ಲಿ ಹೈಡ್ರಾಮಾ ನಡೆಯಿತು, ಅಲ್ಲಿ ಬಾಗಿಲು ತೆರೆಯದ ಕಾರಣ ಲೋಕಾಯುಕ್ತ ಅಧಿಕಾರಿಗಳು ಮನೆಯ ಹೊರಗೆ ಒಂದು ಗಂಟೆಗೂ ಹೆಚ್ಚು ಕಾಲ ಕಾಯಬೇಕಾಯಿತು. ಸತ್ಯನಾರಾಯಣ ಅವರು ಗೇಟ್ ತೆರೆಯಲು ಮಾಡಿದ ಮನವಿಗಳಿಗೆ ಸ್ಪಂದಿಸದಿದ್ದಾಗ ಅಧಿಕಾರಿಗಳು ಮೊದಲ ಮಹಡಿಗೆ ಹತ್ತಿ ಮನೆಯೊಳಗೆ ಪುಟ 2ಕ್ಕೆ

## ದುಬೈನಿಂದ 246 ಕನ್ನಡಿಗರು ವಾಪಸ್



**ಬೆಂಗಳೂರು:** ಇಸ್ರೇಲ್ ಹಾಗೂ ಇರಾನ್ ನಡುವಿನ ಯುದ್ಧದಿಂದ ದುಬೈನಲ್ಲಿ ಸಿಲುಕಿದ್ದ 50 ಕನ್ನಡಿಗರು ಬೆಂಗಳೂರಿಗೆ ವಾಪಸ್ ಬಂದಿಳಿದಿದ್ದಾರೆ. ಬಳ್ಳಾರಿಯ 35 ಮಂದಿ ಹಾಗೂ ಚಿತ್ರದುರ್ಗದ 15 ಮಂದಿ ಸೇರಿ 246 ಕನ್ನಡಿಗರು ಶಾರ್ಜಾ ದಿಂದ ಕೊಚ್ಚಿಗೆ ಬಂದಿಳಿದಿದ್ದರು. 50 ಮಂದಿಗೆ ಅಲ್ಲಿಂದ ಬೆಂಗಳೂರಿಗೆ ಶಾಸಕ ಬಿ.ನಾಗೇಂದ್ರ ಅವರು ವಿಮಾನದ ವ್ಯವಸ್ಥೆ ಮಾಡಿದ್ದರು. ಗುರುವಾರ ಬೆಳಗ್ಗೆ ಅವರೆಲ್ಲ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಬಂದಿಳಿದರು. ಬೆಂಗಳೂರಿಗೆ ಬಂದಿಳಿದ ಕನ್ನಡಿಗರನ್ನು ನಾಗೇಂದ್ರ ಸ್ವಾಗತಿಸಿದರು.

## ಮೈಸೂರು ಅಭಿವೃದ್ಧಿಗೆ ಅನುದಾನಕ್ಕೆ ಸಿಎಂಗೆ ಮನವಿ: ಶಾಸಕ ತನ್ವೀರ್ ಸೇಠ್

**ಮೈಸೂರು:** ಮೈಸೂರು ನಗರದ ಅಭಿವೃದ್ಧಿಗೆ ಬಜೆಟ್‌ನಲ್ಲಿ ಪೂರಕವಾದ ಯೋಜನೆ ನೀಡುವಂತೆ ಹಾಗೂ ಅನುದಾನ ಒದಗಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕೋರಿದ್ದೇನೆಂದು ಶಾಸಕ ತನ್ವೀರ್ ಸೇಠ್ ತಿಳಿಸಿದರು.



ನಗರದಲ್ಲಿ ಗುರುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಾಜ್ಯದ ಆರ್ಥಿಕ ಪರಿಸ್ಥಿತಿಯೊಳಗೆ ನಾವು ಕೇಳದ್ದೆಲ್ಲಾ ಆಗುತ್ತಿದೆ. ಆದರೂ ನಿರೀಕ್ಷೆಯೂ ಬಹಳಷ್ಟಿದೆ. ಬೃಹತ್ ಮೈಸೂರು ಮಹಾನಗರಪಾಲಿಕೆ ರಚನೆ ಮಾಡಿದ್ದರಿಂದ ಅದಕ್ಕೆ ತಕ್ಕಂತೆ ಹಣಕಾಸು ಒದಗಿಸಬೇಕು. ವಿಷನ್ ಡಾಕ್ಯುಮೆಂಟ್ ಫಾರ್ ಮೈಸೂರು ಸಿದ್ಧಪಡಿಸಬೇಕು. ಇದಕ್ಕಾಗಿ ತಜ್ಞರ ಸಲಹೆ ಪಡೆಯಬೇಕು ಎಂದು ತಿಳಿಸಲಾಗಿದೆ.

ಜನಸಂಖ್ಯೆ ಹೆಚ್ಚಳಕ್ಕೆ ಸಂಬಂಧಿಸಿದಂತೆ ನಗರದಲ್ಲಿ ಮಾರುಕಟ್ಟೆಗಳೂ ಹೆಚ್ಚಾಗಬೇಕಾಗಿದೆ. ವಾಣಿಜ್ಯ ಸಂಕೀರ್ಣ, ಪಂಚತಾರಾ ಹೋಟೆಲ್, ಆಸ್ಪತ್ರೆ, ಶೈಕ್ಷಣಿಕ ಸಂಸ್ಥೆಗಳನ್ನು ನಿರ್ಮಿಸಬೇಕಾಗುತ್ತದೆ. ಇದಕ್ಕಾಗಿ ಭವಿಷ್ಯದ ಮೈಸೂರು ನಿರ್ಮಾಣಕ್ಕೆ ಸಂಬಂಧಿದಿಂತೆ ಪುಟ 2ಕ್ಕೆ

## ಕುರುಬಾರಹಳ್ಳಿಯಲ್ಲಿ ಮತ್ತೊಂದು ಭೂ ಅಕ್ರಮ: ಶಾಸಕ ಶ್ರೀವತ್ಸ

ಮೈಸೂರು: ಕ್ಷೇತ್ರದ ವ್ಯಾಪ್ತಿಯ ಕುರುಬಾರಹಳ್ಳಿ ವ್ಯಾಪ್ತಿಯಲ್ಲಿ ಮತ್ತೊಂದು ಅಕ್ರಮ ಬಹಿರಂಗಗೊಂಡಿದ್ದು, 200 ಕೋಟಿ ಮೌಲ್ಯದ ಆಸ್ತಿ ಕಬಳಿಕೆ ಬೆಳಕಿಗೆ ಬಂದಿದೆ ಎಂದು ಶಾಸಕ ಶ್ರೀವತ್ಸ ತಿಳಿಸಿದರು.

ತಮ್ಮ ಕರ್ತವ್ಯ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಅಕ್ರಮ ಕುರಿತು ವಿವರಿಸಿದ್ದು ಹೀಗೆ ಸರ್ಕಾರಿ ಅಧಿಕಾರಿಗಳ ಸಹಾಯದಿಂದಲೇ ಕಾರಂಜಿ ಕೆರೆ ರಸ್ತೆಯ ಬೆಟ್ಟದ ತಪ್ಪಲಿನ ಸರ್ವೇ ನಂ.4ರ 24.10 ಎಕರೆ ಸರ್ಕಾರಿ ಭೂಮಿಯನ್ನು ಸೇಲ್ ಅಗ್ರಿಮೆಟ್ ಮಾಡಿದ್ದು, ತಾಲ್ಲೂಕು



ನೊಂದಣಿ ಅಧಿಕಾರಿಗಳು ಸರ್ಕಾರಿ ಭೂಮಿ ಎಂದು ನಮೂದಿಸಿರುವ ಆರ್‌ಟಿಸಿ ಇದ್ದರೂ ಇದನ್ನು ನೊಂದಣಿ ಮಾಡಿರುವುದು ಹಲವು ಅನುಮಾನಗಳಿಗೆ ಎಡೆಮಾಡಿ ಕೊಟ್ಟಿದೆ ಎಂದು ತಿಳಿಸಿದರು. ಮೂಲ ದಾಖಲಾತಿಗಳಿಂದ ಸರ್ಕಾರದ ಆಸ್ತಿ ಕಬಳಿಕೆಯ ಸೇಲ್ ಅಗ್ರಿಮೆಂಟ್ ವರೆಗಿನ ದಾಖಲಾತಿ ಪ್ರತಿಗಳನ್ನು ನೀಡಿ ಸುದ್ದಿಗೋಷ್ಠಿ ನಡೆಸಿ ಅವರು, ಸರ್ವೆ ನಂಬರ್ 4ರ 24.10 ಎಕರೆಯನ್ನು ಮೈಸೂರು ಮಹಾರಾಜರ ಜಿಪಿಎ ಹೋಲ್ಡರ್ ಮೂಲಕ ಖರೀದಿ ಮಾಡಿರುವುದಾಗಿ ರೇವತಿ ಎಂ.ವುಚ್ಚಿಲ್ ತಮ್ಮಲ್ಲಿರುವ ದಾಖಲಾತಿ ಹೊಂದಿದ್ದರು. ಬಳಿಕ ತಾವು ಆರ್ಥಿಕ ಪುಟ 2ಕ್ಕೆ

### ಇಡಿ ತನಿಖೆಗೆ ಆಗ್ರಹ

ತಮ್ಮದಲ್ಲದ ಜಮೀನನ್ನು ಬೆಂಗಳೂರು ಮೂಲದವರಿಗೆ ಮಾರಾಟ ಮಾಡಲು 40 ಕೋಟಿ ರೂ. ಸೇಲ್ ಅಗ್ರಿಮೆಂಟ್ ನಡೆದಿದ್ದು, ಇಷ್ಟೊಂದು ವ್ಯವಹಾರ ನಡೆದಿರುವ ಕಾರಣ ಇಡಿ ತನಿಖೆ ನಡೆಸಬೇಕು. ರೇವತಿ ಹುಚೇಲ್ ಕುಟುಂಬಸ್ಥರ ಹೆಸರಿನಲ್ಲಿರುವ ವ್ಯಕ್ತಿಗಳು ಬೆಂಗಳೂರಿನ ಬಿ.ಎಸ್. ಡೆವಲಪರ್ಸ್ ಅಂಡ್ ಇನ್‌ಫ್ರಾಕ್ಚರ್, ಆದಿಶಾ ಡೆವಲಪರ್ಸ್ ಅವರಿಗೆ ಮಾರಾಟ ಮಾಡಲು ಮುಂದಾಗಿದ್ದಾರೆ. 200 ಕೋಟಿ ರೂ.ಮೌಲ್ಯದ ಆಸ್ತಿಯನ್ನು ಕಬಳಿಸುವ ಹಿಂದೆ ದೊಡ್ಡ ದೊಡ್ಡ ಕೈಗಳ ಪಾತ್ರ ಇರುವುದರಿಂದ ಉನ್ನತ ಮಟ್ಟದ ತನಿಖೆ ನಡೆಸಬೇಕು. ಕುರುಬಾರಹಳ್ಳಿಸರ್ವೆ ನಂಬರ್ ನಾಲ್ಕರ 24 ಎಕರೆ ಜಮೀನಿನ ವಿಚಾರದಲ್ಲಿ ತಹಸಿಲ್ದಾರ್ ಸರಿಯಾಗಿ ಕರ್ತವ್ಯ ನಿರ್ವಹಿಸದಿದ್ದರೆ ಕ್ರಮ ಆಗಬೇಕು. ಒಂದು ವೇಳೆ ದಾಖಲೆಗಳನ್ನು ಪರಿಶೀಲಿಸದೇ ಪುಟ 2ಕ್ಕೆ

# ಭಾರತಕ್ಕೆ ಕಚ್ಚಾತೈಲ ಪೂರೈಕೆಗೆ ರಷ್ಯಾ ಸಿದ್ಧ

## ಮಧ್ಯಪ್ರಾಚ್ಯ ಯುದ್ಧ ಹಿನ್ನೆಲೆಯಲ್ಲಿ ತೈಲ ಕೊರತೆ ಆತಂಕ ಪರಿಹಾರ ಸಾಧ್ಯತೆ

**ನವದೆಹಲಿ:** ಮಧ್ಯಪ್ರಾಚ್ಯದ ಯುದ್ಧದ ಹಿನ್ನೆಲೆಯಲ್ಲಿ ತೈಲ ಪೂರೈಕೆ ಮಾರ್ಗ ಹಾರ್ಮುಜ್ ಜಲಸಂಧಿ ಬಂದ್ ಆಗಿರುವುದು ಭಾರತೀಯ ಸರಕು ಸಾಗಣೆ ವಲಯ ಆರ್ಥಿಕ ಅಪಾಯ ಸಿಲ್ಲಿದೆ. 27 ಭಾರತೀಯ ಹಡಗುಗಳು ಆ ಪ್ರದೇಶದಲ್ಲಿ ಸಿಲುಕಿಕೊಂಡಿವೆ. 10,000 ಕೋಟಿಗೂ ಅಧಿಕ ಮೌಲ್ಯದ ಸರಕು ಅಪಾಯದಲ್ಲಿದೆ. ಇದರಿಂದ ತೈಲ ಕೊರತೆ ಆತಂಕದಲ್ಲಿದ್ದ ಭಾರತಕ್ಕೆ ರಷ್ಯಾ ಮತ್ತೆ ಆಪತ್ಬಾಂದವನಾಗಿ ಬಂದಿದೆ. ಭಾರತಕ್ಕೆ ಕಚ್ಚಾತೈಲ ಪೂರೈಕೆ ಹೆಚ್ಚಿಸಲು ಸಿದ್ಧ ಎಂದು ರಷ್ಯಾ ತಿಳಿಸಿದೆ.

ಸುಮಾರು 95 ಮಿಲಿಯನ್ ಬ್ಯಾರೆಲ್ (9.5 ಕೋಟಿ ಬ್ಯಾರೆಲ್) ರಷ್ಯನ್ ಕಚ್ಚಾ ತೈಲ ಈಗಾಗಲೇ ಭಾರತೀಯ ಸಮುದ್ರ ಗಡಿಯ ಸಮೀಪದಲ್ಲಿರುವ ಹಡಗುಗಳಲ್ಲಿ ಲಭ್ಯವಿದೆ. ಇದು ಕೆಲವು



ವಾರಗಳಲ್ಲಿ ಭಾರತಕ್ಕೆ ತಲುಪುವ ಸಾಧ್ಯತೆ ಇದೆ. ಈ ಮೂಲಕ ಮಧ್ಯಪ್ರಾಚ್ಯದಿಂದ ಉಂಟಾದ ಪೂರೈಕೆ ವ್ಯತ್ಯಯ ಭಾಗಶಃ ಸಮತೋಲನಗೊಳಿಸಲು ಭಾರತಕ್ಕೆ ಸಾಧ್ಯವಾಗಬಹುದು ಎನ್ನಲಾಗುತ್ತಿದೆ.

ಮೊದಲ ಹಂತವಾಗಿ 14 ಲಕ್ಷ ಬ್ಯಾರಲ್ (22.25 ಕೋಟಿ ಲೀಟರ್) ಹೊತ್ತ 2 ತೈಲ ಟ್ಯಾಂಕರ್‌ಗಳು ಭಾರತದತ್ತ ಹೊರಟಿವೆ. ಈ ವಾರದಲ್ಲೇ ಭಾರತ ತಲುಪುವ ಸಾಧ್ಯತೆಯಿದೆ. ತೈಲ ಸಮಸ್ಯೆ ತಲೆದೋರದಂತೆ ನೋಡಿಕೊಳ್ಳು ಕೇಂದ್ರ ಸರ್ಕಾರ ಮುಂದಾಗಿದೆ ಎನ್ನಲಾಗಿದೆ.

ಭಾರತದ ಇಂಡಿಯನ್ ನ್ಯಾಷನಲ್ ಶಿಪ್ ಓನರ್ಸ್ ಅಸೋಸಿಯೇಷನ್ ಪತ್ರ ಬರೆದಿದ್ದು, ಅದರಲ್ಲಿ 27 ಭಾರತೀಯ ಧ್ವಜವುಳ್ಳ ಹಡಗುಗಳು ವಿವಾದಿತ ಪ್ರದೇಶದಲ್ಲಿ ಸಿಲುಕಿಕೊಂಡಿರುವ ಬಗ್ಗೆ ಮತ್ತು 10,000 ಕೋಟಿ ರೂಪಾಯಿಗಿಂತಲೂ ಅಧಿಕ ಮೌಲ್ಯದ ಸರಕು ಸಾಗಣೆ ಆಸ್ತಿಗೆ ಅಪಾಯ ಎದುರಾಗಿರುವ ಬಗ್ಗೆ ಉಲ್ಲೇಖಿಸಲಾಗಿದೆ. ಹಾರ್ಮುಜ್ ಜಲಸಂಧಿ ಬಂದ್ ಮಾಡಿ, ಅದರ ಮೂಲಕ ಸಾಗುವ ಹಡಗುಗಳಿಗೆ ಬೆಂಕಿ ಹಚ್ಚುವ ಎಚ್ಚರಿಕೆಯನ್ನು ಇರಾನ್ ರೆವಲ್ಯೂಷನರಿ ಗಾರ್ಡ್ಸ್ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಭಾರತೀಯ ಹಡಗು ಮಾಲೀಕರು ಕೇಂದ್ರ ಸರ್ಕಾರದ ನೆರವು ಕೋರಿದ್ದಾರೆ.

### ಇರಾನ್ ಮೇಲಿನ ದಾಳಿಗೆ ಭಾರತದ ನೌಕಾನೆಲೆ ಬಳಸಿಲ್ಲ

**ನವದೆಹಲಿ:** ಇರಾನ್ ಮೇಲೆ ದಾಳಿ ಮಾಡಲು ಅಮೆರಿಕ ತನ್ನ ನೌಕಾನೆಲೆಗಳನ್ನ ಬಳಸುತ್ತಿದೆ ಎಂಬ ವರದಿಯನ್ನ ಭಾರತ ನಿರಾಕರಿಸಿದೆ.

ಈ ಮಧ್ಯೆ ಇರಾನ್ ಮೇಲೆ ದಾಳಿ ಮಾಡಲು ಅಮೆರಿಕ ಭಾರತೀಯ ನೌಕಾನೆಲೆಗಳನ್ನ ಬಳಸುತ್ತಿದೆ ಎಂದು ಯುಎಸ್‌ಎ ಮಾಜಿ ಸೇನಾ ಕರ್ನಲ್ ಡೌಗ್ಲಾಸ್ ಮ್ಯಾಕ್‌ಗ್ರೆಗರ್ ಹೇಳಿಕೆ ನೀಡಿದ್ದರು. ಇದಕ್ಕೆ ಪ್ರತಿಕ್ರಿಯೆ ನೀಡಿರುವ ಭಾರತ ವಿದೇಶಾಂಗ ಸಚಿವಾಲಯ, ಯುಎಸ್ ಅಧಿಕಾರಿ ಪುಟ 2ಕ್ಕೆ

## ರಾಜ್ಯಸಭೆ ಚುನಾವಣೆಗೆ ನಿತೀಶ್ ನಾಮಪತ್ರ ಸಲ್ಲಿಕೆ

### ಮುಖ್ಯಮಂತ್ರಿ ಸ್ಥಾನ ತ್ಯಜಿಸುವುದು ಖಚಿತ



**ಪಾಟ್ನಾ:** ನಿರೀಕ್ಷೆಯಂತೆ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಎನ್‌ಡಿಎ ರಾಜ್ಯಸಭಾ ಅಭ್ಯರ್ಥಿಯಾಗಿ ಪಾಟ್ನಾದಲ್ಲಿ ಗುರವಾರ ನಾಮಪತ್ರ ಸಲ್ಲಿಸಿದರು. ಕೇಂದ್ರ ಗೃಹ ಸಚಿವ ಅಮಿತ್ ಶಾ ಸಮ್ಮುಖದಲ್ಲಿ ನಿತೀಶ್ ಕುಮಾರ್, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್, ಉಪೇಂದ್ರ ಕುಶ್ವಾಹ ಮತ್ತು ಶಿವೇಶ್ ಕುಮಾರ್ ನಾಮಪತ್ರ ಸಲ್ಲಿಸಿದರು. ಪುಟ 2ಕ್ಕೆ

ವರ್ತಮಾನ
ಶುಕ್ರವಾರ
ಮಾರ್ಚ್ 6, 2026

ಮೊದಲ ಪುಟದಿಂದ

## ಇಂದು ಸಿದ್ದರಾಮಯ್ಯ ಲೆಕ್ಕಾಚಾರ ಬಹಿರಂಗ

ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳು, ಹಿಂದುಳಿದ ವರ್ಗಗಳ ಮೀಸಲಾತಿ ಅನುದಾನ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಭಾರೀ ನಿರೀಕ್ಷೆಗಳಿವೆ.

ಬಜೆಟ್ ಪೂರ್ವಭಾವಿ ಸಭೆಯಲ್ಲಿ ಈಗಾಗಲೇ ಆಯಾ ವಲಯದ ಸಂಘ–ಸಂಸ್ಥೆಗಳು, ಕೈಗಾರಿಕೆಗಳು, ತಜ್ಞರು ಮುಖ್ಯಮಂತ್ರಿ ಅವರಿಗೆ ತಮ್ಮ ಬೇಡಿಕೆಗಳೇನು? ನಿರೀಕ್ಷೆಗಳೇನು ಎನ್ನುವ ಪಟ್ಟಿ ಸಲ್ಲಿಸಿದ್ದಾರೆ. ಇವುಗಳಲ್ಲಿ ಮುಖ್ಯಮಂತ್ರಿ ಯಾವ ವಲಯಕ್ಕೆ ಹೆಚ್ಚು ಒತ್ತು ನೀಡುತ್ತಾರೆ? ಯಾವ ಬೇಡಿಕೆಗಳನ್ನು ಪರಿಗಣಿಸಿ ಬಜೆಟ್‌ನಲ್ಲಿ ಘೋಷಿಸುತ್ತಾರೆ ಎನ್ನುವುದು ಕಾದುನೋಡಬೇಕಿದೆ. ಶಿಕ್ಷಣ ವಲಯದಲ್ಲಿ ಪ್ರಮುಖವಾಗಿ ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವಿದ್ದಾಗ ಜಾರಿಗೆ ತಂದ ಶಿಕ್ಷಣ ಹಕ್ಕು ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸಿಎಂ ಅವರು ಬಜೆಟ್‌ನಲ್ಲಿ ಘೋಷಣೆ ಮಾಡಬಹುದು ಎನ್ನುವ ನಿರೀಕ್ಷೆ ಇದೆ.

ಸಿದ್ದರಾಮಯ್ಯ ಅವರು ಯುವಜನರನ್ನು ಕೃಷಿಯತ್ತ ಆಕರ್ಷಿಸಲು, ಸಾವಯವ ಮತ್ತು ಸಮಗ್ರ ಕೃಷಿ ಪದ್ಧತಿ ಉತ್ತೇಜನಕ್ಕೆ ಸಹಾಯಧನ ಕಾರ್ಯಕ್ರಮಗಳನ್ನು ಘೋಷಿಸುವ ನಿರೀಕ್ಷೆ ರೈತ ಮುಖಂಡರದ್ದಾಗಿದೆ. ಅದೇ ರೀತಿ ರೈತರಿಗೆ ಸಹಕಾರ ಸಂಘಗಳ ಮೂಲಕ ಶೂನ್ಯ ಬಡ್ಡಿದರದ ಸಾಲ ಪ್ರಮಾಣ ಹೆಚ್ಚಳ ಮಾಡಿದ್ದರೂ ಸಮರ್ಪಕ ಜಾರಿಯಾಗಿಲ್ಲ ಎಂಬ ಆರೋಪಗಳಿವೆ. ಈ ಬಾರಿ ಅನುಷ್ಠಾನಕ್ಕೆ ಹೆಚ್ಚಿನ ಅನುದಾನ ಮೀಸಲಿಡುವ ಸಾಧ್ಯತೆ ಇದೆ. ರಾಜ್ಯದ ವಿವಿಧ ಹಿಂದುಳಿದ ವರ್ಗಗಳು ಈ ಬಾರಿಯ ಬಜೆಟ್‌ನಲ್ಲಿ ತಮ್ಮ ಸಮುದಾಯಗಳ ಜನಸಂಖ್ಯೆಗೆ ಅನುಗುಣವಾಗಿ ಅನುದಾನ ದೊರೆಯುವ ಹಾಗೂ ಮೀಸಲಾತಿ ಹೆಚ್ಚಳದ ನಿರೀಕ್ಷೆ ಇಟ್ಟುಕೊಂಡಿವೆ. 2026– 27ನೇ ಸಾಲಿನ ಬಜೆಟ್‌ನಲ್ಲಿ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಮೀಸಲಾತಿಯಂತೆ ಹಿಂದುಳಿದ ವರ್ಗಗಳ ಪ್ರವರ್ಗ 1 ಮತ್ತು ಪ್ರವರ್ಗ 2ಎಗೆ ಅನುದಾನದಲ್ಲಿ ಪ್ರತ್ಯೇಕ ಮೀಸಲಾತಿ ಭರವಸೆ ಸಿಗಬಹುದೆಂಬ ನಿರೀಕ್ಷೆ ಹೊಂದಿವೆ.

### ಆರೋಗ್ಯ ಕ್ಷೇತ್ರಕ್ಕೆ ಒತ್ತು

ಮತ್ತು ಹಾಲಿ ಕಾಲೇಜುಗಳಲ್ಲಿ ಸಂಶೋಧನೆಗೆ ವಿಶೇಷ ಅನುದಾನ, ಆರೋಗ್ಯ ಡೇಟಾ ಡಿಜಿಟಲೀಕರಣ ಸೇರಿ ಇನ್ನೂ ಹಲವು ಯೋಜನೆಗಳನ್ನು ಈ ಬಾರಿಯ ಬಜೆಟ್‌ನಲ್ಲಿ ಪ್ರಕಟಿಸುವ ನಿರೀಕ್ಷೆ ಇದೆ ಎನ್ನಲಾಗಿದೆ.

### ಬಸ್ ನಿಲ್ದಾಣಗಳಲ್ಲಿ ನೇರ ಪ್ರಸಾರ

ಡಿಜಿಟಲ್ ಡಿಸ್ಪ್ಲೇ ಪರದೆಗಳ ಮೂಲಕ ನೇರ ಪ್ರಸಾರ ಮಾಡಲು ಮುಂದಾಗಿದೆ. ವಿಧಾನಸೌಧದಲ್ಲಿ ಬಜೆಟ್ ಮಂಡನೆ ಹಾಗೂ ಬಳಿಕ ನಡೆಯಲಿರುವ ಮುಖ್ಯಮಂತ್ರಿಗಳ ಪತ್ರಿಕಾಗೋಷ್ಠಿ ನೇರ ಪ್ರಸಾರವನ್ನು ಬಸ್ ನಿಲ್ದಾಣಗಳಲ್ಲಿ ಜನರು ವೀಕ್ಷಿಸಬಹುದು.

### ಇರಾನ್ ಮೇಲಿನ ದಾಳಿಗೆ ಭಾರತದ ನೌಕಾನೆಲೆ ಬಳಸಿಲ್ಲ

ಹೇಳಿಕೆ ಶುದ್ಧ ಸುಳ್ಳು ಎಂದು ಸ್ಪಷ್ಟಪಡಿಸಿದೆ.

ಭಾರತೀಯ ನೌಕಾನೆಲೆ ಹಾಗೂ ಬಂದರುಗಳನ್ನ ಅಮೆರಿಕಾ ನೌಕಾಪಡೆ ಬಳಸುತ್ತಿದೆ ಎಂದು ಅಮೆರಿಕಾ ಮೂಲದ ಖಾಸಗಿ ಚಾನೆಲ್ ನಲ್ಲಿ ಹೇಳಲಾಗುತ್ತಿರುವ ವಿಚಾರ ಸುಳ್ಳು. ಇಂತಹ ಆಧಾರರಹಿತ ಮತ್ತು ಕಟ್ಟುಕಥೆಗಳ ವಿರುದ್ಧ ನಾವು ನಿಮ್ಮನ್ನು ಎಚ್ಚರಿಸುತ್ತೇವೆ ಎಂದು ಹೇಳಿದೆ.

ಇರಾನ್ ಉದ್ವಿಗ್ನತೆಯಿಂದಾಗಿ ಮಧ್ಯಪ್ರಾಚ್ಯ ಈಗಾಗಲೇ ರಣರಂಗವಾಗಿದೆ. ಈ ಮಧ್ಯೆ ಹಲವು ದೇಶಗಳು ಉಭಯ ಕಡೆಗಳಿಗೂ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಬೆಂಬಲ ಸೂಚಿಸಿವೆ. ಆದರೆ, ಭಾರತ ಮಾತ್ರ ಈ ಯುದ್ಧದಲ್ಲಿ ಈವರೆಗೂ ಬಹಿರಂಗವಾಗಿ ಯಾರ ಪರ ವಹಿಸದೆ ತಟಸ್ಥ ನಿಲುವು ಕಾಯ್ದುಕೊಂಡಿದೆ.

### ರಾಜ್ಯಸಭೆ ಚುನಾವಣೆಗೆ ನಿತೀಶ್ ನಾಮಪತ್ರ ಸಲ್ಲಿಕೆ

ನಾಮಪತ್ರ ಸಲ್ಲಿಕೆಗೂ ಮೊದಲು ಎಕ್ಸ್‌ಲ್ಲಿ ಪೋಸ್ಟ್ ಮಾಡಿದ್ದ ನಿತೀಶ್ ಕುಮಾರ್ ಅವರು, ನನ್ನ ಸಂಸದೀಯ ಪ್ರಯಾಣದ ಆರಂಭದಲ್ಲೇ ಬಿಹಾರ ವಿಧಾನಸಭೆಯ ಎರಡೂ ಸದನಗಳ ಹಾಗೂ ಸಂಸತ್ತಿನ ಎರಡೂ ಸದನಗಳ ಸದಸ್ಯನಾಗುವ ಬಯಕೆಯನ್ನು ಹೊಂದಿದ್ದೆ. ಈ ಆಕಾಂಕ್ಷೆಯಂತೆ ಈ ಬಾರಿ ನಡೆಯುತ್ತಿರುವ ಚುನಾವಣೆಯಲ್ಲಿ ರಾಜ್ಯಸಭೆ ಸದಸ್ಯನಾಗಲು ನಾನು ಬಯಸುತ್ತೇನೆ ಎಂದು ಬರೆದಿದ್ದಾರೆ.

ನಿಮ್ಮೊಂದಿಗಿನ ನನ್ನ ಬಾಂಧವ್ಯವು ಭವಿಷ್ಯದಲ್ಲಿಯೂ ಸಹ ಉಳಿಯುತ್ತದೆ. ಅಭಿವೃದ್ಧಿ ಹೊಂದಿದ ಬಿಹಾರವನ್ನು ನಿರ್ಮಿಸಲು ನಿಮ್ಮೊಂದಿಗೆ ಕೆಲಸ ಮಾಡುವ ನನ್ನ ಸಂಕಲ್ಪ ಎಂದೆಂದಿಗೂ ಸ್ಥಿರವಾಗಿರುತ್ತದೆ ಎಂದು ನಾನು ನಿಮಗೆ ಸಂಪೂರ್ಣ ಭರವಸೆ ನೀಡುತ್ತೇನೆ. ರಚನೆಯಾಗಲಿರುವ ಹೊಸ ಸರ್ಕಾರಕ್ಕೆ ನನ್ನ ಸಂಪೂರ್ಣ ಸಹಕಾರ ಮತ್ತು ಮಾರ್ಗದರ್ಶನವಿರುತ್ತದೆ ಎಂದು ಹೇಳಿದ್ದಾರೆ.

ಎರಡು ದಶಕಗಳಿಗೂ ಹೆಚ್ಚು ಕಾಲ ನೀವು ನಿರಂತರವಾಗಿ ನನ್ನ ಮೇಲೆ ನಿಮ್ಮ ನಂಬಿಕೆ ಮತ್ತು ಬೆಂಬಲವನ್ನು ಇರಿಸಿದ್ದೀರಿ. ನಿಮ್ಮ ನಂಬಿಕೆ ಮತ್ತು ಬೆಂಬಲದ ಶಕ್ತಿಯಿಂದ ಇಂದು ಬಿಹಾರವು ಅಭಿವೃದ್ಧಿಯಾಗುತ್ತಿದೆ. ಈ ಕಾರಣಕ್ಕೆ ಹಲವಾರು ಸಂದರ್ಭಗಳಲ್ಲಿ ನಾನು ನಿಮಗೆ ನನ್ನ ಕೃತಜ್ಞತೆಯನ್ನು ವ್ಯಕ್ತಪಡಿಸಿದ್ದೇನೆ ಎಂದು ಬರೆದಿದ್ದಾರೆ.

### ವಾಣಿಜ್ಯ ಸಿಲಿಂಡರ್ ದರ ಹೆಚ್ಚಳ

ಸಿಲಿಂಡರ್ 4,532 ರೂ.ಗಳಿಗೆ ಮಾರಾಟವಾಗುತ್ತಿದೆ. ಇಂಡಿಯನ್ ಆಯಿಲ್ ಪ್ರಧಾನ ಕಚೇರಿ ನಿರ್ಧಾರದಿಂದ ಹೋಟೆಲ್‌ಗಳು, ವಾಣಿಜ್ಯ ಬಳಕೆದಾರರಿಗೆ ದರ ಹೆಚ್ಚಳವಾಗುವ ಸಾಧ್ಯತೆಯಿದೆ ಎಂದು ಹೇಳಲಾಗುತ್ತಿದೆ.

### ನಾಳೆ ಸಿಎಂ ಮೈಸೂರು ಪ್ರವಾಸ

ವಿಮಾನದಲ್ಲಿ ಮಂಗಳೂರು ವಿಮಾನನಿಲ್ದಾಣಕ್ಕೆ ತೆರಳುವರು.

## ಸಮಾನ ಅವಕಾಶಕ್ಕೆ ರಾಜೇಶ್ ಒತ್ತಾಯ

ಮೈಸೂರು: ಪರಿಶಿಷ್ಟ ಸಮುದಾಯಕ್ಕೆ ಒಳಮೀಸಲಾತಿ ಕಲ್ಪಿಸುವ ನ್ಯಾ.ನಾಗಮೋಹನದಾಸ್ ವರದಿಯು ಅವೈಜ್ಞಾನಿಕವಾಗಿದ್ದು, ವರದಿ ಅನ್ವಯ ಮಾಡಲಾದ ಮೀಸಲಾತಿ ನಿಗದಿಯನ್ನು ರಾಜ್ಯ ಸರ್ಕಾರ ನಿಷೇಧಿಸಬೇಕು ಎಂದು ದಲಿತ ಮಹಾಸಭಾ ಅಧ್ಯಕ್ಷ ಎಸ್.ರಾಜೇಶ್ ಒತ್ತಾಯಿಸಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ವರದಿಯಿಂದ ಎಸ್ಸಿ ಸಮುದಾಯವು ಒಡೆದ ಕನ್ನಡಿಯಂತಾಗಿದೆ. ಪಕ್ಷಪಾತಿ ಧೋರಣೆ ಅನುಸರಿಸಲಾಗಿದೆ. ಇದರಿಂದ ಕೆಲ ಮುಖಂಡರು ಪರಸ್ಪರ ದ್ವೇಷ ಕಾರುತ್ತಿದ್ದಾರೆ. ಇದನ್ನು ತಡೆಯುವ ಮೂಲಕ ಎಲ್ಲರಿಗೂ ಸಮಾನ ಅವಕಾಶ ದೊರಕಿಸಲು ಸರ್ಕಾರ ಮುಂದಾಗಬೇಕು ಎಂದರು. ಸುದ್ದಿಗೋಷ್ಠಿಯಲ್ಲಿ ದಲಿತ ಮಹಾಸಭಾದ ಅಶೋಕಪುರಂ ಮಹೇಶ್, ಪುಟ್ಟರಾಜು, ಮರಿದೇವಯ್ಯ, ನಂಜುಂಡಸ್ವಾಮಿ, ಶಿವಶಂಕರಮೂರ್ತಿ ಹಾಜರಿದ್ದರು.



## ಕೆಎಸ್‌ಐಸಿ ಉಳಿವಿಗೆ ಬಾರುಕೋಲು ಚಳವಳಿ



ಮೈಸೂರು: ಜಿಲ್ಲೆಯ ತಿ.ನರಸೀಪುರದ ಕೆಎಸ್‌ಐಸಿ ಕಾರ್ಖಾನೆ ಉಳಿವಿ ಗಾಗಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ನೇತೃತ್ವದಲ್ಲಿ ಬಾರುಕೋಲು ಚಳವಳಿ ನಡೆಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ಹೊರಹಾಕಿದರು. ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, 1912ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಈ ಕಾರ್ಖಾನೆ ಸ್ಥಾಪನೆ ಮಾಡಿರುತ್ತಾರೆ. ಈ ಭಾಗದ ರೈತರ ಹಿತರಕ್ಷಣೆ, ಉದ್ಯೋಗ ಸೃಷ್ಟಿ, ಮೈಸೂರು ರೇಷ್ಮೆ ಪರಂಪರೆ ಉಳಿವಿಗಾಗಿ ಈ ಕಾರ್ಖಾನೆಯನ್ನು ಪ್ರಾರಂಭ ಮಾಡಿರುತ್ತಾರೆ. ಆದ್ದರಿಂದ ಇಂತಹ ಕಾರ್ಖಾನೆಯನ್ನು ಕ್ರೀಡಾಂಗಣ ನಿರ್ಮಾಣಕ್ಕಾಗಿ 5. ಎಕರೆ 8ಗುಂಟೆ ಜಮೀನನ್ನು ಪಡೆಯಲು ಹೊರಟುವುದು ರೈತ, ಕಾರ್ಮಿಕ ವಿರೋಧಿ ನಿರ್ಣಯವಾಗಿದೆ. ಮೈಸೂರ್ ಸಿಲ್ಕ್ ಎಂಬ ಪರಂಪರೆ ಅಳಿವಿಗೆ ಕಾರ ಣವಾಗುತ್ತದೆ. ಪರಂಪರೆ ಉಳಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು ತಕ್ಷಣ ಜಿಲ್ಲಾಡಳಿತ ಮತ್ತು ಕ್ರೀಡಾ ಇಲಾಖೆ ಇಲ್ಲಿರುವ ಗೊಂದಲವನ್ನು ನಿವಾರಣೆ ಮಾಡಿ ರೇಷ್ಮೆ ಬೆಳೆಗಾರ ರೈತರ ರಕ್ಷಣೆಗೆ ಹೆಚ್ಚುವರಿ ಗಮನವನ್ನು ಸರ್ಕಾರ ಹರಿಸಬೇಕೆಂದು ಒತ್ತಾಯಿಸಿದರು. ಸರ್ಕಾರ ಮತ್ತು ಜಿಲ್ಲಾಡಳಿತ ಹಠಕ್ಕೆ ಬಿದ್ದು ಕ್ರೀಡಾಂಗಣ ನಿರ್ಮಾಣಕ್ಕೆ ಮುಂದಾದರೆ ಚಳುವಳಿಯನ್ನು ತೀವ್ರಗೊಳಿಸಿ ಕೆಎಸ್‌ಐಸಿ ಜಾಗವನ್ನು ಉಳಿಸಿಕೊಳ್ಳಲು ಟಿ.ನರಸೀಪುರದಿಂದ ಮೈಸೂರಿನ ಜಿಲ್ಲಾಧಿಕಾರಿಯ ಕಚೇರಿಗೆ ಪಾದಯಾತ್ರೆಯ ಮೂಲಕ ಜನ ಜಾಗೃತಿ ಮಾಡಿ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

# ಹುಂಡಿಯಲ್ಲಿ 3.41 ಕೋಟಿ

## ಮಾದಪ್ಪನ ಬೆಟ್ಟದಲ್ಲಿ ಹುಂಡಿ ಹಣ ಏಣಿಕೆ | ದಾಖಲೆ ಮಟ್ಟದ ಹಣ ಸಂಗ್ರಹ

ಹನೂರು : ರಾಜ್ಯದ ಪ್ರಸಿದ್ಧ ಧಾರ್ಮಿಕ ಯಾತ್ರಾಸ್ಥಳ ಮಲೆ ಮಹದೇಶ್ವರ ಬೆಟ್ಟದ ಶ್ರೀ ಕ್ಷೇತ್ರ ಮಲೆ ಮಾದೇಶ್ವರ ಅಭಿವೃದ್ಧಿ ಪ್ರಾಧಿಕಾರದ ಇತಿಹಾಸದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಹುಂಡಿ ಹಣ ಎಣಿಕೆಯಲ್ಲಿ ಕೇವಲ 28 ದಿನಗಳ ಅವಧಿಯಲ್ಲಿ ದಾಖಲೆಯ 3.41 ಕೋಟಿ ರೂ. ಸಂಗ್ರಹವಾಗಿದ್ದು ಇತಿಹಾಸ ಪುಟ ಸೇರಿಕೊಂಡಿದೆ.

ಮ. ಬೆಟ್ಟದ ಬಸ್ ನಿಲ್ದಾಣದ ಬಳಿಯ ವಾಣಿಜ್ಯ ಸಂಕೀರ್ಣದಲ್ಲಿ ಸಾಲೂರು ಬೃಹನ್ ಮಠದ ಅಧ್ಯಕ್ಷರಾದ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮಿ, ಪ್ರಾಧಿಕಾರದ ಕಾರ್ಯದರ್ಶಿ ಎ ಇ ರಘು ರವರ ಸಮ್ಮುಖದಲ್ಲಿ ಹುಂಡಿಗಳನ್ನು ತೆರೆಯಲಾಯಿತು. ಬಳಿಕ ಸಿಸಿ ಕ್ಯಾಮೆರಾ ಕಣ್ಗಾವಲಿನಲ್ಲಿ ಎಣಿಕೆ ಕಾರ್ಯ ಪ್ರಾರಂಭಿಸಲಾಯಿತು. ಎಣಿಕೆ ಕಾರ್ಯವು ಸಂಜೆ 8 ಗಂಟೆಯವರೆಗೂ ನಡೆಯಿತು. ಮಹಾಶಿವರಾತ್ರಿ ಜಾತ್ರಾ ಮಹೋತ್ಸವ, ಸರ್ಕಾರಿ ರಜಾ ದಿನ, ಅಮಾವಾಸ್ಯೆ, ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿಯ ಯೋಜನೆಗಳಲ್ಲೊಂದಾದ ಶಕ್ತಿ ಯೋಜನೆಯ ಮೂಲಕ ಉಚಿತ ಪ್ರಯಾಣದ ಹಿನ್ನೆಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ದೇವಸ್ಥಾನಕ್ಕೆ ಭೇಟಿ ನೀಡಿದ್ದರಿಂದ ಹರಕೆಯ ರೂಪದಲ್ಲಿ 3, 41,44,208 ನಗದು 71 ಗ್ರಾಂ ಚಿನ್ನ ಹಾಗೂ 2,050 ಬೆಳ್ಳಿ ಪದಾರ್ಥಗಳನ್ನು ಹುಂಡಿಗೆ ಹಾಕಿದ್ದಾರೆ. ಇ ಹುಂಡಿಯಿಂದ 65,5,620 ಚಲಾವಣೆಯಲ್ಲಿ ಇಲ್ಲದ 2000 ಮುಖಬೆಲೆಯ 6 ನೋಟುಗಳು, ವಿದೇಶಿ 19 ನೋಟುಗಳನ್ನು ಹುಂಡಿಯಲ್ಲಿ ಹಾಕಿದ್ದಾರೆ. ಶ್ರೀ ಮಲೆ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಇ ರಘು,ಉಪ ಕಾರ್ಯದರ್ಶಿ ಚಂದ್ರಶೇಖರ್, ನಾಮ ನಿರ್ದೇಶಿತ ಸದಸ್ಯರುಗಳಾದ ಮರಿಸ್ವಾಮಿ, ,ಲೆಕ್ಕಾದೀಕ್ಷಕರಾದ ಗುರುಮಲ್ಲಯ್ಯ, ಲೆಕ್ಕಪತ್ರ ಸಲಹೆಗಾರರಾದ ಮಹದೇವು, ಜಿಲ್ಲಾಡಳಿತ ಕಚೇರಿಯ ಶ್ವೇತ, ಕೊಳ್ಳೇಗಾಲ ಬ್ಯಾಂಕ್ ಆಫ್ ಬರೋಡ ವ್ಯವಸ್ಥಾಪಕರು, ಪೊಲೀಸ್ ಅಧಿಕಾರಿಗಳು ಹಾಗೂ ಪ್ರಾಧಿಕಾರದ ಸಿಬ್ಬಂದಿ ಎಣಿಕೆ ಕಾರ್ಯದಲ್ಲಿ ಭಾಗವಹಿಸಿದ್ದರು.



### ವಿಶೇಷ ವ್ಯವಸ್ಥೆಯಿಂದ ಹೆಚ್ಚಿದ ಹುಂಡಿ ಹಣ

ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದಲ್ಲಿ ಕಳೆದ ಎರಡು ವರ್ಷಗಳಿಂದ ಭಕ್ತಾದಿಗಳ ಅನುಕೂಲಕ್ಕಾಗಿ ನೂರಾರು ಕೋಟಿ ವೆಚ್ಚದಲ್ಲಿ ಅಗತ್ಯ ಮೂಲಭೂತ ಸೌಲಭ್ಯ ಒದಗಿಸಲು ಕ್ಯೂ ಲೈನ್, ಡಾರ್ಮೆಟ್ರಿ, ವಜ್ರಮಲೆ ವಸತಿಗೃಹ, ವಿಶೇಷ ದಾಸೋಹ ಸೇರಿದಂತೆ ಇನ್ನಿತರ ಮೂಲಭೂತ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿದೆ ಇದಲ್ಲದೆ ಭಕ್ತಾದಿಗಳ ಅನುಕೂಲಕ್ಕೆ ತಕ್ಕಂತೆ ಮಲೆ ಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಭಕ್ತಾದಿಗಳಿಗೆ ಶುದ್ಧ ಕುಡಿಯುವ ನೀರು ನೆರಳಿನ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಕಲ್ಪಿಸಲಾಗಿದೆ. ಇದಲ್ಲದೆ ಭಕ್ತಾದಿಗಳಿಗೆ ನೀಡುವ ಪ್ರಸಾದದಲ್ಲಿ ಬದಲಾವಣೆ ತರಲಾಗಿದ್ದು ಗುಣಮಟ್ಟದ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿದೆ. ಇದರಿಂದ ಶ್ರೀ ಕ್ಷೇತ್ರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸುತ್ತಿರುವುದರಿಂದ ಈ ಬಾರಿಯ ಹುಂಡಿ ಎಣಿಕೆಯಲ್ಲಿ ದಾಖಲೆಯ ಮೊತ್ತ ಸಂಗ್ರಹವಾಗಿದೆ.

ಕಳೆದ ಎರಡು ವರ್ಷಗಳಿಂದ ಶ್ರೀ ಕ್ಷೇತ್ರದಲ್ಲಿ ಮುಖ್ಯಮಂತ್ರಿಗಳು ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಭಕ್ತಾದಿಗಳಿಗೆ ಹೆಚ್ಚಿನ ಸೌಲಭ್ಯ ಕಲ್ಪಿಸಿ ಕೊಡುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ ಇದಲ್ಲದೆ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಶಾಸಕರ ಪ್ರೋತ್ಸಾಹದಿಂದ ಕಾಮಗಾರಿಗಳು ಪೂರ್ಣ ಹಂತಕ್ಕೆ ತಲುಪಿದೆ ಜಾತ್ರಾ ಮಹೋತ್ಸವ ಸಂದರ್ಭದಲ್ಲಿ ಭಕ್ತಾದಿಗಳಿಗೆ ಜಿಲ್ಲಾಧಿಕಾರಿಗಳು ಹಾಗೂ ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಸಕಲ ವ್ಯವಸ್ಥೆಗಳನ್ನು ಮಾಡಲಾಗುತ್ತಿದೆ ಈ ಬಾರಿ ಜಾತ್ರಾ ಮಹೋತ್ಸವದಲ್ಲಿ ದಸರಾ ಮಾದರಿಯಲ್ಲಿ ವಿಶೇಷ ವಿದ್ಯುತ್ ದೀಪಾಲಂಕಾರ ಮಾಡಿದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಿದ್ದರು. ಕಳೆದ ಶಿವರಾತ್ರಿ ಜಾತ್ರಾ ಮಹೋತ್ಸವದಲ್ಲಿ ಮೂರು ಕೋಟಿ 30 ಲಕ್ಷ ಸಂಗ್ರಹವಾಗಿತ್ತು. ಈ ಬಾರಿಯ ಹುಂಡಿ ಎಣಿಕೆಯಲ್ಲಿ ದಾಖಲೆಯ ಮೊತ್ತ ಸಂಗ್ರಹವಾಗಿದೆ ಮುಂದಿನ ದಿನಗಳಲ್ಲಿ ಭಕ್ತಾದಿಗ ಅಗತ್ಯತೆಗೆ ತಕ್ಕಂತೆ ಮೂಲಭೂತ ಸೌಲಭ್ಯ ಒದಗಿಸಲು ಕ್ರಮ ವಹಿಸಲಾಗುವುದು

**ರಘು** ಪ್ರಾಧಿಕಾರದ ಕಾರ್ಯದರ್ಶಿ

ಮೊದಲ ಪುಟದಿಂದ

### ಲೋಕಾ ಶಾಕ್

ದಾಳಿ ಮಾಡಿದೆ. ಯಾದಗಿರಿಯ ವಿದ್ಯುತ್ ಇಲಾಖೆಯ ಉಪ ವಿದ್ಯುತ್ ಪರಿವೀಕ್ಷಕ ವೀರೇಶ್ ಹಿರೇಮಠ, ಮಂಡ್ಯದ ಲೋಕೋಪಯೋಗಿ ಇಲಾಖೆ ಮಂಡ್ಯ ಉಪವಿಭಾಗದ ಎಎಇ ಎಸ್ ಸತೀಶ್, ಧಾರವಾಡದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾ ಎಂ.ಕೆ.ಸುರಕೋಡ, ಹಾಸನ ಮಹಾನಗರ ಪಾಲಿಕೆಯ ಎಎಇ ಎಂ.ಸಿ ಸತ್ಯನಾರಾಯಣ, ಮೈಸೂರಿನ, ಜಲಭವನದ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಎಎಇ ಮತ್ತು ಇಇ ಆಸಿಫ್ ಇಕ್ಬಾಲ್ ಹಾಗೂ ವಿಜಯಪುರದ ಕೃಷ್ಣಾ ಭಾಗ್ಯ ಜಲ ನಿಗಮದಲ್ಲಿ ಕಿರಿಯ ಇಂಜಿನಿಯರ್ ಆಗಿರುವ ಪ್ರಕಾಶ್ ಪಿ.ಜಿ ಮನೆಗಳ ಮೇಲೂ ಲೋಕಾಯುಕ್ತ ದಾಳಿ ನಡೆಸಿ ಪರಿಶೀಲನೆ ನಡೆಸುತ್ತಿದೆ. ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್, ಜೂನಿಯರ್ ಎಂಜಿನಿ ಯರ್, ಉಪ ವಿದ್ಯುತ್ ನಿರೀಕ್ಷಕರು ಮತ್ತು ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಯಂತಹ ಹುದ್ದೆಗಳನ್ನು ಹೊಂದಿರುವ ಅಧಿಕಾರಿಗಳನ್ನು ಗುರಿಯಾಗಿರಿಸಿಕೊಂಡ ದಾಳಿ ನಡೆದಿದೆ ಎಂದು ಲೋಕಾಯುಕ್ತ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಹುಬ್ಬಳ್ಳಿಯ ಅಕ್ಷಯ ಕಾಲೋನಿಯಲ್ಲಿರುವ ಕರ್ನಾ ಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ಲಿಮಿಟೆಡ್‌ನ ಮುಖ್ಯ ಎಂಜಿನಿಯರ್ ವಸಂತಪ್ಪ ನಾಯಕ್ ಅವರ ನಿವಾಸದಲ್ಲಿ ಅಧಿಕಾರಿಗಳು ಶೋಧ ನಡೆಸಿದ್ದಾರೆ.

### ಗೊಂದಲ ಇರುವುದು ನಿಜ

ಬಿಜೆಪಿಯಲ್ಲಿರುವ ಸಣ್ಣ ಪುಟ್ಟ ಲೋಪದೋಷಗಳನ್ನು ಸರಿಪಡಿಸುವ ಪ್ರಯತ್ನ ಮಾಡುತ್ತಿದ್ದೇವೆ ಎಂದರು.

ಮೊದಲ ಪುಟದಿಂದ

### ಲೋಕಾಯುಕ್ತ ಅಧಿಕಾರಿಗಳಿಗೆ ಬಾಗಿಲು ತೆರೆಯದೇ ಹೈಡ್ರಾಮ

ಪ್ರವೇಶಿಸಲು ಪ್ರಯತ್ನಿಸಿದರು. ಲೋಕಾಯುಕ್ತ ಡಿವೈಎಸ್‌ಪಿ ಸುರೇಶ್ ಕುಮಾರ್, ಇನ್ಸ್‌ಪೆಕ್ಟರ್ ಶಿಲ್ಪಾ ನೇತೃತ್ವದಲ್ಲಿ ದಾಳಿ ನಡೆಯಿತು. ಮುಂಜಾನೆ 5.15 ಕ್ಕೆ ಸತ್ಯನಾರಾಯಣ ಮನೆಯೊಳಗೆ ಪರಿಶೀಲನೆ ಮಾಡಲು ಲೋಕಾಯುಕ್ತ ಅಧಿಕಾರಿಗಳು ಬರುತ್ತಿದ್ದಂತೆ ಮನೆಯ ಲೈಟ್ ಆಫ್ ಮಾಡಿದ ಸತ್ಯನಾರಾಯಣ ಅವರು, ಬಾಗಿಲು ತೆರೆಯದ ಲೋಕಾಯುಕ್ತ ಅಧಿಕಾರಿಗಳನ್ನ ಸತಾಯಿಸಿದ್ದಾರೆ. ಸತತ 2 ಗಂಟೆ ಕಾಲ ಮನೆಯ ಬಾಗಿಲು ತೆಗೆಸಲು ಲೋಕಾಯುಕ್ತ ಅಧಿಕಾರಿಗಳು ಹರಸಾಹಸ ಮಾಡಿದರು. ಬಿಲ್ಡಿಂಗ್ ಹತ್ತಿ ಕಿಟಕಿ ಬಡಿದು, ಕೂಗಿದರು ಸತ್ಯನಾರಾಯಣ ಬಾಗಿಲು ತೆರೆಯಲಿಲ್ಲ. ಲೋಕಾಯುಕ್ತ ಎಸ್ಪಿ ನಂದಿನಿ ಕೂಟ ಭೇಟಿ ನೀಡಿ ಪರಿಶೀಲಿಸಿದರು. ಕೊನೆಗೆ ಅಧಿಕಾರಿಗಳು ಮೊದಲ ಮಹಡಿಗೆ ಹತ್ತಿ ಮನೆಯೊಳಗೆ ಪ್ರವೇಶಿಸಿದರು.

### ಮೈಸೂರು ಅಭಿವೃದ್ಧಿಗೆ ಅನುದಾನಕ್ಕೆ ಸಿಎಂಗೆ ಮನವಿ

ನಿಯಮಾವಳಿ ಮಾಡಬೇಕು. ಮೈಸೂರಿನಲ್ಲಿ ಮೆಟ್ರೊ ರೈಲಿಗೆ ಈಗಿನಿಂದಲೇ ಸಿದ್ಧತೆ ನಡೆಸಬೇಕಾಗುತ್ತದೆ. ನಗರ ಬೆಳೆಯುತ್ತಿದೆ. ಅದಕ್ಕೆ ತಕ್ಕಂತೆ ಹೆಚ್ಚಿನ ಕೆಎಸ್‌ಆರ್‌ಟಿಸಿ ಬಸ್‌ಗಳ ಅಗತ್ಯವಿದೆ. ಇದೆಲ್ಲವನ್ನೂ ಮುಖ್ಯಮಂತ್ರಿಯವರ ಗಮನಕ್ಕೆ ತರಲಾಗಿದೆ ಎಂದು ಹೇಳಿದರು. ಯಾವುದೇ ಸ್ಥಾನ ಅಥವಾ ಅಧಿಕಾರ ಶಾಶ್ವತವಲ್ಲ. ಅಧಿಕಾರ ಹಂಚಿಕೆ ಕುರಿತು ಬಹಿರಂಗವಾಗಿ ಮಾತನಾಡುವುದು ಸರಿಯಲ್ಲ. ಬಿಜೆಪಿ ದುರಾಡಳಿತ ಹಾಗೂ ಭ್ರಷ್ಟಾಚಾರದಿಂದ ಜನರು ಬೇಸತ್ತು ಕಾಂಗ್ರೆಸ್‌ಗೆ ಅಧಿಕಾರಿ ಕೊಟ್ಟಿದ್ದಾರೆ. ಚೆನ್ನಾಗಿ ಆಡಳಿತ ನಡೆಸಿಕೊಂಡು ಹೋಗಬೇಕಷ್ಟೆ. ನನ್ನ ಸಾಮರ್ಥ್ಯವನ್ನು ಪರಿಗಣಿಸಿ ಪಕ್ಷ ನೀಡುವ ಯಾವುದೇ ಜವಾಬ್ದಾರಿ ನಿರ್ವಹಿಸಲು ನಾನು ಸಿದ್ಧವಿದ್ದೇನೆ ಎಂದು ತಿಳಿಸಿದರು.

## ಎಸ್ಸಿ ಮೀಸಲಿಗಾಗಿ ಮಡಿವಾಳರು ಒಗ್ಗೂಡಿ



ಮೈಸೂರು: ಮಡಿವಾಳ ಸಮುದಾಯದವರು ಮಡಿವಾಳ ಜನಾಂಗವನ್ನು ಪರಿಶಿಷ್ಟಜಾತಿಗೆ ಸೇರಿಸಲು ಒತ್ತಾಯಿಸುವ ನಿಟ್ಟಿನಲ್ಲಿ ಒಗ್ಗೂಡಿ ಹೋರಾಟ ನಡೆಸಬೇಕಿದೆ ಎಂದು ಕರ್ನಾಟಕ ರಾಜ್ಯ ಮಡಿವಾಳ ಮಾಚಿದೇವ ನಿಗಮದ ಅಧ್ಯಕ್ಷ ಸಿ.ನಂಜಪ್ಪ ತಿಳಿಸಿದರು.

ನಗರದ ನಜರಬಾದ್‌ನಲ್ಲಿರುವ ಅತಿಥಿಗೃಹದಲ್ಲಿ ಕರ್ನಾಟಕ ರಾಜ್ಯ ಮಡಿವಾಳರ ಸಂಘ ಹಾಗೂ ಎಸ್.ಸಿ.ಹೋರಾಟ ಸಮಿತಿ ನೇತೃತ್ವದಲ್ಲಿ ಮಾ.12ರಂದು ಬೆಂಗಳೂರಿನಲ್ಲಿ ನಡೆಯುತ್ತಿರುವ ಮೀಸಲಾತಿ ಹೋರಾಟದ ಪೂರ್ವಭಾವಿ ಸಭೆಗೆ ಎಲ್ಲರನ್ನು ಆಹ್ವಾನಿಸಿ ಅವರು ಮಾತನಾಡಿದರು. ಮಡಿವಾಳ ಜನಾಂಗವನ್ನು ಪರಿಶಿಷ್ಠಜಾತಿಗೆ ಸೇರಿಸಲು ಒತ್ತಾಯಿಸುವ ನಿಟ್ಟಿನಲ್ಲಿ ಸಮುದಾಯವರು ನಮ್ಮ ನಡುವಿನ ಮನಸ್ತಾಪಗಳನ್ನು ಮರೆತು ಒಗ್ಗೂಡಿ ದನಿ ಮಾಡಬೇಕಿದೆ. ರಾಜ್ಯದಲ್ಲಿ ಮಡಿವಾಳ ಮೇಲೆ ನಿರಂತರ ದೌರ್ಜನ್ಯ ಇತ್ಯಾದಿ ಘಟನೆಗಳು ನಿತ್ಯ ನಡೆಯುತ್ತಿದ್ದು, ಇದನ್ನು ತಡೆಯಲು ಕ್ರಮವಹಿಸುವ ನಿಟ್ಟಿನಲ್ಲಿಯೂ ನಾವೆಲ್ಲರೂ ಒಂದಾಗಬೇಕಿದೆ. ಇತರ ಸಮುದಾಯಗಳಲ್ಲಿಯೂ ಸಮುದಾಯದ ವಿಚಾರ ಬಂದಾಗ ತೋರುವ ಶಕ್ತಿ ಪ್ರದರ್ಶನ ನಮ್ಮಲ್ಲೂ ಆಗಬೇಕಿದೆ ಎಂದು ಹೇಳಿದರು.

ಬೆಂಗಳೂರಿನ ಯಶವಂತಪುರದ ಬಿಎಂಟಿಸಿ ನಿಲ್ದಾಣ ಸಮೀಪದ ವೈಮುನಿಯಪ್ಪ ಕಲ್ಯಾಣ ಮಂಟಪದಲ್ಲಿ ಮ.11.30ಕ್ಕೆ ಆಯೋಜಿಸಿರುವ ಪೂರ್ವಭಾವಿ ಸಭೆಯಲ್ಲಿ ಎಲ್ಲರೂ ಭಾಗವಹಿಸುವಂತೆ ಹೇಳಿದರು. ಪ್ರಧಾನ ಕಾರ್ಯದರ್ಶಿ ಪ್ರಕಾಶ್, ರಾಜ್ಯ ನಿರ್ದೇಶಕ ಮಹಾಲಿಂಗು, ಜಿಲ್ಲಾ ಖಜಾಂಚಿ ಮಂಜು, ಗೌ.ಅಧ್ಯಕ್ಷ ವೀರಣ್ಣ, ಮೈಸೂರು ಜಿಲ್ಲಾಧ್ಯಕ್ಷ ಧರ್ಮರಾಜ್, ಪ್ರಧಾನ ಕಾರ್ಯದರ್ಶಿ ಬಸವರಾಜು, ಮೈಸೂರು ನಗರಾಧ್ಯಕ್ಷ ವರುಣ ಮಹದೇವ್, ಪ್ರಧಾನ ಕಾರ್ಯದರ್ಶಿ ಎಂ.ನಂಜುಂಡಯ್ಯ, ಎಚ್.ಡಿ.ಕೋಟೆ ತಾಲ್ಲೂಕು ಅಧ್ಯಕ್ಷ ಚಂದ್ರು, ಟಿ.ನರಸೀಪುರ ಅಧ್ಯಕ್ಷ ಕುರುಬೂರು ಮಹದೇವಸ್ವಾಮಿ, ನಂಜನಗೂಡು ಅಧ್ಯಕ್ಷ ಎಚ್.ಡಿ.ಪ್ರಸನ್ನ, ಹುಣಸೂರು ಅಧ್ಯಕ್ಷ ಶಂಕರ್, ಮುಖಂಡರಾದ ಮಹೇಶ್, ಹೇಮಂತ್, ಸಿದ್ದಪ್ಪಾಜಿ, ಜಯರಾಮ್, ದುದ್ದಗೆರೆ ಶಿವಣ್ಣ ಇನ್ನಿತರರು ಉಪಸ್ಥಿತರಿದ್ದರು.

## ಕುರುಬಾರಹಳ್ಳಿಯಲ್ಲಿ ಮತ್ತೊಂದು ಭೂ ಅಕ್ರಮ: ಶಾಸಕ ಶ್ರೀವತ್ಸ

ಸಂಕಷ್ಟಕ್ಕೆ ಸಿಲುಕಿರುವ ಕಾರಣ 24.10 ಭೂಮಿಯನ್ನು ಮಾರಾಟ ಮಾಡಲು ಅನುಮತಿ ನೀಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು. ಆದರೆ, ಸರ್ಕಾರ ರೇವತಿ ಮನವಿ ತಿರಸ್ಕರಿಸಿತು. ಬಳಿಕ ರೇವತಿ ಸರ್ಕಾರದ ನಿರ್ಧಾರ ಪ್ರಶ್ನಿಸಿ ಹೈಕೋರ್ಟ್ ಮೊರೆ ಹೋಗಿದ್ದರು. ಹೈಕೋರ್ಟ್, ಅರ್ಜಿದಾರರ ಅಭಿಪ್ರಾಯ ಆಲಿಸಿ, ಈ ಬಗ್ಗೆ ಪರಿಶೀಲನೆ ನಡೆಸುವಂತೆ ಸರ್ಕಾರಕ್ಕೆ ಸೂಚನೆ ನೀಡಿತು. ತರುವಾಯ ಸರ್ಕಾರ 24.10 ಎಕರೆಯಲ್ಲಿ 8 ಎಕರೆಯನ್ನು ಮಾತ್ರ ಕೃಷಿ ಭೂಮಿಯಾಗಿ ಮಾರಾಟ ಮಾಡುವಂತೆ ತಾಕೀತು ಮಾಡಿ ಇದಕ್ಕೆ ಅನುಮತಿ ನೀಡಿದೆ ಎಂದರು. 1985ರಲ್ಲಿ ಅಂದಿನ ತಹಶೀಲ್ದಾರ್ ರೇವತಿ ಎಂ.ವುಚ್ಚಿಲ್ ತಮ್ಮ ಮಾಲೀಕತ್ವದ ಭೂಮಿ ಎಂದು ಹೇಳುತ್ತಿದ್ದ 24.10 ಎಕರೆ ಜಮೀನು ಸರ್ಕಾರಕ್ಕೆ ಸೇರಿರುವ ಆಸ್ತಿಯಾಗಿದೆ ಎಂಬ ಆದೇಶವಿದೆ. ಹೀಗಿರುವಾಗ ಕೆಲವು ವರ್ಷಗಳ ನಂತರ ರೇವತಿ ಎಂ.ವುಚ್ಚಿಲ್ ಸಹ ನಿಧನರಾಗಿದ್ದಾರೆ. ರೇವತಿ ಎಂ.ವುಚ್ಚಿಲ್ ಕುಟುಂಬಸ್ಥರು 1985ರಲ್ಲಿ ತಹಶೀಲ್ದಾರ್ ಹೊರಡಿಸಿರುವ ಸರ್ಕಾರದ ಆಸ್ತಿ ಎಂಬ ಆದೇಶವನ್ನು ಪ್ರಶ್ನಿಸಿ 2017ರಲ್ಲಿ ಹೈಕೋರ್ಟ್ ಮೊರೆ ಹೋದರು. ಆದರೆ, ಕೆಲವು ತಿಂಗಳ ನಂತರ ನ್ಯಾಯಾಲಯದಿಂದ ದಾವೆ ವಾಪಾಸು ಪಡೆದಿದ್ದಾರೆ. 2025ರ ಆ.4ರಂದು 24.10 ಎಕರೆ ಭೂಮಿ ಸರ್ಕಾರಕ್ಕೆ ಸೇರಿದೆ ಎಂದು ದಿಢೀರ್ ಮರು ಆದೇಶವನ್ನು ತಹಸೀಲ್ದಾರ್ ಹೊರಡಿಸಿದರು. ಹೀಗಿರುವಾಗ 2025ರ ಡಿ.12ರಂದು ಕುಟುಂಬಸ್ಥರು ಬೆಂಗಳೂರಿನ ಬಿ.ಎಸ್.ಡೆವಲಪರ್ ಅಂಡ್ ಇನ್ಫ್ರಾಸ್ಟ್ರಕ್ಚರ್ ಮತ್ತು ಆದೀಶ ಡೆವಲಪರ್ಸ್ ಗೆ 40 ಕೋಟಿಗೆ ಮಾರಾಟ ಮಾಡಲು ಸೇಲ್ ಅಗ್ರಿಮೆಂಟ್ ಮಾಡಿದ್ದಾರೆ. ಮಾತ್ರವಲ್ಲದೆ, ಸಬ್ ರಿಜಿಸ್ಟಾರ್ ಕಚೇರಿಯಲ್ಲಿ ನೋಂದಣಿ ಮಾಡಿಸಿದ್ದಾರೆ ಎಂದು ತಿಳಿಸಿದರು. ಆದರೆ, ಆರ್ ಟಿಸಿಯಲ್ಲಿ ಸರ್ಕಾರಕ್ಕೆ ಸೇರಿದ ಭೂಮಿ ಎಂದು ಉಲ್ಲೇಖವಾಗಿದ್ದರೂ ಸಬ್ ರಿಜಿಸ್ಟಾರ್ ಹೇಗೆ ಸೇಲ್ ಅಗ್ರಿಮೆಂಟ್ ರಿಜಿಸ್ಟರ್ ಮಾಡಿಕೊಟ್ಟರು. ಚಾಮುಂಡಿಬೆಟ್ಟದ ತಪ್ಪಲಿನ ಸರ್ವೆ ನಂಬರ್ 4ಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿರುವ ಆದೇಶದ ಆಧಾರದ ಮೇಲೆ ಸಬ್ ರಿಜಿಸ್ಟಾರ್ ಕಚೇರಿಯಲ್ಲಿ ನೋಂದಣಿ ಮಾಡಿಸಿದ್ದಾರೆ. ಆದರೆ, ಸದರಿ ಭೂಮಿಯು ಹೈಕೋರ್ಟ್ ಆದೇಶಕ್ಕೆ ಸಂಬಂಧಿಸಿದ್ದಲ್ಲ. ಆದರೂ ಸರ್ಕಾರದ ಆಸ್ತಿಯನ್ನು ಮಾರಾಟ ಮಾಡಲು ಮುಂದಾಗಿದ್ದಾರೆ. ಯಾವ ಆಧಾರದ ಮೇಲೆ ಸಬ್ ರಿಜಿಸ್ಟಾರ್ ಸೇಲ್ ಅಗ್ರಿಮೆಂಟ್ ರಿಜಿಸ್ಟರ್ ಮಾಡಿಸಿದ್ದಾರೆ ಪ್ರಶ್ನಿಸಿದರು. ಈ ಸಂಬಂಧ ಸಂಪೂರ್ಣ ತನಿಖೆಯಾಗಬೇಕು. ಅಲ್ಲದೆ, ಇದರಲ್ಲಿ ಕಾನೂನು ಬಾಹಿರವಾಗಿ ಸರ್ಕಾರ ಜಾಗ ಮಾರಾಟಕ್ಕೆ ಯತ್ನಿಸಿದ ಇದರ ಹಿಂದಿರುವ ಪ್ರಭಾವಿಗಳ ಪತ್ತೆಗೆ ವಿಶೇಷ ತಂಡ ರಚಿಸಬೇಕೆಂದು ಈ ಮೂಲಕ ಒತ್ತಾಯಿಸುತ್ತಿರುವುದಾಗಿ ಹೇಳಿದರು. ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಕೆ.ಆರ್.ಕ್ಷೇತ್ರದ ಅಧ್ಯಕ್ಷ ಗೋಪಾಲರಾಜ್ ಅರಸ್, ವಕ್ತಾರ ಮೋಹನ್, ಮಾಧ್ಯಮ ವಕ್ತಾರ ಮಹೇಶ್ ರಾಜ್ ಅರಸ್, ಮಾಜಿ ಮೇಯರ್ ಶಿವಕುಮಾರ್, ಕೆ.ಆರ್.ಮುಖಂಡರಾದ ಪ್ರದೀಪ್ ಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

### ಇಡಿ ತನಿಖೆಗೆ ಆಗ್ರಹ

**ಸೇಲ್ ಅಗ್ರಿಮೆಂಟ್‌ಗೆ ಸಹಿ ಹಾಕಿರುವ ಉಪ ನೋಂದಣಾಧಿಕಾರಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ದಾಖಲೆಗಳು ಮತ್ತು ಡೆವಲಪರ್ಸ್‌ಗಳ ಹಿನ್ನಲೆ ನೋಡಿದರೆ ದೊಡ್ಡ ವ್ಯಕ್ತಿಗಳ ಕೈವಾಡ ಇರಬಹುದು. ವಿಧಾನಸಭಾ ಅಧಿವೇಶನ ನಡೆಯುತ್ತಿರುವ ಕಾರಣ ಮುಖ್ಯಮಂತ್ರಿ, ನಗರಾಭಿವೃದ್ಧಿ, ಕಂದಾಯ ಸಚಿವ, ಮುಖ್ಯ ಕಾರ್ಯದರ್ಶಿಗೆ ದಾಖಲೆಗಳ ಸಮೇತ ದೂರು ನೀಡುತ್ತಿದ್ದೇನೆ. ಅದೇ ರೀತಿ ಇಡಿ ತನಿಖೆ ಕೋರಿ ಪತ್ರ ಬರೆಯಲಾಗುವುದು ಎಂದು ಶ್ರೀವತ್ಸ ಹೇಳಿದರು**

## ಕೈಗೆ ರಾಜ್ಯ ಸರ್ಕಾರವೇ ಆಕ್ಸಿಜನ್: ಹರ್ಷವರ್ಧನ್




ಮೈಸೂರು: ಗ್ಯಾರಂಟಿಯನ್ನೂ ಸಮರ್ಪಕವಾಗಿ ಅನುಷ್ಠಾನಗೊಳಿಸದ ಕಾಂಗ್ರೆಸ್ ಪಕ್ಷಕ್ಕೆ ರಾಜ್ಯ ಸರ್ಕಾರವೇ ಆಕ್ಸಿಜನ್ ಆಗಿದೆ ಎಂದು ಮಾಜಿ ಶಾಸಕ ಹರ್ಷವರ್ಧನ್ ವಾಗ್ದಾಳಿ ನಡೆಸಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ದಲಿತರಿಗೆ ಸೇರಿದ ಎಸ್‌ಸಿಎಸ್‌ಪಿ, ಟಿಎಸ್ ಪಿ ಹಣವನ್ನು ಅನ್ಯ ಕಾರ್ಯಗಳಿಗೆ ಬಳಿಸಿಕೊಂಡು ಎಸ್ಸಿ ಎಸ್ಟಿಗಳಿಗೆ ಮೀಸಲಿಟ್ಟ ಹಣವನ್ನು ದುರುಪಯೋಗ ಮಾಡಿಕೊಂಡು ರಾಜ್ಯ ಸರ್ಕಾರ ಹಗಲು ದರೋಡೆ ಮಾಡುತ್ತಿದೆ. ರಾಜ್ಯ ಸರ್ಕಾರ ಸತತ 3 ವರ್ಷಗಳಿಂದ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕಾಗಿ ಎಸ್ಸಿಎಸ್ಪಿ, ಟಿಎಸ್ಪಿಯ 39 ಸಾವಿರ ಕೋಟಿ ಹಣವನ್ನು ದುರುಪಯೋಗ ಮಾಡಿಕೊಂಡಿದೆ. ಇದೀಗ ಮತ್ತೊಂದು ಬಜೆಟ್ ಮಂಡನೆಯ ಹೆಸರಿನಲ್ಲಿ ಮತ್ತೊಮ್ಮೆ 15 ಸಾವಿರ ಕೋಟಿಯನ್ನು ಮುಳುಗಿಸಲು ಸಜ್ಜಾಗಿದ್ದಾರೆ. 7ಡಿ ಕಾಯ್ದೆಯನ್ನು ಕಿತ್ತುಹಾಕಿ ಎಸ್ಸಿಎಸ್ ಪಿ, ಟಿಎಸ್ ಪಿ ಕಾಯ್ದೆಯನ್ನು ಬಲಪಡಿಸಿದ್ದೆ ಕಾಂಗ್ರೆಸ್ ಎಂದು ಬೆನ್ನು ತಟ್ಟಿಕೊಳ್ಳುವ ಸಿಎಂ ಸಿದ್ದರಾಮಯ್ಯ ಒಳಗೊಳಗೆ 7ಸಿ ಮೂಲಕ ದಲಿತರ ಮೀಸಲು ನಿಧಿಗೆ ಕನ್ನ ಹಾಕಿದ್ದಾರೆಂದರು.

5 ಗ್ಯಾರಂಟಿ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನಕ್ಕೆ ಬಂದಿಲ್ಲ. ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆ ಫಲಾನುಭವಿಗಳ ಡೇಟಾ ಕೊಡುತ್ತಿಲ್ಲ. ಹಾಗಾದರೆ ಗ್ಯಾರಂಟಿ ಯೋಜನೆಗೆ ಬಳಕೆ ಮಾಡಿಕೊಳ್ಳುತ್ತಿರುವ ಹಣ ಎಲ್ಲಿಗೆ ಹೋಗುತ್ತಿದೆ ಎಂದು ಪ್ರಶ್ನೆ ಮಾಡಿದರು. ಕಾಂಗ್ರೆಸ್ ಪಕ್ಷಕ್ಕೆ ರಾಜ್ಯ ಸರ್ಕಾರ ಆಕ್ಸಿಜನ್ ರೀತಿ ಆಗಿದೆ. ಇನ್ನು ಇತ್ತೀಚಿಗೆ ಅಧಿಕಾರಿ ಹಂಚಿಕೆ ವಿಚಾರ ಮುನ್ನೆಲೆಗೆ ಬಂದಾಗ ದಲಿತ ಸಿಎಂ ಕೂಗು ಕೇಳಿ ಬಂತು ಈ ಸಂದರ್ಭದಲ್ಲಿ ಒಳ ಮೀಸಲಾತಿ ಮೂಲಕ ದಲಿತರನ್ನೇ ಒಡೆದು ಆಳುವ ಷಡ್ಯಂತ್ರ ಮಾಡಿದ್ದಾರೆ. ಈಗ ಎಡ,ಬಲ ಅಂತ ನಮ್ಮನಮ್ಮಲ್ಲೇ ತಂದು ಹಾಕುವ ಕೆಲಸವನ್ನು ಸಿದ್ದರಾಮಯ್ಯ ಮಾಡಿದ್ದಾರೆ. ಈ ಮೂಲಕ ದಲಿತರಿಗೆ ಒಂದು ರೀತಿ ಅನ್ಯಾಯ ಮಾಡಿದ್ದಾರೆ ಎಂದು ಕಿಡಿಕಾರಿದರು. ಬಿಜೆಪಿ ಮಾಜಿ ಉಪಮೇಯರ್ ವಿ.ಶೈಲೇಂದ್ರ, ನಗರ ವಕ್ತಾರ ಎಂ.ಮೋಹನ್, ವಕ್ತಾರ ಮಹೇಶ್ ರಾಜೇ ಅರಸ್ ಇನ್ನಿತರರು ಉಪಸ್ಥಿತರಿದ್ದರು.

# ಮಾ. 6 ರಂದು ಚಾಮರಾಜನಗರ ವಿಶ್ವವಿದ್ಯಾನಿಲಯದಲ್ಲಿ 18ನೇ ಕನ್ನಡ ವಿಜ್ಞಾನ ಸಮ್ಮೇಳನ ಉದ್ಘಾಟನೆ

ಚಾಮರಾಜನಗರ: 18ನೇ ಕನ್ನಡ ವಿಜ್ಞಾನ ಸಮ್ಮೇಳನವು ಮಾರ್ಚ್ 6 ಹಾಗೂ 7 ರಂದು ನಡೆಯಲಿದ್ದು, ಸಮ್ಮೇಳನದ ಉದ್ಘಾಟನಾ ಸಮಾರಂಭವು ಮಾರ್ಚ್ 6 ರಂದು ಬೆಳಿಗ್ಗೆ 10.30 ಗಂಟೆಗೆ ಚಾಮರಾಜನಗರ ವಿಶ್ವವಿದ್ಯಾನಿಲಯದ ಆವರಣದಲ್ಲಿ ನಡೆಯಲಿದೆ.

ಕಾಸರಗೋಡು ಕೇರಳ ಕೇಂದ್ರೀಯ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಸಿದ್ದು ಪಿ. ಅಲಗೂರ್ ಅವರು ವಿಜ್ಞಾನ ಮೇಳವನ್ನು ಉದ್ಘಾಟಿಸುವರು. ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಎಂ.ಆರ್. ಗಂಗಾಧರ್ ಅವರು ಅಧ್ಯಕ್ಷತೆ ವಹಿಸುವರು.



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಶರಣಪ್ಪ ಬಿ. ಹಲಸೆ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ತಿರುವನಂತಪುರದ ಐ.ಐ.ಎಸ್.ಟಿ ಕುಲಾಧಿಪತಿಗಳು, ಬೆಂಗಳೂರು ಇಸ್ರೋ ಖ್ಯಾತ ವಿಜ್ಞಾನಿ ಹಾಗೂ ಪದ್ಮಭೂಷಣ ಮತ್ತು ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತರಾದ ಡಾ. ಬಿ.ಎನ್. ಸುರೇಶ್ ಅವರು ದಿಕ್ಸೂಚಿ ಭಾಷಣ ಮಾಡುವರು. ಹಾವೇರಿ ವಿಶ್ವವಿದ್ಯಾನಿಲಯದ ಕುಲಪತಿಗ ಳಾದ ಪ್ರೊ. ಸುರೇಶ್ ಹೆಚ್ ಜಂಗಮಶೆಟ್ಟಿ, ಕೊಡಗು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಆಶೋಕ ಎಸ್. ಅಲೂರ್, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಬಿ. ರಮೇಶ್ ಅವರು ಗೌರವ ಉಪಸ್ಥಿತಿ ವಹಿಸುವರು.

ಭಾರತ ರತ್ನ ಡಾ. ಸರ್ ಎಂ. ವಿಶ್ವೇಶ್ವರಯ್ಯ ವಿಜ್ಞಾನ ಪುರಸ್ಕಾರ, ಭಾರತ ರತ್ನ ಡಾ. ಸಿ.ಎನ್.ಆರ್. ರಾವ್ ವಿಜ್ಞಾನ ಪುರಸ್ಕಾರ, ಭಾರತ ರತ್ನ ಡಾ. ಭೀಮ್ ಸೇನ್ ಜೋಶಿ ಸಾಂಸ್ಕೃತಿಕ ವಿಜ್ಞಾನ ಪುರಸ್ಕಾರ ಪ್ರಶಸ್ತಿ ಪ್ರಧಾನ ಮಾಡಲಾಗುವುದು. ಮೈಸೂರು ಜೆ.ಎಸ್.ಎಸ್. ಮಹಾ ವಿದ್ಯಾಪೀಠ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನ, ಕೊಳ್ಳೇಗಾಲದ ಮಾನಸ ಶಿಕ್ಷಣ ಟ್ರಸ್ಟ್ ಕಾರ್ಯದರ್ಶಿ ಡಾ. ಎಸ್. ದತ್ತೇಶ್ ಕುಮಾರ್, ಮೈಸೂರಿನ ಶಾರದ ವಿಲಾಸ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಕೆ. ಹನುಮಂತಚಾರ್ ಜೋಶಿ ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.


# ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಮೈಸೂರಿನಲ್ಲಿ... ಮೈ-ಸೂರು

**ಮೈಸೂರು ಅಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ಪ್ರತಿಷ್ಠಿತ ಬಡಾವಣೆಗಳಲ್ಲಿ ಮೂಲೆ ಮತ್ತು ಮಧ್ಯಂತರ ನಿವೇಶನಗಳ ಇ-ಹರಾಜು ಪ್ರಕಟಣೆ ಸಂಖ್ಯೆ/ಮೈ.ಅ.ಪ್ರಾ/ಇ.ಹ.ಪ್ರ/02/2025-26 ದಿನಾಂಕ: 27.02.2026,ರ ಪ್ರಕಟಣೆ ಹೊರಡಿಸಲು ಉದ್ದೇಶಿಸಿರುವ ವಿವರ.**

1) ಇ-ಹರಾಜನ್ನು ಆರಂಭಿಸುವ ದಿನಾಂಕ: 11.03.2026 ರ ಭಾರತೀಯ ಕಾಲಮಾನ ಸಂಜೆ 6.00 ಗಂಟೆಯ ನಂತರ
2) ಕ್ರ.ಸಂ.1 ರಿಂದ 50 ರವರೆಗೆ ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ: 23.03.2026 ರ ಭಾರತೀಯ ಕಾಲಮಾನ ಸಂಜೆ 5.00 ಗಂಟೆಯವರೆಗೆ ಮತ್ತು ಇ-ಹರಾಜು ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ: 26.03.2026 ರ ಭಾರತೀಯ ಕಾಲಮಾನ ಮಧ್ಯಾಹ್ನ 11.00 ಗಂಟೆಯಿಂದ ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 27.03.2026 ರ ಭಾರತೀಯ ಕಾಲಮಾನ ಸಂಜೆ 4.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ).
3) ಕ್ರ.ಸಂ.51 ರಿಂದ 100 ರವರೆಗೆ ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ: 23.03.2026 ರ ಭಾರತೀಯ ಕಾಲಮಾನ ಸಂಜೆ 5.00 ಗಂಟೆಯವರೆಗೆ ಮತ್ತು ಇ-ಹರಾಜು ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ: 30.03.2026 ರ ಭಾರತೀಯ ಕಾಲಮಾನ ಮಧ್ಯಾಹ್ನ 11.00 ಗಂಟೆಯಿಂದ ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 01.04.2026 ರ ಭಾರತೀಯ ಕಾಲಮಾನ ಸಂಜೆ 4.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ).
4) ಕ್ರ.ಸಂ.101 ರಿಂದ 150 ರವರೆಗೆ ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ: 23.03.2026 ರ ಭಾರತೀಯ ಕಾಲಮಾನ ಸಂಜೆ 5.00 ಗಂಟೆಯವರೆಗೆ ಮತ್ತು ಇ-ಹರಾಜು ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ: 02.04.2026 ರ ಭಾರತೀಯ ಕಾಲಮಾನ ಮಧ್ಯಾಹ್ನ 11.00 ಗಂಟೆಯಿಂದ ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 04.04.2026 ರ ಭಾರತೀಯ ಕಾಲಮಾನ ಸಂಜೆ 4.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ).
5) ಕ್ರ.ಸಂ.151 ರಿಂದ 200 ರವರೆಗೆ ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ: 23.03.2026 ರ ಭಾರತೀಯ ಕಾಲಮಾನ ಸಂಜೆ 5.00 ಗಂಟೆಯವರೆಗೆ ಮತ್ತು ಇ-ಹರಾಜು ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ: 06.04.2026ರ ಭಾರತೀಯ ಕಾಲಮಾನ ಮಧ್ಯಾಹ್ನ 11.00 ಗಂಟೆಯಿಂದ ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 07.04.2026 ರ ಭಾರತೀಯ ಕಾಲಮಾನ ಸಂಜೆ 4.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ).

| ಕ್ರ ಸಂ | ಬಡಾವಣೆ ಹೆಸರು | ನಿವೇಶನ ಸಂಖ್ಯೆ | ಮಧ್ಯಂತರ/ ಮೂಲೆ | ರಸ್ತೆ ಅಭಿಮುಖ ದಿಕ್ಕು ಹಾಗೂ ಅಗಲ (ಮೀ.ಗಳಲ್ಲಿ) | ಅಳತೆ ಮೀ ಗಳಲ್ಲಿ | | ವಿಸ್ತೀರ್ಣ ಚ.ಮೀ ಗಳಲ್ಲಿ | ಚ.ಮೀ.ಗೆ ನಿಗಧಿ ಪಡಿಸಿರುವ ದರ | ನಿವೇಶನದ ಮೌಲ್ಯ (ರೂ.ಲಕ್ಷ ಗಳಲ್ಲಿ) |
|---|---|---|---|---|---|---|---|---|---|
| | | | | | ಉ-ದ | ಪೂ-ಪ | | | |
| | ಮೂಲೆ ಹಾಗೂ ಮಧ್ಯಂತರ ನಿವೇಶನಗಳು | | | | | | | | |
| 1 | ನಾಚಹನಹಳ್ಳಿ-ಕುಪ್ಪಲೂರು 3ನೇ ಹಂತ 'ಡಿ' ಬ್ಲಾಕ್ | 99 | ಮೂಲೆ | ಪಶ್ಚಿಮ 9.00 | 13.00 | 18.00 | 234.00 | 79256.00 | 185.46 |
| 2 | ಜೆ.ಪಿ.ನಗರ 1ನೇ ಹಂತ 'ಎಫ್' ಬ್ಲಾಕ್ | 72 | ಮೂಲೆ | ಪೂ-ಉ 9.00 | 24.00 | (18.00+19.00)/2 | 444.00 | 79256.00 | 351.90 |
| 3 | ದಟ್ಟಗಳ್ಳಿ 3ನೇ ಹಂತ | 754 | ಮೂಲೆ | 12-9 ಪೂ-ಉ | 11.20 | 18.00 | 201.06 | 64986.00 | 131.02 |
| 4 | ದಟ್ಟಗಳ್ಳಿ 3ನೇ ಹಂತ | 1025/ಬಿ | ಮಧ್ಯಂತರ | ಪೂರ್ವ 9.00 | 6.00 | 9.00 | 54.00 | 58003.00 | 31.32 |
| 5 | ದಟ್ಟಗಳ್ಳಿ 3ನೇ ಹಂತ | 1050/ಬಿ | ಮಧ್ಯಂತರ | ಪಶ್ಚಿಮ 9.00 | 6.00 | 9.00 | 54.00 | 58003.00 | 31.32 |
| 6 | ದಟ್ಟಗಳ್ಳಿ 3ನೇ ಹಂತ | 1229 | ಮಧ್ಯಂತರ | ದಕ್ಷಿಣ 9.00 | 12.00 | 9.00 | 108.00 | 58003.00 | 62.64 |
| 7 | ದಟ್ಟಗಳ್ಳಿ 3ನೇ ಹಂತ | 1615 | ಮೂಲೆ | 18-9 ಉ-ಪೂ | 12.00 | 9.00 | 108.00 | 64986.00 | 70.18 |
| 8 | ದಟ್ಟಗಳ್ಳಿ 3ನೇ ಹಂತ | 1616 | ಮೂಲೆ | 9.00 ಪೂ-ದ | 12.00 | 9.00 | 108.00 | 64986.00 | 70.18 |
| 9 | ದಟ್ಟಗಳ್ಳಿ 3ನೇ ಹಂತ | 1631 | ಮೂಲೆ | 12-9 ಪೂ-ಉ | 12.00 | 8.50 | 102.00 | 64986.00 | 66.29 |
| 10 | ದಟ್ಟಗಳ್ಳಿ 3ನೇ ಹಂತ | 1631/ಎಫ್ | ಮೂಲೆ | 9.00 ಉ-ಪ | 12.00 | (13.00+14.60)/2 | 165.60 | 64986.00 | 107.62 |
| 11 | ದಟ್ಟಗಳ್ಳಿ 3ನೇ ಹಂತ | 1632 | ಮೂಲೆ | 12-9 ಪೂ-ದ | 12.00 | 8.50 | 102.00 | 64986.00 | 66.29 |
| 12 | ದಟ್ಟಗಳ್ಳಿ 3ನೇ ಹಂತ | 1632/ಎ | ಮಧ್ಯಂತರ | ದಕ್ಷಿಣ 9.00 | 12.00 | 9.00 | 108.00 | 58003.00 | 62.64 |
| 13 | ದಟ್ಟಗಳ್ಳಿ 3ನೇ ಹಂತ | 1632/ಎಫ್ | ಮೂಲೆ | 9.00 ಪ-ದ | 12.00 | (11.00+13.00)/2 | 144.00 | 64986.00 | 93.58 |
| 14 | ದಟ್ಟಗಳ್ಳಿ 3ನೇ ಹಂತ | 1638/ಎ | ಮಧ್ಯಂತರ | ಉತ್ತರ 9.00 | 9.00 | 6.00 | 54.00 | 58003.00 | 31.32 |
| 15 | ದಟ್ಟಗಳ್ಳಿ 3ನೇ ಹಂತ | 1638/ಸಿ | ಮೂಲೆ | 9.00 ಉ-ಪ | 9.00 | (9.50+7.80)/2 | 77.85 | 64986.00 | 50.59 |
| 16 | ದಟ್ಟಗಳ್ಳಿ 3ನೇ ಹಂತ | 1644 | ಮೂಲೆ | 12-9 ಪೂ-ಉ | 9.00 | (5.40+6.00)/2 | 51.30 | 64986.00 | 33.34 |
| 17 | ದಟ್ಟಗಳ್ಳಿ 3ನೇ ಹಂತ | 1645 | ಮೂಲೆ | 12-9 ಪೂ-ದ | 9.00 | 5.40 | 48.60 | 64986.00 | 31.58 |
| 18 | ದಟ್ಟಗಳ್ಳಿ 3ನೇ ಹಂತ | 1651/ಡಿ | ಮೂಲೆ | 9.00 ಪ-ದ | 9.00 | (7.80+6.00)/2 | 62.10 | 64986.00 | 40.36 |
| 19 | ದಟ್ಟಗಳ್ಳಿ 3ನೇ ಹಂತ | 1660 | ಮೂಲೆ | 9.00 ಪ-ದ | (8.50+8.20)/2 | 12.00 | 100.20 | 64986.00 | 65.12 |
| 20 | ದಟ್ಟಗಳ್ಳಿ 3ನೇ ಹಂತ | 1660/ಎ | ಮಧ್ಯಂತರ | ಪಶ್ಚಿಮ 9.00 | 9.00 | 12.00 | 108.00 | 58003.00 | 62.64 |
| 21 | ದಟ್ಟಗಳ್ಳಿ 3ನೇ ಹಂತ | 1670 | ಮೂಲೆ | 18-12 ಉ-ಪ | 9.00 | 12.00 | 108.00 | 64986.00 | 70.18 |
| 22 | ದಟ್ಟಗಳ್ಳಿ 3ನೇ ಹಂತ | 1671 | ಮೂಲೆ | 18-12 ಉ-ಪೂ | 9.00 | 12.00 | 108.00 | 64986.00 | 70.18 |
| 23 | ದಟ್ಟಗಳ್ಳಿ 3ನೇ ಹಂತ | 2929 | ಮೂಲೆ | 9-12ಉ-ಪ | 9.00 | 5.90 | 53.10 | 64986.00 | 34.51 |
| 24 | ದಟ್ಟಗಳ್ಳಿ 3ನೇ ಹಂತ | ಇ-141/ಎ | ಮಧ್ಯಾಂತರ | ಉ-9.00 | (0+8.98)/2 | 37.00 | 166.13 | 58003.00 | 96.36 |
| 25 | ದಟ್ಟಗಳ್ಳಿ 3ನೇ ಹಂತ | 2930 | ಮೂಲೆ | 12.00ದ-ಪ | 9.00 | 5.90 | 53.10 | 64986.00 | 34.51 |
| 26 | ದಟ್ಟಗಳ್ಳಿ 3ನೇ ಹಂತ | 2956 | ಮೂಲೆ | 12.00ದ-ಪೂ | (5.00+6.20)/2 | 9.00 | 50.40 | 64986.00 | 32.75 |
| 27 | ದಟ್ಟಗಳ್ಳಿ 3ನೇ ಹಂತ | 2957 | ಮೂಲೆ | 12-9ದ-ಪ | (7.00+6.20)/2 | 9.00 | 59.40 | 64986.00 | 38.60 |
| 28 | ದಟ್ಟಗಳ್ಳಿ 3ನೇ ಹಂತ | 2963 | ಮಧ್ಯಂತರ | ಪಶ್ಚಿಮ 9.00 | 6.00 | 9.00 | 54.00 | 58003.00 | 31.32 |
| 29 | ದಟ್ಟಗಳ್ಳಿ 3ನೇ ಹಂತ | 2969 | ಮೂಲೆ | 9.00 ಉ-ಪ | 6.00 | 9.00 | 54.00 | 64986.00 | 35.09 |
| 30 | ದಟ್ಟಗಳ್ಳಿ 3ನೇ ಹಂತ | 3098 | ಮಧ್ಯಂತರ | ದಕ್ಷಿಣ12.00 | 18.00 | 12.00 | 216.00 | 58003.00 | 125.29 |
| 31 | ದಟ್ಟಗಳ್ಳಿ 3ನೇ ಹಂತ | 4499 | ಮಧ್ಯಂತರ | ಉತ್ತರ 24.00 | 24.00 | 15.00 | 360.00 | 58003.00 | 208.81 |
| 32 | ದಟ್ಟಗಳ್ಳಿ 3ನೇ ಹಂತ | 4501 | ಮೂಲೆ | 24-12 ಉ-ಪೂ | 24.00 | (15.50+17.50)/2 | 396.00 | 64986.00 | 257.34 |
| 33 | ದಟ್ಟಗಳ್ಳಿ 3ನೇ ಹಂತ | 4553 | ಮೂಲೆ | 12-12 ದ-ಪೂ | 12.00 | 11.80 | 141.60 | 64986.00 | 92.02 |
| 34 | ದಟ್ಟಗಳ್ಳಿ 3ನೇ ಹಂತ | 4516 | ಮೂಲೆ | 12-12ದ-ಪೂ | 18.00 | (16.00+17.00)/2 | 297.00 | 64986.00 | 193.01 |
| 35 | ದಟ್ಟಗಳ್ಳಿ 3ನೇ ಹಂತ | 2944 | ಮೂಲೆ | 12-9ಉ-ಪೂ | 6.80 | 9.00 | 61.20 | 64986.00 | 39.77 |
| 36 | ವಿಜಯನಗರ 4ನೇ ಹಂತ 2ನೇ ಘಟ್ಟ | 1756 | ಮೂಲೆ | ಉ-ಪೂ9.00 | 24.00 | 16.15 | 387.60 | 86009.00 | 333.37 |
| 37 | ವಿಜಯನಗರ 4ನೇ ಹಂತ 2ನೇ ಘಟ್ಟ | 1766 | ಮೂಲೆ | ಉ-ಪೂ12.00 | 24.00 | (16.50+16.00)/2 | 390.00 | 86009.00 | 335.44 |
| 38 | ವಿಜಯನಗರ 4ನೇ ಹಂತ 2ನೇ ಘಟ್ಟ | 2847 | ಮೂಲೆ | ಪೂ-ದ9.00 | 12.00 | 10.40 | 124.80 | 86009.00 | 107.34 |
| 39 | ವಿಜಯನಗರ 4ನೇ ಹಂತ 2ನೇ ಘಟ್ಟ | 4776 | ಮೂಲೆ | 9-12 ಉ-ಪ | 9.00 | (3.90+3.96)/2 | 35.37 | 86009.00 | 30.42 |
| 40 | ವಿಜಯನಗರ 4ನೇ ಹಂತ 2ನೇ ಘಟ್ಟ | 6128 | ಮೂಲೆ | ಉ-ಪೂ 9.00 | 24.00 | 12.20 | 292.80 | 86009.00 | 251.83 |
| 41 | ವಿಜಯನಗರ 4ನೇ ಹಂತ 2ನೇ ಘಟ್ಟ | 7030 | ಮೂಲೆ | ಉ-ಪೂ 9.00 | 4.60 | 18.00 | 82.80 | 86009.00 | 71.22 |
| 42 | ವಿಜಯನಗರ 4ನೇ ಹಂತ 2ನೇ ಘಟ್ಟ | 7281 | ಮೂಲೆ | ದ-ಪೂ9.00 | 8.40 | 12.00 | 100.80 | 86009.00 | 86.70 |
| 43 | ವಿಜಯನಗರ 4ನೇ ಹಂತ 2ನೇ ಘಟ್ಟ | 7326 | ಮೂಲೆ | ದ-ಪ 9.00 | 8.80 | 12.00 | 105.60 | 86009.00 | 90.83 |
| 44 | ವಿಜಯನಗರ 4ನೇ ಹಂತ 2ನೇ ಘಟ್ಟ | 9004 | ಮಧ್ಯಂತರ | ಉತ್ತರ 9.00 | 12.00 | 9.00 | 108.00 | 59275.00 | 64.02 |
| 45 | ವಿಜಯನಗರ 4ನೇ ಹಂತ 2ನೇ ಘಟ್ಟ | 9005 | ಮಧ್ಯಂತರ | ಉತ್ತರ 9.00 | 12.00 | 9.00 | 108.00 | 59275.00 | 64.02 |
| 46 | ವಿಜಯನಗರ 4ನೇ ಹಂತ 2ನೇ ಘಟ್ಟ | 9006 | ಮಧ್ಯಂತರ | ಉತ್ತರ 9.00 | 12.00 | 9.00 | 108.00 | 59275.00 | 64.02 |
| 47 | ವಿಜಯನಗರ 4ನೇ ಹಂತ 2ನೇ ಘಟ್ಟ | 9007 | ಮಧ್ಯಂತರ | ಉತ್ತರ 9.00 | 12.00 | 9.00 | 108.00 | 59275.00 | 64.02 |
| 48 | ವಿಜಯನಗರ 4ನೇ ಹಂತ 2ನೇ ಘಟ್ಟ | 9008 | ಮಧ್ಯಂತರ | ಉತ್ತರ 9.00 | 12.00 | 9.00 | 108.00 | 59275.00 | 64.02 |
| 49 | ವಿಜಯನಗರ 4ನೇ ಹಂತ 2ನೇ ಘಟ್ಟ | 9009 | ಮಧ್ಯಂತರ | ಉತ್ತರ 9.00 | 12.00 | 9.00 | 108.00 | 59275.00 | 64.02 |
| 50 | ವಿಜಯನಗರ 4ನೇ ಹಂತ 2ನೇ ಘಟ್ಟ | 9010 | ಮಧ್ಯಂತರ | ಉತ್ತರ 9.00 | 12.00 | 9.00 | 108.00 | 59275.00 | 64.02 |
| 51 | ವಿಜಯನಗರ 4ನೇ ಹಂತ 2ನೇ ಘಟ್ಟ | 9011 | ಮಧ್ಯಂತರ | ಉತ್ತರ 9.00 | 12.00 | 9.00 | 108.00 | 59275.00 | 64.02 |
| 52 | ವಿಜಯನಗರ 4ನೇ ಹಂತ 2ನೇ ಘಟ್ಟ | 9013 | ಮಧ್ಯಂತರ | ಉತ್ತರ 9.00 | 12.00 | 9.00 | 108.00 | 59275.00 | 64.02 |
| 53 | ವಿಜಯನಗರ 4ನೇ ಹಂತ 2ನೇ ಘಟ್ಟ | 9016 | ಮಧ್ಯಂತರ | ಉತ್ತರ 9.00 | 12.00 | 9.00 | 108.00 | 59275.00 | 64.02 |
| 54 | ವಿಜಯನಗರ 4ನೇ ಹಂತ 2ನೇ ಘಟ್ಟ | 9028 | ಮಧ್ಯಂತರ | ದಕ್ಷಿಣ9.00 | 12.00 | 9.00 | 108.00 | 59275.00 | 64.02 |
| 55 | ವಿಜಯನಗರ 4ನೇ ಹಂತ 2ನೇ ಘಟ್ಟ | 9029 | ಮಧ್ಯಂತರ | ದಕ್ಷಿಣ9.00 | 12.00 | 9.00 | 108.00 | 59275.00 | 64.02 |
| 56 | ವಿಜಯನಗರ 4ನೇ ಹಂತ 2ನೇ ಘಟ್ಟ | 9030 | ಮಧ್ಯಂತರ | ದಕ್ಷಿಣ9.00 | 12.00 | 9.00 | 108.00 | 59275.00 | 64.02 |
| 57 | ವಿಜಯನಗರ 4ನೇ ಹಂತ 2ನೇ ಘಟ್ಟ | 9031 | ಮಧ್ಯಂತರ | ದಕ್ಷಿಣ9.00 | 12.00 | 9.00 | 108.00 | 59275.00 | 64.02 |
| 58 | ವಿಜಯನಗರ 4ನೇ ಹಂತ 2ನೇ ಘಟ್ಟ | 9032 | ಮಧ್ಯಂತರ | ದಕ್ಷಿಣ9.00 | 12.00 | 9.00 | 108.00 | 59275.00 | 64.02 |
| 59 | ವಿಜಯನಗರ 4ನೇ ಹಂತ 2ನೇ ಘಟ್ಟ | 9033 | ಮಧ್ಯಂತರ | ದಕ್ಷಿಣ9.00 | 12.00 | 9.00 | 108.00 | 59275.00 | 64.02 |
| 60 | ವಿಜಯನಗರ 4ನೇ ಹಂತ 2ನೇ ಘಟ್ಟ | 9034 | ಮಧ್ಯಂತರ | ದಕ್ಷಿಣ9.00 | 12.00 | 9.00 | 108.00 | 59275.00 | 64.02 |
| 61 | ವಿಜಯನಗರ 4ನೇ ಹಂತ 2ನೇ ಘಟ್ಟ | 9035 | ಮಧ್ಯಂತರ | ದಕ್ಷಿಣ9.00 | 12.00 | 9.00 | 108.00 | 59275.00 | 64.02 |
| 62 | ವಿಜಯನಗರ 4ನೇ ಹಂತ 2ನೇ ಘಟ್ಟ | 9036 | ಮಧ್ಯಂತರ | ದಕ್ಷಿಣ9.00 | 12.00 | 9.00 | 108.00 | 59275.00 | 64.02 |
| 63 | ವಿಜಯನಗರ 4ನೇ ಹಂತ 2ನೇ ಘಟ್ಟ | 9037 | ಮಧ್ಯಂತರ | ದಕ್ಷಿಣ9.00 | 12.00 | 9.00 | 108.00 | 59275.00 | 64.02 |
| 64 | ವಿಜಯನಗರ 4ನೇ ಹಂತ 2ನೇ ಘಟ್ಟ | 9038 | ಮಧ್ಯಂತರ | ದಕ್ಷಿಣ9.00 | 12.00 | 9.00 | 108.00 | 59275.00 | 64.02 |
| 65 | ವಿಜಯನಗರ 4ನೇ ಹಂತ 2ನೇ ಘಟ್ಟ | 9063 | ಮಧ್ಯಂತರ | ಉತ್ತರ 9.00 | 12.00 | 9.00 | 108.00 | 59275.00 | 64.02 |
| 66 | ವಿಜಯನಗರ 4ನೇ ಹಂತ 2ನೇ ಘಟ್ಟ | 9064 | ಮಧ್ಯಂತರ | ಉತ್ತರ 9.00 | 12.00 | 9.00 | 108.00 | 59275.00 | 64.02 |
| 67 | ವಿಜಯನಗರ 4ನೇ ಹಂತ 2ನೇ ಘಟ್ಟ | 9065 | ಮಧ್ಯಂತರ | ಉತ್ತರ 9.00 | 12.00 | 9.00 | 108.00 | 59275.00 | 64.02 |
| 68 | ವಿಜಯನಗರ 4ನೇ ಹಂತ 2ನೇ ಘಟ್ಟ | 9067 | ಮಧ್ಯಂತರ | ಉತ್ತರ 9.00 | 12.00 | 9.00 | 108.00 | 59275.00 | 64.02 |
| 69 | ವಿಜಯನಗರ 4ನೇ ಹಂತ 2ನೇ ಘಟ್ಟ | 9068 | ಮಧ್ಯಂತರ | ಉತ್ತರ 9.00 | 12.00 | 9.00 | 108.00 | 59275.00 | 64.02 |
| 70 | ವಿಜಯನಗರ 4ನೇ ಹಂತ 2ನೇ ಘಟ್ಟ | 9069 | ಮಧ್ಯಂತರ | ಉತ್ತರ 9.00 | 12.00 | 9.00 | 108.00 | 59275.00 | 64.02 |
| 71 | ವಿಜಯನಗರ 4ನೇ ಹಂತ 2ನೇ ಘಟ್ಟ | 9070 | ಮಧ್ಯಂತರ | ಉತ್ತರ 9.00 | 12.00 | 9.00 | 108.00 | 59275.00 | 64.02 |
| 72 | ವಿಜಯನಗರ 4ನೇ ಹಂತ 2ನೇ ಘಟ್ಟ | 9071 | ಮಧ್ಯಂತರ | ಉತ್ತರ 9.00 | 12.00 | 9.00 | 108.00 | 59275.00 | 64.02 |
| 73 | ವಿಜಯನಗರ 4ನೇ ಹಂತ 2ನೇ ಘಟ್ಟ | 9072 | ಮಧ್ಯಂತರ | ಉತ್ತರ 9.00 | 12.00 | 9.00 | 108.00 | 59275.00 | 64.02 |
| 74 | ವಿಜಯನಗರ 4ನೇ ಹಂತ 2ನೇ ಘಟ್ಟ | 9073 | ಮಧ್ಯಂತರ | ಉತ್ತರ 9.00 | 12.00 | 9.00 | 108.00 | 59275.00 | 64.02 |
| 75 | ವಿಜಯನಗರ 4ನೇ ಹಂತ 2ನೇ ಘಟ್ಟ | 9074 | ಮಧ್ಯಂತರ | ಉತ್ತರ 9.00 | 12.00 | 9.00 | 108.00 | 59275.00 | 64.02 |
| 76 | ವಿಜಯನಗರ 4ನೇ ಹಂತ 2ನೇ ಘಟ್ಟ | 9075 | ಮಧ್ಯಂತರ | ಉತ್ತರ 9.00 | 12.00 | 9.00 | 108.00 | 59275.00 | 64.02 |
| 77 | ವಿಜಯನಗರ 4ನೇ ಹಂತ 2ನೇ ಘಟ್ಟ | 9076 | ಮಧ್ಯಂತರ | ಉತ್ತರ 9.00 | 12.00 | 9.00 | 108.00 | 59275.00 | 64.02 |
| 78 | ವಿಜಯನಗರ 4ನೇ ಹಂತ 2ನೇ ಘಟ್ಟ | 9089 | ಮಧ್ಯಂತರ | ದಕ್ಷಿಣ9.00 | 18.00 | 12.00 | 216.00 | 59275.00 | 128.03 |
| 79 | ವಿಜಯನಗರ 4ನೇ ಹಂತ 2ನೇ ಘಟ್ಟ | 9090 | ಮಧ್ಯಂತರ | ದಕ್ಷಿಣ9.00 | 18.00 | 12.00 | 216.00 | 59275.00 | 128.03 |
| 80 | ವಿಜಯನಗರ 4ನೇ ಹಂತ 2ನೇ ಘಟ್ಟ | 9091 | ಮಧ್ಯಂತರ | ದಕ್ಷಿಣ9.00 | 18.00 | 12.00 | 216.00 | 59275.00 | 128.03 |
| 81 | ವಿಜಯನಗರ 4ನೇ ಹಂತ 2ನೇ ಘಟ್ಟ | 9092 | ಮಧ್ಯಂತರ | ದಕ್ಷಿಣ9.00 | 18.00 | 12.00 | 216.00 | 59275.00 | 128.03 |
| 82 | ವಿಜಯನಗರ 4ನೇ ಹಂತ 2ನೇ ಘಟ್ಟ | 9093 | ಮಧ್ಯಂತರ | ದಕ್ಷಿಣ9.00 | 18.00 | 12.00 | 216.00 | 59275.00 | 128.03 |
| 83 | ವಿಜಯನಗರ 4ನೇ ಹಂತ 2ನೇ ಘಟ್ಟ | 11160 | ಮಧ್ಯಂತರ | ಪಶ್ಚಿಮ9.00 | 12.00 | 18.00 | 216.00 | 59275.00 | 128.03 |
| 84 | ವಿಜಯನಗರ 4ನೇ ಹಂತ 2ನೇ ಘಟ್ಟ | 11161 | ಮಧ್ಯಂತರ | ಪಶ್ಚಿಮ9.00 | 12.00 | 18.00 | 216.00 | 59275.00 | 128.03 |
| 85 | ವಿಜಯನಗರ 4ನೇ ಹಂತ 2ನೇ ಘಟ್ಟ | 11162 | ಮಧ್ಯಂತರ | ಪಶ್ಚಿಮ9.00 | 12.00 | 18.00 | 216.00 | 59275.00 | 128.03 |
| 86 | ವಿಜಯನಗರ 4ನೇ ಹಂತ 2ನೇ ಘಟ್ಟ | 11162/ಬಿ | ಮಧ್ಯಂತರ | ಪಶ್ಚಿಮ9.00 | 12.00 | 18.00 | 216.00 | 59275.00 | 128.03 |
| 87 | ವಿಜಯನಗರ 4ನೇ ಹಂತ 2ನೇ ಘಟ್ಟ | 11162/ಎ | ಮಧ್ಯಂತರ | ಪಶ್ಚಿಮ9.00 | 12.00 | 18.00 | 216.00 | 59275.00 | 128.03 |
| 88 | ವಿಜಯನಗರ 4ನೇ ಹಂತ 2ನೇ ಘಟ್ಟ | 11165 | ಮಧ್ಯಂತರ | ಪಶ್ಚಿಮ9.00 | 12.00 | 18.00 | 216.00 | 59275.00 | 128.03 |
| 89 | ವಿಜಯನಗರ 4ನೇ ಹಂತ 2ನೇ ಘಟ್ಟ | 11166 | ಮಧ್ಯಂತರ | ಪಶ್ಚಿಮ9.00 | 12.00 | 18.00 | 216.00 | 59275.00 | 128.03 |
| 90 | ವಿಜಯನಗರ 4ನೇ ಹಂತ 2ನೇ ಘಟ್ಟ | 11167 | ಮಧ್ಯಂತರ | ಪಶ್ಚಿಮ9.00 | 12.00 | 18.00 | 216.00 | 59275.00 | 128.03 |
| 91 | ವಿಜಯನಗರ 4ನೇ ಹಂತ 2ನೇ ಘಟ್ಟ | 11168 | ಮಧ್ಯಂತರ | ಪಶ್ಚಿಮ9.00 | 12.00 | 18.00 | 216.00 | 59275.00 | 128.03 |
| 92 | ವಿಜಯನಗರ 4ನೇ ಹಂತ 2ನೇ ಘಟ್ಟ | 11169 | ಮಧ್ಯಂತರ | ಪಶ್ಚಿಮ9.00 | 12.00 | 18.00 | 216.00 | 59275.00 | 128.03 |
| 93 | ವಿಜಯನಗರ 4ನೇ ಹಂತ 2ನೇ ಘಟ್ಟ | 11170 | ಮಧ್ಯಂತರ | ಪಶ್ಚಿಮ9.00 | 12.00 | 18.00 | 216.00 | 59275.00 | 128.03 |
| 94 | ವಿಜಯನಗರ 4ನೇ ಹಂತ 2ನೇ ಘಟ್ಟ | 11171 | ಮಧ್ಯಂತರ | ಪಶ್ಚಿಮ9.00 | 12.00 | 18.00 | 216.00 | 59275.00 | 128.03 |
| 95 | ವಿಜಯನಗರ 4ನೇ ಹಂತ 2ನೇ ಘಟ್ಟ | 11172 | ಮಧ್ಯಂತರ | ಪಶ್ಚಿಮ9.00 | 12.00 | 18.00 | 216.00 | 59275.00 | 128.03 |
| 96 | ವಿಜಯನಗರ 4ನೇ ಹಂತ 2ನೇ ಘಟ್ಟ | 11173 | ಮಧ್ಯಂತರ | ಪಶ್ಚಿಮ9.00 | 12.00 | 18.00 | 216.00 | 59275.00 | 128.03 |
| 97 | ವಿಜಯನಗರ 4ನೇ ಹಂತ 2ನೇ ಘಟ್ಟ | 11174 | ಮಧ್ಯಂತರ | ಪಶ್ಚಿಮ9.00 | 12.00 | 18.00 | 216.00 | 59275.00 | 128.03 |
| 98 | ವಿಜಯನಗರ 4ನೇ ಹಂತ 2ನೇ ಘಟ್ಟ | 11232 | ಮಧ್ಯಂತರ | ಪೂರ್ವ9.00 | 12.00 | 18.00 | 216.00 | 59275.00 | 128.03 |
| 99 | ಹೆಬ್ಬಾಳು 2ನೇ ಹಂತ | 60/ಎ | ಮಧ್ಯಂತರ | ದಕ್ಷಿಣ 8.0 ಮೀ | 10.00 | 5.50 | 55.00 | 64472.00 | 35.46 |
| 100 | ಹೆಬ್ಬಾಳು 2ನೇ ಹಂತ | 60/ಬಿ | ಮಧ್ಯಂತರ | ದಕ್ಷಿಣ 8.0 ಮೀ | 10.00 | 5.50 | 55.00 | 64472.00 | 35.46 |
| 101 | ಹೆಬ್ಬಾಳು 2ನೇ ಹಂತ | 658 | ಮಧ್ಯಂತರ | ಪೂರ್ವ 9.0 ಮೀ | 6.00 | 9.00 | 54.00 | 64472.00 | 34.81 |
| 102 | ಹೆಬ್ಬಾಳು 2ನೇ ಹಂತ | 1017/ಎ | ಮಧ್ಯಂತರ | ಪಶ್ಚಿಮ 7.0 ಮೀ | 6.00 | 9.00 | 54.00 | 64472.00 | 34.81 |
| 103 | ಹೆಬ್ಬಾಳು 2ನೇ ಹಂತ | 2598 | ಮೂಲೆ | ಪಶ್ಚಿಮ 9.00 | 6.00 | 9.00 | 54.00 | 64489.00 | 34.82 |
| 104 | ಹೆಬ್ಬಾಳು 1ನೇ ಹಂತ | 1190/ಐ | ಮಧ್ಯಂತರ | ದಕ್ಷಿಣ 9.00 | 18.00 | 12.00 | 216.00 | 73539.00 | 158.84 |
| 105 | ಹೆಬ್ಬಾಳು 1ನೇ ಹಂತ | 1190/ಹೆಚ್ | ಮಧ್ಯಂತರ | ದಕ್ಷಿಣ 9.00 | 18.00 | 12.00 | 216.00 | 73539.00 | 158.84 |
| 106 | ವಿಜಯನಗರ 2ನೇ ಹಂತ | 2784 | ಮೂಲೆ | ಉ-ಪ 9.00 | (0.5+11.00)/2 | 18.00 | 103.50 | 99318.00 | 102.79 |
| 107 | ವಿಜಯನಗರ 2ನೇ ಹಂತ | 2993 | ಮೂಲೆ | ದಕ್ಷಿಣ & ಪೂರ್ವ 9.00 | 14.00 | (9+12)/2 | 147.00 | 99318.00 | 146.00 |
| 108 | ವಿಜಯನಗರ 2ನೇ ಹಂತ | 4039 | ಮೂಲೆ | ಪಶ್ಚಿಮ & ದಕ್ಷಿಣ 9.0 & 6.0 | (8+5.50)/2 | 12.00 | 81.00 | 99318.00 | 80.45 |
| 109 | ವಿಜಯನಗರ 2ನೇ ಹಂತ | 4245 | ಮೂಲೆ | ಉತ್ತರ & ಪೂರ್ವ 9.0 & 6.0 | 9.00 | 5.00 | 45.00 | 99318.00 | 44.69 |
| 110 | ವಿಜಯನಗರ 2ನೇ ಹಂತ | 4280 | ಮೂಲೆ | ದಕ್ಷಿಣ & ಪೂರ್ವ 9.0 & 6.0 | 9.00 | (4.5+5.0)/2 | 42.75 | 99318.00 | 42.46 |
| 111 | ವಿಜಯನಗರ 2ನೇ ಹಂತ | 4321 | ಮೂಲೆ | ಉತ್ತರ & ಪೂರ್ವ 9.0 & 6.0 | 9.00 | 6.00 | 54.00 | 99318.00 | 53.63 |
| 112 | ವಿಜಯನಗರ 2ನೇ ಹಂತ | 4360 | ಮೂಲೆ | ದಕ್ಷಿಣ & ಪೂರ್ವ 9.0 & 6.0 | 9.00 | 7.20 | 64.80 | 99318.00 | 64.36 |
| 113 | ವಿಜಯನಗರ 2ನೇ ಹಂತ | 4624 | ಮೂಲೆ | ಉತ್ತರ & ಪಶ್ಚಿಮ 18.0 & 6.0 | 13.00 | (18+16.5)/2 | 224.25 | 99318.00 | 222.72 |
| 114 | ವಿಜಯನಗರ 2ನೇ ಹಂತ | 4739 | ಮೂಲೆ | ದಕ್ಷಿಣ & ಪೂರ್ವ 9.0 & 9.0 | 8.50 | 9.00 | 76.50 | 99318.00 | 75.98 |
| 115 | ವಿಜಯನಗರ 2ನೇ ಹಂತ | 4774 | ಮೂಲೆ | ದಕ್ಷಿಣ & ಪಶ್ಚಿಮ 9.0 & 18.0 | (15+12)/2 | 18.00 | 243.00 | 99318.00 | 241.34 |
| 116 | ವಿಜಯನಗರ 2ನೇ ಹಂತ | 5100 | ಮೂಲೆ | ದಕ್ಷಿಣ & ಪಶ್ಚಿಮ 9.0 & 6.0 | 9.00 | (4.50+4.0)/2 | 38.25 | 99318.00 | 37.99 |
| 117 | ವಿಜಯನಗರ 2ನೇ ಹಂತ | 5715 | ಮೂಲೆ | ಪಶ್ಚಿಮ & ದಕ್ಷಿಣ 9.0 & 9.0 | (8.50+2.00)/2 | 18.40 | 96.60 | 99318.00 | 95.94 |
| 118 | ವಿಜಯನಗರ 2ನೇ ಹಂತ | 4795 | ಮೂಲೆ | ದಕ್ಷಿಣ & ಪಶ್ಚಿಮ 9.0 & 9.0 | (9.5+8.5)/2 | 12.00 | 108.00 | 99318.00 | 107.26 |
| 119 | ದೇವನೂರು 2ನೇ ಹಂತ 2ನೇ ಘಟ್ಟ | 2014 | ಮಧ್ಯಂತರ | ಉತ್ತರ9.00 | 12.00 | 18.00 | 216.00 | 45420.00 | 98.11 |
| 120 | ದೇವನೂರು 2ನೇ ಹಂತ 2ನೇ ಘಟ್ಟ | 2167 | ಮಧ್ಯಂತರ | ಉತ್ತರ9.00 | 12.00 | 18.00 | 216.00 | 45420.00 | 98.11 |
| 121 | ದೇವನೂರು 2ನೇ ಹಂತ 2ನೇ ಘಟ್ಟ | 2168 | ಮಧ್ಯಂತರ | ಉತ್ತರ9.00 | 12.00 | 18.00 | 216.00 | 45420.00 | 98.11 |
| 122 | ದೇವನೂರು 2ನೇ ಹಂತ 2ನೇ ಘಟ್ಟ | 2280/ಡಿ | ಮಧ್ಯಂತರ | ದಕ್ಷಿಣ9.00 | 12.00 | 18.00 | 216.00 | 45420.00 | 98.11 |
| 123 | ದೇವನೂರು 2ನೇ ಹಂತ 2ನೇ ಘಟ್ಟ | 2280/ಇ | ಮಧ್ಯಂತರ | ದಕ್ಷಿಣ9.00 | 12.00 | 18.00 | 216.00 | 45420.00 | 98.11 |
| 124 | ದೇವನೂರು 2ನೇ ಹಂತ 2ನೇ ಘಟ್ಟ | 2280/ಎಫ್ | ಮಧ್ಯಂತರ | ದಕ್ಷಿಣ9.00 | 12.00 | 18.00 | 216.00 | 45420.00 | 98.11 |
| 125 | ದೇವನೂರು 2ನೇ ಹಂತ 2ನೇ ಘಟ್ಟ | 2280/ಜಿ | ಮಧ್ಯಂತರ | ದಕ್ಷಿಣ9.00 | 12.00 | 18.00 | 216.00 | 45420.00 | 98.11 |
| 126 | ದೇವನೂರು 2ನೇ ಹಂತ 2ನೇ ಘಟ್ಟ | 2280/ಹೆಚ್ | ಮಧ್ಯಂತರ | ದಕ್ಷಿಣ9.00 | 12.00 | 18.00 | 216.00 | 45420.00 | 98.11 |
| 127 | ದೇವನೂರು 2ನೇ ಹಂತ 2ನೇ ಘಟ್ಟ | 2280/ಐ | ಮಧ್ಯಂತರ | ದಕ್ಷಿಣ9.00 | 12.00 | 18.00 | 216.00 | 45420.00 | 98.11 |
| 128 | ದೇವನೂರು 2ನೇ ಹಂತ 2ನೇ ಘಟ್ಟ | 2280/ಜೆ | ಮಧ್ಯಂತರ | ದಕ್ಷಿಣ9.00 | 12.00 | 18.00 | 216.00 | 45420.00 | 98.11 |
| 129 | ದೇವನೂರು 2ನೇ ಹಂತ 2ನೇ ಘಟ್ಟ | 2280/ಕೆ | ಮಧ್ಯಂತರ | ದಕ್ಷಿಣ9.00 | 12.00 | 18.00 | 216.00 | 45420.00 | 98.11 |
| 130 | ದೇವನೂರು 2ನೇ ಹಂತ 2ನೇ ಘಟ್ಟ | 2233 | ಮಧ್ಯಂತರ | ಪಶ್ಚಿಮ9.00 | 12.00 | 18.00 | 216.00 | 45420.00 | 98.11 |
| 131 | ದೇವನೂರು 2ನೇ ಹಂತ 2ನೇ ಘಟ್ಟ | 2230 | ಮಧ್ಯಂತರ | ಪಶ್ಚಿಮ9.00 | 12.00 | 18.00 | 216.00 | 45420.00 | 98.11 |
| 132 | ದೇವನೂರು 2ನೇ ಹಂತ 2ನೇ ಘಟ್ಟ | 2231 | ಮಧ್ಯಂತರ | ಪಶ್ಚಿಮ9.00 | 12.00 | 18.00 | 216.00 | 45420.00 | 98.11 |
| 133 | ಶಾಂತವೇರಿ ಗೋಪಾಲಗೌಡ | 01 | ಮೂಲೆ | ಉ:9.00ಪೂ:9.00 | 9.00 | 11.70 | 105.30 | 59180.00 | 62.32 |
| 134 | ಶಾಂತವೇರಿ ಗೋಪಾಲಗೌಡ | 12 | ಮೂಲೆ | ದ:12.00ಪೂ:9.00 | 6.60 | 11.50 | 75.90 | 59180.00 | 44.92 |
| 135 | ಶಾಂತವೇರಿ ಗೋಪಾಲಗೌಡ | 24 | ಮೂಲೆ | ಉ:9.00ಪ:9.00 | 9.50 | 11.70 | 111.15 | 59180.00 | 65.78 |
| 136 | ಶಾಂತವೇರಿ ಗೋಪಾಲಗೌಡ | 79 | ಮೂಲೆ | ದ:12.00ಪ:9.00 | 9.00 | 12.00 | 108.00 | 59180.00 | 63.91 |
| 137 | ಶಾಂತವೇರಿ ಗೋಪಾಲಗೌಡ | 90 | ಮೂಲೆ | ಉ:9.00ಪ:9.00 | 10.00 | 11.00 | 110.00 | 59180.00 | 65.10 |
| 138 | ಶಾಂತವೇರಿ ಗೋಪಾಲಗೌಡ | 100 | ಮೂಲೆ | ದ:12.00ಪ:12.00 | 12.20 | 18.00 | 219.60 | 59180.00 | 129.96 |
| 139 | ಶಾಂತವೇರಿ ಗೋಪಾಲಗೌಡ | 133 | ಮೂಲೆ | ಉ:12.00ಪೂ:9.00 | 12.00 | 18.00 | 216.00 | 59180.00 | 127.83 |
| 140 | ಶಾಂತವೇರಿ ಗೋಪಾಲಗೌಡ | 144 | ಮೂಲೆ | ದ:12.00ಪೂ:9.00 | 12.00 | 18.00 | 216.00 | 59180.00 | 127.83 |
| 141 | ಶಾಂತವೇರಿ ಗೋಪಾಲಗೌಡ | 121 | ಮೂಲೆ | ದ:12.00ಪ:9.00 | 12.00 | 18.00 | 216.00 | 59180.00 | 127.83 |


ಮುಂದುವರೆದಿದೆ...

## ಮಾ.8ಕ್ಕೆ ರಂಗೋಲಿ ಸ್ಪರ್ಧೆ



ಮೈಸೂರು: ಒಂಟಿಕೊಪ್ಪಲ್ ಗ್ರಾಮದೇವತೆ ಉತ್ಸವ ಪ್ರಯುಕ್ತ ಒಂಟಿಕೊಪ್ಪಲಿನ ಮಾರಮ್ಮ ದೇವಸ್ಥಾನ ಆವರಣದಲ್ಲಿ ಮಾ.8ರಂದು ಬೆಳಿಗ್ಗೆ 8ಕ್ಕೆ ಸರಸ್ವತಿ ಶಿವಣ್ಣ ಸ್ಮಾರಕ ಮಹಿಳೆಯರ ರಂಗೋಲಿ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಸುವರ್ಣ ಕರ್ನಾಟಕ ಹಿತರಕ್ಷಣಾ ವೇದಿಕೆ ಜಿಲ್ಲಾ ಘಟಕದ ಅಧ್ಯಕ್ಷೆ ಆರ್.ಮಂಜುಳಾ ತಿಳಿಸಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಮುಖಂಡ ಎಸ್.ಜಯಪ್ರಕಾಶ್ ಮಾರ್ಗದರ್ಶನ ನೀಡುವರು. 18 ವರ್ಷಗಳ ಒಳಗಿನ ಹಾಗೂ ಮೇಲ್ಪಟ್ಟ, ಎರಡು ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ. ಎಲ್ಲರಿಗೂ ಪ್ರವೇಶ ಉಚಿತವಿದ್ದು, ಮಾರ್ಚ್ 7ರಂದು ಸಂಜೆ 7ರೊಳಗೆ ಹೆಸರು ನೋಂದಣಿ ಮಾಡ ಬೇಕು. ಮಾಹಿತಿಗೆ ಮೊ.ಸಂ. 81479 47535 ಸಂಪರ್ಕಿಸಿ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಆಯೋಜಕ ಸಮಿತಿಯ ಆರ್.ಶ್ರೀನಿ ವಾಸ್, ಮಂಜು ಳಾಬಾಯಿ, ಮಂಜುಳಾ ಲಕ್ಷ್ಮಣ್, ಬೇಬಿ ರತ್ನಾಚಾರ್ ಇದ್ದರು.

## ಎನ್.ಆರ್.ಆಸ್ಪತ್ರೆ ವತಿಯಿಂದ ಶಸ್ತ್ರಚಿಕಿತ್ಸೆ ಸೇವೆ

ಮೈಸೂರು: ನಗರದ ಶಾರದಾದೇವಿ ನಗರದಲ್ಲಿನ ಎನ್.ಆರ್. ಆಸ್ಪತ್ರೆ ವತಿಯಿಂದ ಯಶಸ್ವಿನಿ ಯೋಜನೆ ಅಡಿಯಲ್ಲಿ ಸುಮಾರು ಒಂದೂವರೆ ಲಕ್ಷ ವೆಚ್ಚದ ಸವೆದ ಮಂಡಿ ಮೂಳೆ ಬದಲಾವಣಾ ಶಸ್ತ್ರ ಚಿಕಿತ್ಸೆ ಸೇವೆ ಒದಗಿಸಲಿದ್ದು, ರೋಗಿಗಳು ಪ್ರಯೋಜನ ಪಡೆಯಬೇಕೆಂದು ಸಂಸ್ಥಾಪಕ ರಕ್ಷಿತ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, 2022 ರಲ್ಲಿ ತಮ್ಮ ಆಸ್ಪತ್ರೆ ಆರಂಭವಾಯಿತು. ಮೈಸೂರು ಸುತ್ತಮುತ್ತಲಿನ ಜನತೆಗೆ ಇದ ರಿಂದ ಅನುಕೂಲವಾಗುತ್ತಿದೆ. ದುಬಾರಿ ವೆಚ್ಚ ನೀಡಿ ಈ ಶಸ್ತ್ರಚಿಕಿತ್ಸೆಗೆ ಒಳಗಾಗಲು ಹಿಂಜರಿಯುವವರು ಪ್ರಯೋಜನ ಪಡೆಯಬಹುದಾಗಿದೆ. ಯಾವುದೇ ಹೆಚ್ಚುವರಿ ಶುಲ್ಕ ಇರುವುದಿಲ್ಲ ಎಂದು ಮಾಹಿತಿ ನೀಡಿದರು. ತಜ್ಞ ವೈದ್ಯ ಡಾ. ಮಧುರಾಮ್ ಚೌಧರಿ ಮಾತನಾಡಿ, ಯಶಸ್ವಿನಿ ಕಾರ್ಡ್ ಹೊಂದಿರುವವರಿಗೆ ಸಂಪೂರ್ಣ ಉಚಿತ ಚಿಕಿತ್ಸೆ ನೀಡಲಾಗುತತಿದೆ. ವಯಸ್ಸಾದವರನ್ನು ಎಲ್ಲರೂ ನಿರ್ಲಕ್ಷಿಸುತ್ತಿದ್ದಾರೆ. ಆದರೆ ಯಶಸ್ವಿನಿ ಯೋಜನೆ ಪ್ರಯೋಜನದ ಮೂಲಕ ಇವರು ನೋವಿನಿಂದ ಮುಕ್ತಿ ಪಡೆಯಲು ಇದರಿಂದ ನೆರವಾಗಲಿದೆ ಎಂದರು. ಡಾ. ರಮ್ಯ, ಅವಿನಾಶ್, ಲೋಕೇಶ್, ದೀಪಕ್ ಇದ್ದರು.



### ಹೆಸರು ಬದಲಾವಣೆ

ಹುಣಸೂರಿನ ಕರೀಗೌಡ ರಸ್ತೆ ಮನೆ ನಂ. 1182–4ರಲ್ಲಿ ವಾಸವಿರುವ ಸೌಮ್ಯ ಎಸ್. ಆದ ನಾನು ನನ್ನ ಹೆಸರನ್ನು ಸೌಮ್ಯ ಕಿಶೋರ್ ಎಚ್. ಎಂದು ನನ್ನ ಸ್ವಂತ ಇಚ್ಛೆ ಮೇಲೆ ನೋಟರಿ ಎಸ್. ವಿ. ನಾಗೇಂದ್ರ ಅವರ ಸಮಕ್ಷಮದಲ್ಲಿ ಬದಲಾಯಿಸಿಕೊಂಡಿರುತ್ತೇನೆ.

ಸಹಿ/–
ಸೌಮ್ಯ ಕಿಶೋರ್ ಎಚ್.

## ಕಾಯಿಲೆಗಳ ಬಗ್ಗೆ ಎಚ್ಚರವಿರಲಿ



**▸▸ ನರರೋಗ ತಜ್ಞ ಡಾ.ಸುಶ್ರುತ ಗೌಡ ಹೇಳಿಕೆ**

ಮೈಸೂರು: ಕೋವಿಡ್ ಬಳಿಕ ಈ ಹಿಂದೆ 60 ವರ್ಷಗಳ ಬಳಿಕ ಕಾಣಿಸುತ್ತಿದ್ದ ಸಾಂಕ್ರಾಮಿಕವಲ್ಲದ ಕಾಯಿಲೆಗಳು ಈಗ 40ನೇ ವಯಸ್ಸಿಗೆ ಕಾಣಿಸಿಕೊಳ್ಳುತ್ತಿವೆ. ಹೃದಯ ಮತ್ತು ಮೆದುಳಿನ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿಯ ಅವಶ್ಯವಿದೆ ಎಂದು ನರರೋಗ ತಜ್ಞ ಡಾ.ಸುಶ್ರುತ ಗೌಡ ತಿಳಿಸಿದರು.

ನಗರದ ಎಸ್ ಎಂ ಕೃಷ್ಣ ಮೆಮೋರಿಯಲ್ ನ್ಯೂರೋ ಝೋನ್ ಹಾಗೂ ಪ್ರಿಂಟ್ ಜರ್ನಲಿಸ್ಟ್ಸ್ ಆಫ್ ಮೈಸೂರು ಆಶ್ರಯದಲ್ಲಿ ನ್ಯೂ ಮೆಡ್ ಡಯಾಗ್ನಸ್ಟಿಕ್ಸ್ ಸಹಯೋಗದೊಂದಿಗೆ ಗುರುವಾರ ನಡೆದ ಉಚಿತ ಆರೋಗ್ಯ ತಪಾಸಣಾ ಹಾಗು ಸಲಹಾ ಶಿಬಿರದಲ್ಲಿ ಅವರು ಮಾತನಾಡಿದರು. ಸಾಂಕ್ರಾಮಿಕ ಅಲ್ಲದ ಕಾಯಿಲೆಗಳು ಬಹು ವೇಗವಾಗಿ ಹಬ್ಬುತ್ತಿವೆ. ಅವುಗಳನ್ನು ಎದುರಿಸಬೇಕಾದರೆ ಸಮಾಜ ತನ್ನ ಜೀವನ ಶೈಲಿಯನ್ನು ಬದಲಾಯಿಸಿಕೊಳ್ಳಬೇಕಿದೆ. ಬದುಕಿನ ಒತ್ತಡಗಳನ್ನು ನಿಭಾಯಿಸಲು ಉತ್ತಮ ಆರೋಗ್ಯ ಅಗತ್ಯ. ಕೋವಿಡ್ ಬಳಿಕ ಹಲವಾರು ಹೊಸ ಆರೋಗ್ಯ ಸವಾಲುಗಳು ಎದುರಾಗಿವೆ. ನಿಯಮಿತ ತಪಾಸಣೆ ನಮ್ಮ ಆರೋಗ್ಯ ಸ್ಥಿತಿಗತಿ ತಿಳಿಯಲು ಸಹಕಾರಿ. ಉತ್ತಮ ಆರೋಗ್ಯಯುತ ಸಮಾಜ ನಿರ್ಮಾಣ ನಮ್ಮ ಗುರಿ ಎಂದು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಆದಿತ್ಯ ಆಸ್ಪತ್ರೆಯ ಡಾ.ಎನ್ ಚಂದ್ರಶೇಖರ್ ಮಾತನಾಡಿ ಒಳ್ಳೆಯ ವ್ಯಕ್ತಿ– ಬದಲಾವಣೆಗಳನ್ನು ಸಮಾಜ ಬೆಂಬಲಿಸ ಬೇಕು ಎಂದರು. ಹಿರಿಯ ಪತ್ರಕರ್ತರಾದ ಎಚ್.ಎಸ್.ದಿನೇಶ್ ಕುಮಾರ್, ಟಿ.ಆರ್.ಸತೀಶ್ ಕುಮಾರ್ ಮಾತನಾಡಿದರು. ಸ್ಥಳದಲ್ಲಿ ಪತ್ರಕರ್ತರು ಹಾಗೂ ಅವರ ಕುಟುಂಬ 50ಕ್ಕೂ ಹೆಚ್ಚು ಮಂದಿಗೆ ರಕ್ತ, ಕಿಡ್ನಿ, ಥೈರಾಯ್ಡ್, ಇಸಿಜಿ, ಶ್ವಾಸಕೋಶ, ಫಿಜಿಯೋಥೆರಪಿ ಚಿಕಿತ್ಸೆಗೆ ಒಳಪಟ್ಟರು.

## ಸೆಸ್ಕ್ ಕಾರ್ಯಾಲಯ ಕೊಠಡಿ ಉದ್ಘಾಟನೆ



ಮೈಸೂರು: ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಚಾವಿಸನಿನಿ)ದ ಪ್ರಧಾನ ಕಚೇರಿಯಲ್ಲಿ ನಿರ್ಮಿಸಿರುವ ನಾಲ್ಕನೇ ಮಹಡಿ ಕಚೇರಿಯ ಉದ್ಘಾಟನಾ ಸಮಾರಂಭ ಗುರುವಾರ ನಡೆಯಿತು.

ವಿಜಯನಗರದ ಎರಡನೇ ಹಂತದಲ್ಲಿರುವ ನಿಗಮ ಕಾರ್ಯಾಲಯದಲ್ಲಿ ನಡೆದ ಸಮಾರಂಭದಲ್ಲಿ ಚಾವಿಸನಿನಿ ಅಧ್ಯಕ್ಷರು ಹಾಗೂ ಶಾಸಕರಾದ ರಮೇಶ್ ಬಂಡಿಸಿದ್ದೇಗೌಡರು ಹಾಗೂ ಚಾವಿಸನಿನಿ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ್ ರಾಜು ನೂತನ ಕಚೇರಿ ಕಟ್ಟಡವನ್ನು ಉದ್ಘಾಟಿಸಿದರು.

ಬಳಿಕ ಮಾತನಾಡಿ, "ನೂತನ ಕಚೇರಿ ಉದ್ಘಾಟನೆಯಿಂದಾಗಿ ನಿಗಮದ ಆಡಳಿತಾತ್ಮಕ ಕಾರ್ಯಗಳಿಗೆ ಇನ್ನಷ್ಟು ವೇಗ ಮತ್ತು ಸುಗಮತೆ ದೊರೆಯಲಿದೆ. ನಿಗಮದ ಕಾರ್ಯಕ್ಷಮತೆಯನ್ನು ಹೆಚ್ಚು ಮಾಡುವ ನಿಟ್ಟಿನಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಉತ್ತಮ ವಾತಾವರಣದ ಮೂಲಕ ಕೆಲಸದ ಮಾಡಲು ಈ ಕಟ್ಟಡ ನೆರವಾಗಲಿದೆ" ಎಂದು ಹೇಳಿದರು.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ವ್ಯಾಪ್ತಿಯ ವಿವಿಧ ಉಪ ವಿಭಾಗಗಳಲ್ಲಿ ಅನುಕಂಪದ ಆಧಾರದಲ್ಲಿ ಉದ್ಯೋಗ ಪಡೆದವರಿಗೆ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕ ನೇಮಕಾತಿ ಪತ್ರ ವಿತರಿಸಿದರು. ಅಶ್ವಿನಿ, ಮಹಾಂತೇಶ್, ಸುಮಂತ್ ರಾಜ್ ಅರಸ್, ಡಿ.ಮನೋಜ್, ಕೆ.ಕವಿತಾ, ಯುವಶ್ರೀ ಹಾಗೂ ವಿಜಯ ಕುಮಾರಿ ಸಹಾಯಕರಾಗಿ ನೇಮಕವಾದರೆ. ಕಿರಿಯ ಸಹಾಯಕರಾಗಿ ದೀಕ್ಷಿತ್ ಹಾಗೂ ಸಹಾಯಕ ಪವರ್ ಮ್ಯಾನ್ ಹುದ್ದೆಗೆ ಶ್ರೀಧರ್ ಗೆ ನೇಮಕಾತಿ ಪತ್ರವನ್ನು ವಿತರಿಸಲಾಯಿತು. ಸಮಾರಂಭದಲ್ಲಿ ನಿಗಮದ ತಾಂತ್ರಿಕ ನಿರ್ದೇಶಕ ಡಿ.ಜೆ.ದಿವಾಕರ್, ಮುಖ್ಯ ಆರ್ಥಿಕ ಅಧಿಕಾರಿ ಜಿ.ರೇಣುಕಾ, ಪ್ರಧಾನ ವ್ಯವಸ್ಥಾಪಕ ಲಿಂಗರಾಜಮ್ಮ, ಡಾ.ಬಿ.ಆರ್.ರೂಪ, ಆರ್.ರಾಮಸ್ವಾಮಿ, ಮುಖ್ಯ ಇಂಜಿನಿಯರ್ ಎಲ್. ಲೋಕೇಶ್, ಅಧೀಕ್ಷಕ ಇಂಜಿನಿಯರ್‌ಗಳಾದ ಸುನೀಲ್ ಕುಮಾರ್, ಸೋಮಶೇಖರ್ ಸೇರಿ ಇನ್ನಿತರರು ಹಾಜರಿದ್ದರು.

## ಇಂದು ರಕ್ತದಾನ ಶಿಬಿರ


ಮೈಸೂರು: ಸಾಮಾಜಿಕ ಕಾರ್ಯಕರ್ತ ಮದನ್ ಜನ್ಮದಿನದ ಪ್ರಯುಕ್ತ ನಗರದ ದಸರಾ ವಸ್ತು ಪ್ರದರ್ಶನ ಮೈದಾನದಲ್ಲಿ ಮಾರ್ಚ್ 6ರಂದು ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ರಕ್ತದಾನ ಶಿಬಿರ, ಉಚಿತ ಡಯಾಲಿಸಿಸ್ ವೋಚರ್ ವಿತರಣೆ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಸ್ಮಾರ್ಟ್ ಎಜುಕೇಶನ್ ಕಿಟ್ ವಿತರಣೆ ಆಯೋಜಿಸಲಾಗಿದೆ ಎಂದು ರೋಟರಿ ಮೈಸೂರು ನಿಯೋಜಿತ ಅಧ್ಯಕ್ಷ ಸಮೀರ್ ಕಶ್ಯಪ್ ತಿಳಿಸಿದರು. ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಟರಾದ ದುನಿಯಾ ವಿಜಯ್, ಅಭಿಷೇಕ್ ಅಂಬರೀಶ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಸುಮಾರು 2 ಸಾವಿರ ವಿದ್ಯಾರ್ಥಿಗಳಿಗೆ ಕಿಟ್ ವಿತರಣೆ ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಶಿಬಿರ ಆಯೋಜಕ ಸಮಿತಿಯ ರಘು, ರಶ್ಮಿ ಎನ್.ರಾಜು, ನಾಗರಾಜ್, ಮದನ್, ಪವನ್ ಹಾಜರಿದ್ದರು.

## ಮಾ.8ರಂದು ಆರೋಗ್ಯ ತಪಾಸಣಾ ಶಿಬಿರ

ಮೈಸೂರು: ನಗರದ ದಟ್ಟಗಳ್ಳಿ ಆದಿತ್ಯ ವೃತ್ತ ಬಳಿಯ ರೋಟರಿ ಮೈಸೂರು ಶಾಲೆಯಲ್ಲಿ ಮಾ.8ರಂದು ಬೆಳಗ್ಗೆ 9 ರಿಂದ ಮಧ್ಯಾಹ್ನ 1ರವರೆಗೆ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದು ರೊಟೇರಿಯನ್ ಅನಿಲ್ ಸಲ್ಡಾನ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ವಿವಿಧ ಆಸ್ಪತ್ರೆ ಗಳು ಇದಕ್ಕೆ ಕೈಜೋಡಿಸಿವೆ. ಮೂಳೆ ಖನಿಜ ಸಾಂದ್ರತೆ ಪರೀಕ್ಷೆ, ಇಎನ್‌ಟಿ ತಪಾಸಣೆ, ಕಣ್ಣಿನ ತಪಾಸಣೆ, ಶ್ವಾಸಕೋಶ ತಪಾಸಣೆ, ಇಸಿಜಿ, ಬಿಪಿ, ಶುಗರ್ ಪರೀಕ್ಷೆ, ವೈದ್ಯರ ಸಮಾಲೋಚನೆ ಇರಲಿವೆ. ರಿಯಾಯಿತಿ ದರದಲ್ಲಿ ಎಲ್ಲಾ ವಿಧದ ರಕ್ತ ಪರೀಕ್ಷೆ, ಎಕ್ಸ್ ರೇ, ಅಲ್ಟ್ರಾ ಸೌಂಡ್, ಸಿಟಿ ಸ್ಕ್ಯಾನ್ ಕೂಪನ್ ನೀಡಲಾಗುವುದು ಎಂದರು. ರವಿಶಂಕರ್, ಡಾ. ಮಧುಸೂದನ್, ಪ್ರಭಾವತಿ ಇನ್ನಿತರರು ಇದ್ದರು.

## ಕುಮಾರವ್ಯಾಸನ ಕಾವ್ಯ ಅತ್ಯುನ್ನತವಾದುದು



**▸▸ ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್ ಹೇಳಿಕೆ**

ಮೈಸೂರು: ಕನ್ನಡದ ಮಹಾಕಾವ್ಯಗಳಲ್ಲಿ ಕುಮಾರವ್ಯಾಸನ ಕಾವ್ಯ ಅತ್ಯುನ್ನತವಾದದ್ದು, ಪಂಪ ಕುಮಾರವ್ಯಾಸ ಮತ್ತು ಕುವೆಂಪು ಯುಗಾಂತರದ ಕವಿಗಳು ಎಂದು ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್ ಹೇಳಿದರು.

ಮಾನಸಗಂಗೋತ್ರಿಯ ಪ್ರಸಾರಾಂಗದ ಕುವೆಂಪು ಸಭಾಂಗಣದಲ್ಲಿ ಗುರುವಾರ ನಡೆದ ಕರ್ಣಾಟ ಭಾರತ ಕಥಾಮಂಜರಿ ಕೃತಿಯ ಮರುಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿ, ಕುಮಾರವ್ಯಾಸನಲ್ಲಿ ಬಹಮುಖ್ಯವಾದ್ದು ಭಾವಾವೇಶ. ಪಂಪನಲ್ಲೂ ಅಷ್ಟಾಗಿ ಕಂಡು ಬರುವುದಿಲ್ಲ. ಪ್ರಾಚೀನ ಕಾವ್ಯಗಳ ಪುನರ್ ಮುದ್ರಣ ಅತ್ಯಗತ್ಯ. ಕುಮಾರವ್ಯಾಸ ಯೋಗೀಂದ್ರ ಮತ್ತು ಕವೀಂದ್ರ. ಹಿಂದೆ ಆತನ ಕಾವ್ಯದ ವಾಚನ ಮನೆಗಳಲ್ಲಿ ನಡೆಯುತ್ತಿತ್ತು. ಇಂದೂ ಮುಂದುವರಿಯಲಿ ಎಂದು ಪ್ರಸಾರಾಂಗ ಮರುಮುದ್ರಿಸಿದೆ. ಪ್ರಸಾರಾಂಗದ ಇತಿಹಾಸದಲ್ಲಿ ಪರ್ವದಿನ. ನಂಜಯ್ಯ ಹೊಂಗನೂರು ಘನವಾದ ಕೆಲಸ ಮಾಡಿದ್ದಾರೆ ಎಂದರು.

ಅಮೆರಿಕದ ನ್ಯೂಯಾರ್ಕ್ ಸ್ಟೋನಿಬ್ರೂಕ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಪ್ರೊ.ಎಸ್. ಎನ್. ಶ್ರೀಧರ್ ಮಾತನಾಡಿ, ಕನ್ನಡದ ಶೇಕ್ಸ್ಪಿಯರ್ ಕುಮಾರವ್ಯಾಸ ಸಾಹಿತ್ಯದ ಕುರಿತಾದ ಹೆಚ್ಚಿನ ಅಧ್ಯಯನಕ್ಕೆ ಸಂಶೋಧನಾ ಕೇಂದ್ರ ಸ್ಥಾಪಿಸುವ ಅಗತ್ಯತೆ ಇದೆ. ಕುಮಾರವ್ಯಾಸ ಶೇಕ್ಸ್ಪಿಯರ್‌ಗಿಂತ 50 ವರ್ಷ ಹಿರಿಯ. ಭಾಷೆಯನ್ನು ಶೇಕ್ಸ್ಪಿಯರ್‌ನಂತೆ ಬಳಸಿದ್ದಾನೆ. ವ್ಯಾಕರಣ ಸೂತ್ರವನ್ನು ಮುರಿದು, ಛಂದಸ್ಸು ತಿರುಚಿ, ಹೊಸ ಪದಗಳ ಸೃಷ್ಟಿಸಿದ ಕಲಾಕಾರ ಕುಮಾರವ್ಯಾಸ ಎಂದರು.

ಮೈಸೂರು ವಿವಿ ಕುಲಪತಿ ಪ್ರೊ.ಎನ್. ಕೆ.ಲೋಕನಾಥ್ ಅಧ್ಯಕ್ಷತೆವಹಿಸಿ ಮಾತನಾಡಿ, ಕುಲಪತಿಯಾಗಿ ಎಲ್ಲ ಪ್ರಾಧ್ಯಾಪಕರಿಗೆ ಕೆಲಸ ಮಾಡುವಂತೆ ಹೇಳಬಹುದು. ಆದರೆ, ಕೆಲವೇ ಪ್ರಾಧ್ಯಾಪಕರು ಕೆಲಸ ಮಾಡುತ್ತಾರೆ. ಅವರಲ್ಲಿ ಡಾ.ನಂಜಯ್ಯ ಹೊಂಗನೂರು ಒಬ್ಬರು. ಪ್ರಸಾರಾಂಗದ ನಿರ್ದೇಶಕರಾದ ಬಳಿಕ ಹಲವಾರು ಕೆಲಸ ಮಾಡಿದ್ದಾರೆ. ರಿಯಾಯಿತಿ ದರದಲ್ಲಿ 25 ಲಕ್ಷಗಳ ಪುಸ್ತಕ ಮಾರಾಟ ಮಾಡಿದ್ದಾರೆ ಎಂದರು. ವಿದ್ವಾಂಸ ಪ್ರೊ.ಕೃಷ್ಣಮೂರ್ತಿ ಹನೂರು, ಪ್ರಸಾರಾಂಗದ ನಿರ್ದೇಶಕ ಪ್ರೊ.ಎಂ. ನಂಜಯ್ಯ ಹೊಂಗ ನೂರು ಮಾತನಾಡಿದರು. ಕೃತಿಯ ಕರಡು ಪರಿಶೀಲಿಸಿದ ಮಂಜುಳಾರನ್ನು ಸನ್ಮಾನಿಸಲಾ ಯಿತು. ಪ್ರಸಾರಾಂಗದ ಅಧೀಕ್ಷಕ ಚನ್ನಬಸಪ್ಪ, ಸಹಾಯಕ ನಿರ್ದೇಶಕ ಅನಿಲ್‌ಕುಮಾರ್, ಪ್ರಿಂಟಿಂಗ್ ಪ್ರೆಸ್ ನಿರ್ದೇಶಕ ಸತೀಶ್, ಕೆ.ಟಿ.ವೀರಪ್ಪ, ಬಿ.ಕೆ. ಜಗದೀಶ್, ಪ್ರೊ.ಕಾಳಚನ್ನೇಗೌಡ, ಎನ್.ಎಂ.ತಳವಾರ್, ಕೆ.ಶಿವಾರೆಡ್ಡಿ, ಜೈನಹಳ್ಳಿ ಸಿದ್ದಲಿಂಗಪ್ಪ, ಮೈಲಹಳ್ಳಿ ರೇವಣ್ಣ, ಪ್ರೊ. ಚಂದರ್, ಪ್ರೀತಿ ನಾಗರಾಜ್ ಇದ್ದರು.

| ಕ್ರ ಸಂ | ಬಡಾವಣೆ ಹೆಸರು | ನಿವೇಶನ ಸಂಖ್ಯೆ | ಮಧ್ಯಂತರ/ ಮೂಲೆ | ರಸ್ತೆ ಅಭಿಮುಖ ದಿಕ್ಕು ಹಾಗೂ ಅಗಲ (ಮೀ.ಗಳಲ್ಲಿ) | ಅಳತೆ ಮೀ ಗಳಲ್ಲಿ | | ವಿಸ್ತೀರ್ಣ ಚ.ಮೀ ಗಳಲ್ಲಿ | ಚ.ಮೀ.ಗೆ ನಿಗಧಿ ಪಡಿಸಿರುವ ದರ | ನಿವೇಶನದ ಮೌಲ್ಯ (ರೂ.ಲಕ್ಷ ಗಳಲ್ಲಿ) |
|---|---|---|---|---|---|---|---|---|---|
| | | | | | ಉ–ದ | ಪೂ–ಪ | | | |
| 142 | ಶಾಂತವೇರಿ ಗೋಪಾಲಗೌಡ | 120 | ಮೂಲೆ | ದ:12.00ಪೂ:9.00 | 12.00 | 18.00 | 216.00 | 59180.00 | 127.83 |
| 143 | ಲಾಲ್ ಬಹದ್ದೂರ್ ಶಾಸ್ತ್ರಿ ನಗರ | 280 | ಮೂಲೆ | ದ:9.00 ಪ:12.00 | 13.00 | 18.00 | 234.00 | 59180.00 | 138.48 |
| 144 | ಲಾಲ್ ಬಹದ್ದೂರ್ ಶಾಸ್ತ್ರಿ ನಗರ | 300 | ಮೂಲೆ | ಉ:12.00 ಪೂ:9.00 | 9.00 | 12.00 | 108.00 | 59180.00 | 63.91 |
| 145 | ಲಾಲ್ ಬಹದ್ದೂರ್ ಶಾಸ್ತ್ರಿ ನಗರ | 318 | ಮೂಲೆ | ಉ:12.00 ಪ:12.00 | 12.00 | 6.00 | 72.00 | 59180.00 | 42.61 |
| 146 | ಲಾಲ್ ಬಹದ್ದೂರ್ ಶಾಸ್ತ್ರಿ ನಗರ | 338 | ಮೂಲೆ | ಉ:12.00 ಪೂ.9.00 | 12.00 | 9.00 | 108.00 | 59180.00 | 63.91 |
| 147 | ಲಾಲ್ ಬಹದ್ದೂರ್ ಶಾಸ್ತ್ರಿ ನಗರ | 363 | ಮೂಲೆ | ದ:9.00 ಪ:12.00 | 12.00 | 13.70 | 164.40 | 59180.00 | 97.29 |
| 148 | ಲಾಲ್ ಬಹದ್ದೂರ್ ಶಾಸ್ತ್ರಿ ನಗರ | 485 | ಮೂಲೆ | ದ:9.00ಪ:12.00 | 9.00 | 12.00 | 108.00 | 59180.00 | 63.91 |
| 149 | ಲಾಲ್ ಬಹದ್ದೂರ್ ಶಾಸ್ತ್ರಿ ನಗರ | 653 | ಮೂಲೆ | ದ:9.00ಪ:9.00 | 13.00 | 12.00 | 156.00 | 59180.00 | 92.32 |
| 150 | ಲಾಲ್ ಬಹದ್ದೂರ್ ಶಾಸ್ತ್ರಿ ನಗರ | 668 | ಮೂಲೆ | ಉ.9.00 ಪ:9.00 | 9.00 | 12.00 | 108.00 | 59180.00 | 63.91 |
| 151 | ಲಾಲ್ ಬಹದ್ದೂರ್ ಶಾಸ್ತ್ರಿ ನಗರ | 863 | ಮೂಲೆ | ಉ.9.00 ಪ:12.00 | 18.00 | 12.00 | 216.00 | 59180.00 | 127.83 |
| 152 | ಲಾಲ್ ಬಹದ್ದೂರ್ ಶಾಸ್ತ್ರಿ ನಗರ | 923 | ಮೂಲೆ | ಉ.18.00 ಪ:12.00 | 24.00 | 15.00 | 360.00 | 59180.00 | 213.05 |
| 153 | ಲಾಲ್ ಬಹದ್ದೂರ್ ಶಾಸ್ತ್ರಿ ನಗರ | 1313 | ಮೂಲೆ | ಉ.9.00 ಪೂ:9.00 | 9.00 | 12.00 | 108.00 | 59180.00 | 63.91 |
| 154 | ಲಾಲ್ ಬಹದ್ದೂರ್ ಶಾಸ್ತ್ರಿ ನಗರ | 1314 | ಮೂಲೆ | ಉ:9.00 ಪ:12.00 | 12.00 | 18.00 | 216.00 | 59180.00 | 127.83 |
| 155 | ಲಾಲ್ ಬಹದ್ದೂರ್ ಶಾಸ್ತ್ರಿ ನಗರ | 1322 | ಮೂಲೆ | ಉ:12.00 ಪ:12.00 | 9.00 | 12.00 | 108.00 | 59180.00 | 63.91 |
| 156 | ಲಾಲ್ ಬಹದ್ದೂರ್ ಶಾಸ್ತ್ರಿ ನಗರ | 1343 | ಮೂಲೆ | ಉ:12.00 ಪ:12.00 | 12.00 | 9.00 | 108.00 | 59180.00 | 63.91 |
| 157 | ಲಾಲ್ ಬಹದ್ದೂರ್ ಶಾಸ್ತ್ರಿ ನಗರ | 1415 | ಮೂಲೆ | ದಉ.9.00 ಪೂ:12.00 | 12.00 | 18.00 | 216.00 | 59180.00 | 127.83 |
| 158 | ಲಲಿತಾದ್ರಿನಗರ (ದಕ್ಷಿಣ) | 721 | ಮೂಲೆ | ಉತ್ತರ18.00 | 9.00 | 12.00 | 108.00 | 59180.00 | 63.91 |
| 159 | ಲಲಿತಾದ್ರಿನಗರ (ದಕ್ಷಿಣ) | 722 | ಮೂಲೆ | ಉತ್ತರ18.00 | 9.00 | 12.00 | 108.00 | 59180.00 | 63.91 |
| 160 | ಗಾಯತ್ರಿಪುರಂ 1ನೇ ಹಂತ | 388 | ಮಧ್ಯಂತರ | ಪಶ್ಚಿಮ 9.00 | 9.00 | 14.00 | 126.00 | 64560.00 | 81.35 |
| 161 | ಗಾಯತ್ರಿಪುರಂ 1ನೇ ಹಂತ | 373 | ಮಧ್ಯಂತರ | ಪೂರ್ವ9.00 | 12.00 | 15.00 | 180.00 | 64560.00 | 116.21 |
| 162 | ಗಾಯತ್ರಿಪುರಂ 1ನೇ ಹಂತ | 345 | ಮಧ್ಯಂತರ | ಪಶ್ಚಿಮ9.00 | 10.00 | 12.00 | 120.00 | 64560.00 | 77.47 |
| 163 | ಗಾಯತ್ರಿಪುರಂ 1ನೇ ಹಂತ | 341 | ಮಧ್ಯಂತರ | ಪಶ್ಚಿಮ 9.00 | 10.70 | 12.00 | 128.4 | 64560.00 | 82.90 |
| 164 | ಗಾಯತ್ರಿಪುರಂ 1ನೇ ಹಂತ | 314 | ಮಧ್ಯಂತರ | ಪಶ್ಚಿಮ 9.00 | 12.00 | 9.00 | 108.00 | 64560.00 | 69.72 |
| 165 | ಸಾತಗಳ್ಳಿ 2ನೇ ಹಂತ | 4622 | ಮೂಲೆ | ಪೂ–ಉ 9.00 | (9.00+9.30)/2 | (6.60+6.60)/2 | 60.39 | 37660.00 | 22.74 |
| 166 | ಸಾತಗಳ್ಳಿ 2ನೇ ಹಂತ | 4649 | ಮೂಲೆ | 9.00 ಪ – ಉ | 9.00 | 6.00 | 54.00 | 37660.00 | 20.34 |
| 167 | ಸಾತಗಳ್ಳಿ 2ನೇ ಹಂತ | 4648 | ಮೂಲೆ | 9.00 ದ – ಪ | 9.00 | (6.10+6.30)/2 | 55.80 | 37660.00 | 21.01 |
| 168 | ಸಾತಗಳ್ಳಿ 2ನೇ ಹಂತ | 4597 | ಮೂಲೆ | 9.00 ಉ – ಪ | 9.20 | 6.10 | 56.12 | 37660.00 | 21.13 |
| 169 | ಸಾತಗಳ್ಳಿ 2ನೇ ಹಂತ | 4596 | ಮೂಲೆ | 9.00 ಪ – ದ | 9.00 | (6.15+6.20)/2 | 55.57 | 37660.00 | 20.93 |
| 170 | ಸಾತಗಳ್ಳಿ 2ನೇ ಹಂತ | 4545 | ಮೂಲೆ | 9.00 ಉ | 9.00 | (6.10+6.15)/2 | 55.12 | 37660.00 | 20.76 |
| 171 | ಸಾತಗಳ್ಳಿ 2ನೇ ಹಂತ | 5406 | ಮೂಲೆ | 9.00 ಪೂ – ಪ | 9.00 | (6.00+8.50)/2 | 65.25 | 37660.00 | 24.57 |
| 172 | ಸಾತಗಳ್ಳಿ 2ನೇ ಹಂತ | 5405 | ಮಧ್ಯಂತರ | 9.00 ದ | 9.00 | 6.00 | 54.00 | 32280.00 | 17.43 |
| 173 | ಸಾತಗಳ್ಳಿ 2ನೇ ಹಂತ | 5404 | ಮಧ್ಯಂತರ | 9.00 ದ | 9.00 | 6.00 | 54.00 | 32280.00 | 17.43 |
| 174 | ಸಾತಗಳ್ಳಿ 2ನೇ ಹಂತ | 5403 | ಮಧ್ಯಂತರ | 9.00 ದ | 9.00 | 6.00 | 54.00 | 32280.00 | 17.43 |
| 175 | ಸಾತಗಳ್ಳಿ 2ನೇ ಹಂತ | 5402 | ಮಧ್ಯಂತರ | 9.00 ದ | 9.00 | 6.00 | 54.00 | 32280.00 | 17.43 |
| 176 | ಹಂಚ್ಯಾ – ಸಾತಗಳ್ಳಿ 'ಬಿ' ವಲಯ | 1698 | ಮಧ್ಯಂತರ | 9.00 ಪೂ | 15.00 | 24.00 | 360.00 | 48643.00 | 175.11 |
| 177 | ಹಂಚ್ಯಾ – ಸಾತಗಳ್ಳಿ 'ಬಿ' ವಲಯ | 1697 | ಮಧ್ಯಂತರ | 9.00 ಪೂ | 15.00 | 24.00 | 360.00 | 48643.00 | 175.11 |
| 178 | ಹಂಚ್ಯಾ – ಸಾತಗಳ್ಳಿ 'ಬಿ' ವಲಯ | 1696 | ಮಧ್ಯಂತರ | 9.00 ಪೂ | 15.00 | 24.00 | 360.00 | 48643.00 | 175.11 |
| 179 | ಹಂಚ್ಯಾ – ಸಾತಗಳ್ಳಿ 'ಬಿ' ವಲಯ | 1695 | ಮಧ್ಯಂತರ | 9.00 ಪೂ | 15.00 | 24.00 | 360.00 | 48643.00 | 175.11 |
| 180 | ಹಂಚ್ಯಾ – ಸಾತಗಳ್ಳಿ 'ಬಿ' ವಲಯ | 1694 | ಮಧ್ಯಂತರ | 9.00 ಪೂ | 15.00 | 24.00 | 360.00 | 48643.00 | 175.11 |
| 181 | ಹಂಚ್ಯಾ – ಸಾತಗಳ್ಳಿ 'ಬಿ' ವಲಯ | 1693 | ಮಧ್ಯಂತರ | 9.00 ಪೂ | 15.00 | 24.00 | 360.00 | 48643.00 | 175.11 |
| 182 | ಹಂಚ್ಯಾ – ಸಾತಗಳ್ಳಿ 'ಬಿ' ವಲಯ | 1692 | ಮಧ್ಯಂತರ | 9.00 ಪೂ | 15.00 | 24.00 | 360.00 | 48643.00 | 175.11 |
| 183 | ಹಂಚ್ಯಾ – ಸಾತಗಳ್ಳಿ 'ಬಿ' ವಲಯ | 1688 | ಮಧ್ಯಂತರ | 9.00 ಪೂ | 15.00 | 24.00 | 360.00 | 48643.00 | 175.11 |
| 184 | ಹಂಚ್ಯಾ – ಸಾತಗಳ್ಳಿ 'ಬಿ' ವಲಯ | 1689 | ಮಧ್ಯಂತರ | 9.00 ಪೂ | 15.00 | 24.00 | 360.00 | 48643.00 | 175.11 |
| 185 | ಹಂಚ್ಯಾ – ಸಾತಗಳ್ಳಿ 'ಬಿ' ವಲಯ | 1690 | ಮಧ್ಯಂತರ | 9.00 ಪೂ | 15.00 | 24.00 | 360.00 | 48643.00 | 175.11 |
| 186 | ಹಂಚ್ಯಾ – ಸಾತಗಳ್ಳಿ 'ಬಿ' ವಲಯ | 1691 | ಮಧ್ಯಂತರ | 9.00 ಪೂ | 15.00 | 24.00 | 360.00 | 48643.00 | 175.11 |
| 187 | ವಸಂತನಗರ | 651 | ಮಧ್ಯಂತರ | 12.00 ಪೂ– ಪ | 9.00 | 12.00 | 108.00 | 37660.00 | 40.67 |
| 188 | ವಸಂತನಗರ | 682 | ಮಧ್ಯಂತರ | 12.00 ಪೂ– ಪ | 9.00 | 12.00 | 108.00 | 37660.00 | 40.67 |
| 189 | ವಸಂತನಗರ | 725 | ಮಧ್ಯಂತರ | ಪಶ್ಚಿಮ 12.00 | 9.00 | 12.00 | 108.00 | 37660.00 | 40.67 |
| 190 | ವಸಂತನಗರ | 754 | ಮಧ್ಯಂತರ | ಪಶ್ಚಿಮ 12.00 | 9.00 | 12.00 | 108.00 | 37660.00 | 40.67 |
| 191 | ವಸಂತನಗರ | 9 | ಮಧ್ಯಂತರ | ಪಶ್ಚಿಮ 9.00 | 12.00 | 18.00 | 216.00 | 37660.00 | 81.35 |
| 192 | ವಸಂತನಗರ | 10 | ಮಧ್ಯಂತರ | ಪಶ್ಚಿಮ 9.00 | 12.00 | 18.00 | 216.00 | 37660.00 | 81.35 |
| 193 | ವಸಂತನಗರ | 11 | ಮಧ್ಯಂತರ | ಪಶ್ಚಿಮ 9.00 | 12.00 | 18.00 | 216.00 | 37660.00 | 81.35 |
| 194 | ವಸಂತನಗರ | 12 | ಮಧ್ಯಂತರ | ಪಶ್ಚಿಮ 9.00 | 12.00 | 18.00 | 216.00 | 37660.00 | 81.35 |
| 195 | ವಸಂತನಗರ | 210 | ಮಧ್ಯಂತರ | ಪಶ್ಚಿಮ 9.00 | 12.00 | 18.00 | 216.00 | 37660.00 | 81.35 |
| 196 | ವಸಂತನಗರ | 1910 | ಮಧ್ಯಂತರ | ಪೂರ್ವ 24.00 | 15.00 | 24.00 | 360.00 | 37660.00 | 135.58 |
| 197 | ವಸಂತನಗರ | 1911 | ಮಧ್ಯಂತರ | ಪೂರ್ವ 24.00 | 15.00 | 24.00 | 360.00 | 37660.00 | 135.58 |
| 198 | ವಸಂತನಗರ | 1912 | ಮಧ್ಯಂತರ | ಪೂರ್ವ 24.00 | 15.00 | 24.00 | 360.00 | 37660.00 | 135.58 |
| 199 | ವಸಂತನಗರ | 1913 | ಮಧ್ಯಂತರ | ಪೂರ್ವ 24.00 | 15.00 | 24.00 | 360.00 | 37660.00 | 135.58 |
| 200 | ವಸಂತನಗರ | 1914 | ಮಧ್ಯಂತರ | ಪೂರ್ವ 24.00 | 15.00 | 24.00 | 360.00 | 37660.00 | 135.58 |
| | | | | | | | | ಒಟ್ಟು (ಲಕ್ಷಗಳು) | 18629.43 |

### ಇ–ಹರಾಜಿನ ಷರತ್ತು ಮತ್ತು ನಿಯಮ ನಿಬಂಧನೆಗಳು ಕೆಳಕಂಡಂತಿವೆ.

1) ಹರಾಜಿನಲ್ಲಿ ಪಾಲ್ಗೊಳ್ಳುವವರು ಭಾರತೀಯ ಪ್ರಜೆಯಾಗಿರಬೇಕು, ಭಾರತ ದೇಶದಲ್ಲಿ ನೋಂದಣಿಯಾಗಿರುವ ಪಾಲುದಾರ ಸಂಸ್ಥೆ/ಲಿಮಿಟೆಡ್ ಕಂಪೆನಿಗಳು/ಟ್ರಸ್ಟ್‌ಗಳು ಭಾಗವಹಿಸಬಹುದಾಗಿದೆ. 2) ಇ–ಹರಾಜಿನಲ್ಲಿ ಭಾಗವಹಿಸಲಿಚ್ಚಿಸುವವರು ಇ–ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಮುಖಪುಟದ ಡೌನ್‌ಲೋಡ್‌ನಲ್ಲಿ ಟೆಂಡರ್‌ದಾರರಿಗೆ ಬಳಕೆದಾರರ ಕೈಪಿಡಿಗಳು ಇಲ್ಲಿ **New e-Auction Bidding user manual** ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್– 080–46010000 ಮತ್ತು 080–68948777 ಗೆ ಸಂಪರ್ಕಿಸಬಹುದು. 3) ಹರಾಜಿನಲ್ಲಿ ಪಾಲ್ಗೊಳ್ಳುವವರು **https://kppp.karnataka.gov.in** ವೆಬ್‌ಸೈಟ್ ನಿಂದ ನಿಗಧಿತ ಮಾದರಿ ಸಹಿಯ ನಮೂನೆ (ಇದರಲ್ಲಿ ಅರ್ಜಿದಾರರ ಹೆಸರು ಮತ್ತು ತಂದೆಯ ಹೆಸರನ್ನು ಕನ್ನಡ ಹಾಗೂ ಅಂಗ್ಲ ಭಾಷೆಯಲ್ಲಿ ನಮೂದಿಸುವುದು) ಹಾಗೂ ಸಂಪರ್ಕದ ಮಾಹಿತಿಯ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು, ವಿವರಗಳನ್ನು ಭರ್ತಿ ಮಾಡಿ, ವೆಬ್‌ಸೈಟ್‌ನಲ್ಲಿ ಅಪಲೋಡ್ ಮಾಡಬೇಕಾಗಿರುತ್ತದೆ. 4) ಇ–ಹರಾಜಿನ ಮೂಲಕ ನಿವೇಶನವನ್ನು ಜಂಟಿಯಾಗಿ ಖರೀದಿಸುವವರು ಜಂಟಿಯಾಗಿ ದಾಖಲೆಗಳನ್ನು ಇ–ಹರಾಜಿನ ಪೋರ್ಟಲ್‌ನಲ್ಲಿ ಅಪಲೋಡ್ ಮಾಡಬೇಕು. 5) ಹರಾಜಿಗೊಳಪಡಿಸಿರುವ ನಿವೇಶನಗಳು ಎಲ್ಲಿ ಹೇಗೆ ಇವೆಯೋ ಅದೇ ಸ್ಥಿತಿಯಲ್ಲಿ ಯಶಸ್ವಿ ಬಿಡ್ಡುದಾರರಿಗೆ ಹಂಚಿಕೆ ಮಾಡಲಾಗುವುದು, ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ನಿವೇಶನದ ಸ್ಥಳ, ರಸ್ತೆಯ ಅಗಲ ಮುಂತಾದವುಗಳನ್ನು ಖುದ್ದಾಗಿ ಪರಿಶೀಲಿಸಿಕೊಂಡು ಹರಾಜಿನಲ್ಲಿ ಭಾಗವಹಿಸುವುದು. ರಸ್ತೆಯ ಅಗಲದ ವ್ಯತ್ಯಾಸ ಅಥವಾ ಇನ್ಯಾವುದೇ ಕಾರಣಗಳಿಂದ ಹರಾಜಿನಲ್ಲಿ ಪಡೆದ ನಿವೇಶನಗಳನ್ನು ರದ್ದುಪಡಿಸಲಾಗುವುದಿಲ್ಲ / ಬದಲಿ ನಿವೇಶನ ನೀಡಲಾಗುವುದಿಲ್ಲ ಹಾಗೂ ಹರಾಜಿನಲ್ಲಿ ಹಂಚಿಕೆಯಾದ ನಿವೇಶನಗಳಿಗೆ ಬದಲಿ ನಿವೇಶನ ನೀಡಲು ನಿಯಮಾವಳಿಯಲ್ಲಿ ಅವಕಾಶವಿರುವುದಿಲ್ಲ. 6) ಪ್ರತಿ ನಿವೇಶನದ ಹರಾಜಿನಲ್ಲಿ ಕನಿಷ್ಠ ಇಬ್ಬರು ಬಿಡ್ಡುದಾರರು ಭಾಗವಹಿಸಬೇಕಾಗಿರುತ್ತದೆ. ಒಬ್ಬರೇ ಬಿಡ್ಡುದಾರರು ಇದ್ದಲ್ಲಿ ಅಂತಹ ಬಿಡ್ಡನ್ನು ತಿರಸ್ಕರಿಸಲಾಗುವುದು. 7) ಇ–ಹರಾಜಿನ ಅಂತಿಮ ದಿನಾಂಕದ ಅಂತಿಮ ಸಮಯ/ಕ್ಷಣದಲ್ಲಿ ಪ್ರಗತಿಯಲ್ಲಿರುವ ಬಿಡ್ಡುಗಳಿಗೆ ಪ್ರತಿ ಬಿಡ್ಡಿಗೆ 5 ನಿಮಿಷ ಡೆಲ್ಟಾ ಟೈಂ ಇದ್ದು, ಉದಾ: ಹರಾಜು ಅಂತ್ಯವಾಗುವ ವೇಳೆ 16.00 ಆಗಿದ್ದು, ನೀವು 15.57 ಕ್ಕೆ ಬಿಡ್ ಮಾಡಿದಾಗ 16.02 ರವರೆಗೆ ಅವಧಿ ವಿಸ್ತರಣೆಯಾಗುತ್ತದೆ. ಇದು ಅಂತಿಮವಾಗುವವರೆಗೆ ವಿಸ್ತರಣೆಯಾಗುತ್ತಾ ಹೋಗುತ್ತದೆ. 8) ಹರಾಜಿಗೊಳಪಡಿಸಲ್ಪಟ್ಟಿರುವ ನಿವೇಶನಗಳ ದರ ರೂ.1.00 ಕೋಟಿಗಿಂತ ಕಡಿಮೆ ಇದ್ದರೆ ರೂ.2.00 ಲಕ್ಷ ಇ.ಎಂ.ಡಿ ಮತ್ತು ನಿವೇಶನಗಳ ದರ ರೂ.1.00 ಕೋಟಿ ಹಾಗೂ ಅಧಿಕವಿದ್ದಲ್ಲಿ ರೂ.4.00 ಲಕ್ಷ ಇ.ಎಂ.ಡಿ ಶುಲ್ಕವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **ICICI** ಬ್ಯಾಂಕ್‌ಗೆ **DEBIT CARD/CREDIT CARD/NET BANKING** ಮೂಲಕ ಪಾವತಿಸಬೇಕಾಗಿರುತ್ತದೆ. ಇದರೊಂದಿಗೆ ಹರಾಜು ಸೇವಾ ಶುಲ್ಕವನ್ನು ಬಿಡ್ಡುದಾರರೇ ಭರಿಸತಕ್ಕದ್ದು. 9) ರೂ.1.00 ಕೋಟಿಗಿಂತ ಕಡಿಮೆ ಮೌಲ್ಯದ ನಿವೇಶನಗಳಿಗೆ ಕನಿಷ್ಠ ಬಿಡ್ ಏರಿಕೆ ಮೊತ್ತ ರೂ.25,000/– ಮತ್ತು ರೂ.1.00 ಕೋಟಿ ಹಾಗೂ ಮೇಲ್ಪಟ್ಟ ಮೌಲ್ಯದ ನಿವೇಶನಗಳಿಗೆ ರೂ.1,00,000/– ಗಳಾಗಿರುತ್ತದೆ. 10) ಅತ್ಯಧಿಕ ಮೊತ್ತದ ಬಿಡ್ಡುದಾರರು ಬಿಡ್ ಅಂಗೀಕೃತವಾದ ಬಗ್ಗೆ **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಪರಿಶೀಲಿಸಿಕೊಂಡು ಬಿಡ್ ಮೌಲ್ಯದ ಶೇ.25 ರಷ್ಟು ಹಣವನ್ನು ಅವರ ಸ್ವಂತ ಬ್ಯಾಂಕ್ ಖಾತೆಯಿಂದಲೇ ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ ಮೂಲಕ (ಇ.ಎಂ.ಡಿ. ರೂ.4.00 ಲಕ್ಷ ಅಥವಾ ರೂ.2.00 ಲಕ್ಷ ಹೊರತು ಪಡಿಸಿ) ಬಿಡ್ಡು ಅಂಗೀಕರಿಸಿದ 72 ಗಂಟೆಯೊಳಗಾಗಿ ಖಾತೆದಾರರು ಆಯುಕ್ತರು, ಮೈ.ಅ.ಪ್ರಾ, ಮೈಸೂರು ರವರ ಹೆಸರಿನಲ್ಲಿರುವ **Commissioner MDA Mysore, Bank of Baroda, Account No.89260100004660 (IFSC Code No. BARB0VJMUDA,** 5ನೇ ಅಕ್ಷರ ಸೊನ್ನೆ ಆಗಿರುತ್ತದೆ), ಖಾತೆಗೆ ಪಾವತಿ ಮಾಡಬಹುದಾಗಿರುತ್ತದೆ. ಶೇಕಡ 25 ರಷ್ಟು ಹಣ ಪಾವತಿಸಿದ ಬಗ್ಗೆ ದಾಖಲಾತಿ ಒದಗಿಸುವ ಸಂದರ್ಭದಲ್ಲಿ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಸಲ್ಲಿಸುವುದು. ಯಶಸ್ವಿ ಬಿಡ್ಡುದಾರರು ಬಿಡ್ ಮೊಬಲಗಿನ ಶೇಕಡ 25 ಭಾಗ ಹಣ ಪಾವತಿಸಲು ವಿಫಲರಾದಲ್ಲಿ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಸದರಿ ನಿವೇಶನವನ್ನು ಮರು ಹರಾಜಿಗೆ ಒಳಪಡಿಸಲಾಗುವುದು. 11) ಹರಾಜಿಗೆ ಪ್ರಕಟಿಸಿದ ನಿವೇಶನಗಳನ್ನು ಯಾವುದೇ ಕಾರಣ ನೀಡದೇ ಹರಾಜು ಅವಧಿಯ ಯಾವುದೇ ಸಮಯದಲ್ಲಿ ಹಿಂಪಡೆಯುವ ಹಕ್ಕನ್ನು ಮೈ.ಅ.ಪ್ರಾ. ಕಾಯ್ದಿರಿಸಿಕೊಂಡಿದೆ. 12) ಹರಾಜಾದ ನಿವೇಶನಗಳನ್ನು 1991ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ಮೂಲೆ ಮತ್ತು ವಾಣಿಜ್ಯ ನಿವೇಶನಗಳ ಹಂಚಿಕೆ) ನಿಯಮ ಕಲಂ 6(2) ರನ್ವಯ ಅಂತಿಮ ಬಿಡ್ಡನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರು ಹೊಂದಿರುತ್ತಾರೆ. 13) ಇ–ಹರಾಜಿನಲ್ಲಿ ವಿಫಲರಾದವರಿಗೆ ಹರಾಜು ಅಂತಿಮಗೊಂಡ ನಂತರ ಇ.ಎಂ.ಡಿ ಮೊತ್ತವನ್ನು **https://kppp.karnataka.gov.in** ರವರು ನೇರವಾಗಿ ಬ್ಯಾಂಕ್ ಖಾತೆಗೆ ಮರುಪಾವತಿ ಮಾಡಲು ಕ್ರಮವಹಿಸುತ್ತಾರೆ. 14) ಬಿಡ್ಡುದಾರರಿಗೆ ಬಿಡ್ಡಿನಲ್ಲಿ ಅಂತಿಮಗೊಂಡ ನಿವೇಶನಗಳನ್ನು ಹಸ್ತಾಂತರಿಸುವ ಸಂದರ್ಭದಲ್ಲಿ ಒಟ್ಟು ವಿಸ್ತೀರ್ಣದಲ್ಲಿ ಕಡಿಮೆ ಇದ್ದಲ್ಲಿ ಪಾವತಿಸಲ್ಪಟ್ಟಿರುವ ಹೆಚ್ಚುವರಿ ಮೊತ್ತವನ್ನು ಮರುಪಾವತಿಸಲಾಗುವುದು ಹಾಗೂ ಹೆಚ್ಚುವರಿ ವಿಸ್ತೀರ್ಣವಿದ್ದಲ್ಲಿ, ಸದರಿ ವಿಸ್ತೀರ್ಣಕ್ಕೆ ಹೆಚ್ಚುವರಿ ಹಣ ಪಾವತಿಸಲು ತಿಳುವಳಿಕೆ ನೀಡಲಾಗುವುದು. ಇದಕ್ಕೆ ಬಿಡ್ಡುದಾರರು ಒಪ್ಪದಿದ್ದಲ್ಲಿ ಸದರಿಯವರು ಪಾವತಿಸಿರುವ ಶೇ.25 ರಷ್ಟು ಮೊಬಲಗನ್ನು ಮುಟ್ಟಗೋಲು ಹಾಕಿಕೊಂಡು ಹರಾಜನ್ನು ರದ್ದುಗೊಳಿಸಲಾಗುವುದು. 15) "ಬಿಡ್ಡುದಾರರು ಬಿಡ್ ಮೊಬಲಗಿನ ಶೇಕಡ 75 ರಷ್ಟು ಹಣವನ್ನು ಸಹ ಅವರ ಸ್ವಂತ ಬ್ಯಾಂಕ್ ಖಾತೆಯಿಂದಲೇ ಪಾವತಿಸಿದ ನಂತರ ಹಣ ಪಾವತಿಸಿರುವ ರಸೀದಿ ಪ್ರತಿಯೊಂದಿಗೆ ಕ್ರಯಪತ್ರ ಕೋರಿ ಅರ್ಜಿ ಸಲ್ಲಿಸುವುದು. 16) ಬಿಡ್ಡುದಾರರಿಗೆ ಬಿಡ್ಡು ಮೊತ್ತದ ಉಳಿಕೆ ಶೇ.75 ರಷ್ಟು ಮೊತ್ತ ಪಾವತಿಸಲು ಬಡ್ಡಿ ರಹಿತವಾಗಿ ಹರಾಜು ಸ್ಥಿರೀಕರಣ ಪತ್ರ ಸ್ವೀಕರಿಸಿದ ದಿನಾಂಕದಿಂದ 45 ದಿವಸಗಳು ಅವಕಾಶವಿದ್ದು, ನಂತರದ 90 ದಿನಗಳ ಅವಧಿಗೆ ಶೇ.18 ರ ಬಡ್ಡಿ ದರದಲ್ಲಿ ಹಾಗೂ ತದನಂತರದ 30 ದಿನಗಳ ಅವಧಿಗೆ ಶೇ.21 ರ ಬಡ್ಡಿ ದರದಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದು ಪಾವತಿಸಲು ಅವಕಾಶವಿರುತ್ತದೆ. 17) ಆದಾಯ ತೆರಿಗೆ ಕಾಯ್ದೆ 1961 ರ ಕಾಲಂ 194 ಐಎ ಪ್ರಕಾರ ಹರಾಜಾದ ಸ್ವತ್ತಿನ ಒಟ್ಟು ಮೊತ್ತವು ರೂ.50.00 ಲಕ್ಷ ಮೀರಿದ ಪ್ರಕರಣಗಳಲ್ಲಿ ಹರಾಜು ಖರೀದಿದಾರರು ನಿವೇಶನದ ಒಟ್ಟು ಮೊತ್ತದಲ್ಲಿ ಶೇಕಡ 1 ರಷ್ಟು ಮೊತ್ತವನ್ನು ಕಟಾಯಿಸಿ, ಆದಾಯ ತೆರಿಗೆ ಇಲಾಖೆ ಪಾವತಿಸತಕ್ಕದ್ದು. 18) ಹರಾಜು ಪ್ರಕಟಣೆಯಲ್ಲಿ ನೀಡಿರುವ ರೇಖಾಂಶ ಮತ್ತು ಅಕ್ಷಾಂಕ್ಷಗಳು ಕೆಲವೊಮ್ಮೆ ಕೈತಪ್ಪಿನಿಂದ ನಿಖರವಾಗಿ ನಿವೇಶನವನ್ನು ಗುರುತಿಸದೇ ಇದ್ದ ಪಕ್ಷದಲ್ಲಿ ಪ್ರಕಟಣೆಯಲ್ಲಿ ನೀಡಿರುವ ಸಂಬಂಧಪಟ್ಟ ಅಭಿಯಂತರರನ್ನು ಸಂಪರ್ಕಿಸಿ ಖಚಿತಪಡಿಸಿಕೊಳ್ಳಬಹುದಾಗಿದೆ. ರೇಖಾಂಶ ಮತ್ತು ಅಕ್ಷಾಂಕ್ಷಗಳು ವ್ಯತ್ಯಾಸವಾಗಿರುವುದಾಗಿ ತಿಳಿಸಿ ಪಾವತಿಸಿರುವ ಹಣವನ್ನು ಮರುಪಾವತಿ ಕೋರಿದ್ದಲ್ಲಿ ಮರುಪಾವತಿಸಲು ಅವಕಾಶವಿರುವುದಿಲ್ಲ.

19 "ನಿವೇಶನಗಳ ಸ್ಥಳದ **(Location)**, ಅಭಿಮುಖ, ರಸ್ತೆ ಅಳತೆ ಇನ್ನಿತರೆ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬೇಕಾದ ಅಭಿಯಂತರರ ವಿವರ –

ಅ) ವಲಯ ಕಛೇರಿ–1 – 1. ನಾಚನಹಳ್ಳಿ–ಕುಪ್ಪಲೂರು 3ನೇ ಹಂತ, ಜೆ.ಪಿ.ನಗರ ಬಡಾವಣೆ – ಶ್ರೀಮತಿ.ರೂಪಶ್ರೀ, ಸಾ.ಅ., ಮೊಬೈಲ್ ನಂ.9740029156. ಆ) ವಲಯ ಕಛೇರಿ–2– ದಟ್ಟಗಳ್ಳಿ 3ನೇ ಹಂತ ಬಡಾವಣೆ – ಶ್ರೀ. ರಾಜಶೇಖರ್.ಜಿ, ಕಿ.ಅ., ಮೊಬೈಲ್ ನಂ.9880929640, ಇ) ವಲಯ ಕಛೇರಿ–3 – ವಿಜಯನಗರ 4ನೇ ಹಂತ ಬಡಾವಣೆ – ಶ್ರೀ. ಕೆ.ಪಿ.ಸತೀಶ್‌ಚಂದ್ರ, ಸ.ಅ., ಮೊಬೈಲ್ ನಂ..9480446452. ಈ) ವಲಯ ಕಛೇರಿ–4– ಹೆಬ್ಬಾಳು 2ನೇ ಹಂತ ಬಡಾವಣೆ, ವಿಜಯನಗರ 2ನೇ ಹಂತ ಬಡಾವಣೆ – ಶ್ರೀಮತಿ. ಪವಿತ್ರ.ಆರ್,ಸ.ಅ., ಮೊಬೈಲ್ ನಂ.8197542740. ಉ) ವಲಯ ಕಛೇರಿ–5ಬಿ – ದೇವನೂರು 2ನೇ ಹಂತ 2ನೇ ಫೇಸ್ – ಶ್ರೀ. ಕೆ.ಪಿ.ಸತೀಶ್‌ಚಂದ್ರ, ಸ.ಅ., ಮೊಬೈಲ್ ನಂ..9480446452. ಊ) ವಲಯ ಕಛೇರಿ–6 – ಶಾಂತವೇರಿ ಗೋಪಾಲಗೌಡ ನಗರ, ಲಾಲ್ ಬಹದ್ದೂರ್‌ಶಾಸ್ತ್ರಿ ನಗರ, ಲಲಿತಾದ್ರಿನಗರ (ದಕ್ಷಿಣ) – ಶ್ರೀ. ರಾಜಶೇಖರ್.ಜಿ, ಕಿ.ಅ., ಮೊಬೈಲ್ ನಂ.9880929640, ಋ) ವಲಯ ಕಛೇರಿ–8 – ಸಾತಗಳ್ಳಿ 2ನೇ ಮತ್ತು ಹಂಚ್ಯಾ–ಸಾತಗಳ್ಳಿ 'ಬಿ' ವಲಯ ಬಡಾವಣೆ, ವಸಂತನಗರ – ಶ್ರೀಮತಿ. ಮೇಘನ, ಕಿ.ಅ., ಮೊಬೈಲ್ ನಂ.9480884440. 20) ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು ದೂರವಾಣಿ ಸಂಖ್ಯೆ– 0821–2421629 ಅನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಹಿ/– ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

DIPR/DDMYS/02/KSMCA/992/2025-26

## ಸಂಕ್ಷಿಪ್ತ ಸುದ್ದಿ

### ತುಮಕೂರು ಜಿಲ್ಲೆಯ ರೇಷ್ಮೆ ಬೆಳೆಗಾರರಿಗೆ ಪ್ರಶಸ್ತಿ

**ತುಮಕೂರು:** ಮೈಸೂರು ಕೇಂದ್ರ ರೇಷ್ಮೆ ಮಂಡಳಿಯ ಕೇಂದ್ರೀಯ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ ವತಿಯಿಂದ ನಡೆದ ರೇಷ್ಮೆ ಕೃಷಿ ಮೇಳ2026ರಲ್ಲಿ ಮಂಗಳವಾರ ತುಮಕೂರು ಜಿಲ್ಲೆಯ ಇಬ್ಬರು ರೇಷ್ಮೆ ಬೆಳೆಗಾರರಿಗೆ ರೇಷ್ಮೆ ರೈತರ ಪ್ರಶಸ್ತಿ ಲಭಿಸಿದೆ.

ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ಮರಡಿಪಾಳ್ಯ ಗ್ರಾಮದ ಮಂಜುಳ ಕೋಂ ನಾಗೇಶ್ ಹಾಗೂ ತುಮಕೂರು ತಾಲ್ಲೂಕಿನ ಹಿರೇಗುಂಡಗಲ್ ಗ್ರಾಮದ ಜಯಮ್ಮ ಕೋಂ ಭೂತಯ್ಯ ಅವರಿಗೆ ಪ್ರಶಸ್ತಿ ಲಭಿಸಿದ್ದು, ಇವರು ವೈಜ್ಞಾನಿಕವಾಗಿ ಹಿಪ್ಪು ನೇರಳೆ ತೋಟ ಅಭಿವೃದ್ಧಿಪಡಿಸಿ, ಹೆಚ್ಚಿನ ಇಳುವರಿ ಪಡೆದು ಉತ್ತಮ ಗುಣ ಮಟ್ಟದ ದ್ವಿತಳಿ ರೇಷ್ಮೆ ಗೂಡುಗಳನ್ನು ಬೆಳೆದು ಆರ್ಥಿಕಾಭಿವೃದ್ಧಿ ಹೊಂದಿರುತ್ತಾರೆ.

ಪ್ರಶಸ್ತಿಯನ್ನು ರೇಷ್ಮೆ ಕೃಷಿ ಮೇಳದಲ್ಲಿ ಸನ್ಮಾನ ಪತ್ರದೊಂದಿಗೆ ನೀಡಲಾಗಿದ್ದು, ಇದು ರೇಷ್ಮೆ ಬೆಳೆಗಾರರು ಹಾಗೂ ರೇಷ್ಮೆ ಇಲಾಖೆಗೆ ಹೆಮ್ಮೆಯ ವಿಷಯವಾಗಿದೆ. ಇನ್ನುಳಿದ ರೇಷ್ಮೆ ಬೆಳೆಗಾರರಿಗೆ ಸ್ಫೂರ್ತಿಯಾಗಲಿದೆ ಎಂದು ರೇಷ್ಮೆ ಉಪನಿರ್ದೇಶಕ ಟಿ. ಲಕ್ಷ್ಮೀನರಸಯ್ಯ ತಿಳಿಸಿದ್ದಾರೆ.

### ಬಸ್ ನಿಲ್ದಾಣಗಳಲ್ಲಿ ಬಜೆಟ್ ನೇರ ಪ್ರಸಾರ

**ತುಮಕೂರು:** ಕರ್ನಾಟಕ ಸರ್ಕಾರದ 2026–27ನೇ ಸಾಲಿನ ಆಯವ್ಯಯವನ್ನು ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾರ್ಚ್ 6 ಶುಕ್ರವಾರದಂದು ಮಂಡಿಸಲಿದ್ದಾರೆ.

17ನೇ ಬಾರಿ ಬಜೆಟ್ ಮಂಡಿಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಾಖಲೆ ಸೃಷ್ಟಿಸಿದ್ದು, ಈ ಬಜೆಟ್ ಮಂಡನೆಯ ನೇರ ಪ್ರಸಾರವನ್ನು ರಾಜ್ಯದ ಆಯ್ದ ಬಸ್ ನಿಲ್ದಾಣದ ಟಿವಿಗಳಲ್ಲಿ ಹಮ್ಮಿಕೊಳ್ಳಲಾಗಿದೆ.

ರಾಜ್ಯದ 230 ಸರ್ಕಾರಿ ಬಸ್ ನಿಲ್ದಾಣಗಳಲ್ಲಿ ಪ್ರಸಾರ ಮಾಡಲು ಉದ್ದೇಶಿಸಿದೆ. ಕರ್ನಾಟಕ ರಾಜ್ಯದ ಸುದೀರ್ಘ ಅವಧಿಗೆ ಮುಖ್ಯಮಂತ್ರಿ ಆಗಿ ಕಾರ್ಯನಿರ್ವಹಿಸುತ್ತಿರುವ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ದಿನಾಂಕ 06 ಮಾರ್ಚ್ 2026ರಂದು ವಿಧಾನಸೌಧದಲ್ಲಿ ರಾಜ್ಯದ ಬಜೆಟ್ ಮಂಡಿಸಲಿದ್ದಾರೆ.

ಈ ಮಹತ್ವದ ಬಜೆಟ್ ಮಂಡನೆಯ ನೇರ ಪ್ರಸಾರವನ್ನು ರಾಜ್ಯದ ಜನತೆಗೆ ತಲುಪಿಸುವ ಉದ್ದೇಶದಿಂದ ವೃತ್ತಿ ಸೊಲ್ಯೂಷನ್ಸ್ ಲಿಮಿಟೆಡ್ ಸಂಸ್ಥೆಯು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಯೋಗದೊಂದಿಗೆ ರಾಜ್ಯದಾದ್ಯಂತ ಇರುವ 230 ಸರ್ಕಾರಿ ಬಸ್ ನಿಲ್ದಾಣಗಳಲ್ಲಿ ಇರುವ ತನ್ನ ಡಿಜಿಟಲ್ ಡಿಸ್ಪ್ಲೇ (ಐಇಳ) ಪರದೆಗಳ ಮೂಲಕ ನೇರ ಪ್ರಸಾರ ಮಾಡಲು ಮುಂದಾಗಿದೆ.

ವಿಧಾನಸೌಧದಲ್ಲಿ ನಡೆಯುವ ಬಜೆಟ್ ಮಂಡನೆ ಹಾಗೂ ಬಳಿಕ ನಡೆಯಲಿರುವ ಮುಖ್ಯಮಂತ್ರಿಗಳ ಪತ್ರಿಕಾಗೋಷ್ಠಿಯ ನೇರ ಪ್ರಸಾರವನ್ನು ರಾಜ್ಯದ ವಿವಿಧ ಬಸ್ ನಿಲ್ದಾಣಗಳಲ್ಲಿ ಜನರು ವೀಕ್ಷಿಸುವ ಅವಕಾಶ ಕಲ್ಪಿಸಲಾಗುತ್ತದೆ. ಈ ಮೂಲಕ ರಾಜ್ಯದ ಜನತೆಗೆ ಸರ್ಕಾರದ ಬಜೆಟ್ ಕುರಿತು ನೇರವಾಗಿ ಮಾಹಿತಿ ಪಡೆಯುವ ಅವಕಾಶ ಕಲ್ಪಿಸಲಾಗುತ್ತಿದೆ ಎಂದು ಪ್ರಕಟಣೆ ತಿಳಿಸಿದೆ.

### ಹಸು, ಕುರಿ, ಕೋಳಿ ಸಾಕಾಣಿಕೆ ತರಬೇತಿ

**ರಾಮನಗರ:** ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್ ಮತ್ತು ಕೆನರಾ ಬ್ಯಾಂಕ್‌ನ ಸಹಯೋಗದಲ್ಲಿ ನಡೆಸುತ್ತಿರುವ ರುಡ್‌ಸೆಟ್ ಸಂಸ್ಥೆಯ ವತಿಯಿಂದ ಹಮ್ಮಿಕೊಂಡಿರುವ ಹಸು, ಕುರಿ ಮತ್ತು ಕೋಳಿ ಸಾಕಾಣಿಕೆ ಕುರಿತ 13 ದಿನಗಳ ಉಚಿತ ಸಮಗ್ರ ಕೃಷಿ ತರಬೇತಿ ಏ.6 ರಿಂದ ಆರಂಭವಾಗಲಿದ್ದು, ಗ್ರಾಮೀಣ ಆಸಕ್ತ ನಿರುದ್ಯೋಗಿ ಯುವಕ ಯುವತಿಯರು ಅರ್ಜಿ ಸಲ್ಲಿಸಬಹುದಾಗಿದೆ.

ಆಸಕ್ತರು 18 ರಿಂದ 50 ವರ್ಷ ವಯೋಮಾನದವರಾಗಿದ್ದು, ಕನ್ನಡ ಭಾಷೆ ಓದಲು ಮತ್ತು ಬರೆಯಲು ಬಲ್ಲವರಾಗಿರಬೇಕು. ಅಭ್ಯರ್ಥಿಗಳು ಆಧಾರ್ ಕಾರ್ಡ್ ಹೊಂದಿರಬೇಕು ಹಾಗೂ ಬಿಪಿಎಲ್ ಕಾರ್ಡ್ ಅನ್ನು ಹೊಂದಿರುವ ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

ತರಬೇತಿಯು ಕಡ್ಡಾಯವಾಗಿ ವಸತಿಯುತವಾಗಿದ್ದು, ತರಬೇತಿಯ ಅವಧಿಯಲ್ಲಿ ಉಚಿತವಾಗಿ ಊಟ ಮತ್ತು ವಸತಿ ನೀಡಲಾಗುವುದು ಹಾಗೂ ತರಬೇತಿ ಪೂರ್ಣಗೊಂಡ ನಂತರ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯದಿಂದ ಪ್ರಮಾಣಪತ್ರವನ್ನು ವಿತರಿಸಲಾಗುವುದು. ಅರ್ಜಿ ಸಲ್ಲಿಸಲು ಮಾರ್ಚ್ 20 ಕೊನೆಯ ದಿನವಾಗಿದೆ. ಆಸಕ್ತರು ಅರ್ಜಿ ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ರುಡ್‌ಸೆಟ್ ಸಂಸ್ಥೆ, ಅರಿಶಿನಕುಂಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಮೊಬೈಲ್ ಸಂಖ್ಯೆ: 9740982585, 9241482541, 9113880324 ಅನ್ನು ಸಂಪರ್ಕಿಸಬಹುದಾಗಿದೆ ಎಂದು ರುಡ್‌ಸೆಟ್ ಸಂಸ್ಥೆಯ ಬೆಂಗಳೂರು ಶಾಖೆಯ ನಿರ್ದೇಶಕರಾದ ರವಿಕುಮಾರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಮ್ಮ ನಡೆ ಸ್ವಚ್ಛತಾ ಕಡೆ "ರನ್ ಫಾರ್ ಮಂಡ್ಯ"

## ಮಾರ್ಚ್ 8 ರಂದು ಸ್ವಚ್ಛ ಭಾರತ್ ಅಭಿಯಾನದಡಿ ಸ್ವಚ್ಛತಾ ಮ್ಯಾರಾಥಾನ್ ಕಾರ್ಯಕ್ರಮ: ಡಾ. ಕುಮಾರ



**ಮಂಡ್ಯ:** ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ಸಾರ್ವಜನಿಕರಲ್ಲಿ ಸ್ವಚ್ಛತೆಯ ಅರಿವು ಮೂಡಿಸಲು ಹಾಗೂ ಫಿಟ್‌ನೆಸ್ ಉತ್ತೇಜಿಸಲು ಮಾರ್ಚ್ 8 ರಂದು ನಗರದ ಜಿಲ್ಲಾ ಕ್ರೀಡಾಂಗಣದಿಂದ "ನಮ್ಮ ನಡೆ ಸ್ವಚ್ಛತೆಯ ಕಡೆ –ರನ್ ಫಾರ್ ಮಂಡ್ಯ" ಮ್ಯಾರಾಥಾನ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಕುಮಾರ್ ಅವರು ತಿಳಿಸಿದರು.

ಅವರು ಇಂದು ಜಿಲ್ಲಾಧಿಕಾರಿ ಗಳ ಕಚೇರಿಯಲ್ಲಿ ಸ್ವಚ್ಛ ಭಾರತ್ ಅಭಿಯಾನದಡಿ "ನಮ್ಮ ನಡೆ ಸ್ವಚ್ಛತೆಯ ಕಡೆ– ರನ್ ಫಾರ್ ಮಂಡ್ಯ" ಘೋಷವಾಕ್ಯದೊಂದಿಂಗೆ ಮ್ಯಾರಾಥಾನ್ ಕಾರ್ಯಕ್ರಮ ಹಮ್ಮಿಕೊಳ್ಳುವ ಸಂಬಂಧ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಮಾರ್ಚ್ 8 ರಂದು ಬೆಳಿಗ್ಗೆ 6 ಗಂಟೆಗೆ ನಗರದ ಸರ್. ಎಂ.* ವಿಶ್ವೇಶ್ವರಯ್ಯ ಕ್ರೀಡಾಂಗಣದಿಂದ ಆರ್. ಪಿ. ರೋಡ್, ಸಂಜಯ ಸರ್ಕಲ್, , ಬೆಸರ ಬೆಸಗರಹಳ್ಳಿ, ಎಚ್ ಪಿ. ಸರ್ಕಲ್ ಮೂಲಕ ವಿಶ್ವೇಶ್ವರಯ್ಯ ಕ್ರೀಡಾಂಗಣಕಕ್ಕೆ ತಲುಪುವುದರಿಂದ ಅಗತ್ಯ ಸಿದ್ಧತೆ ಮತ್ತು ಬ್ಯಾರಿಕೆಡ್ ವ್ಯವಸ್ಥೆಯನ್ನು ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಮಾರ್ಚ್ 8 ರಂದು ನಡೆಯುವ ಕಾರ್ಯಕ್ರಮ ಅರ್ಥಪೂರ್ಣವಾಗಿ ನಡೆಯಬೇಕು. ಈ ಸಂಬಂಧ ಕ್ರೀಡಾಂಗಣದಲ್ಲಿ ವೇದಿಕೆ ನಿರ್ಮಾಣ, ಕುಡಿಯುವ ನೀರು, ಆಂಬುಲೆನ್ಸ್ ವ್ಯವಸ್ಥೆ ಹಾಗೂ ಉಪಹಾರದ ವ್ಯವಸ್ಥೆ ಮಾಡಿಕೊಳ್ಳಲು ಅಗತ್ಯ ಕ್ರಮ ವಹಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ 5 ಕಿ.ಮೀ ಓಟವನ್ನು ಮ್ಯಾರಥಾನ್ ಕಾರ್ಯಕ್ರಮ ವನ್ನು ಹಮ್ಮಿಕೊಳ್ಳಲಿದ್ದು,ತೀರ್ಪುಗಾರನ್ನು ಅಂತಿಮ ಘಟ್ಟದಲ್ಲಿ ನೇಮಿಸಬೇಕು ಮತ್ತು ಕರಪತ್ರಗಳ ವಿತರಣೆ ಮತ್ತು ಟಿ ಶರ್ಟ್ ಕೌಂಟರ್ ಗಳನ್ನು ಮಾಡಬೇಕು. ಎಂದು ಸೂಚಿಸಿದರು.

ಈ ಕಾರ್ಯಕ್ರಮದಲ್ಲಿ ನಗರದ ಎಲ್ಲಾ ಶಾಲಾ–ಕಾಲೇಜು ವಿದ್ಯಾರ್ಥಿಗಳು ಸರ್ಕಾರಿ ನೌಕರರು ಎನ್.ಜಿ.ಓಗಳು ಮತ್ತು ಸಾರ್ವಜನಿಕರು ಎಲ್ಲ ಸಂಘಟನೆಗಳು ಹೆಚ್ಚಿನ ಸಂಖ್ಯೆ ಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ತಿಳಿಸಿದರು.

ಮ್ಯಾರಥಾನ್ ನಲ್ಲಿ ಭಾಗವಹಿಸಿ ವಿಜೇತರಾದವರಿಗೆ ಪ್ರತ್ಯೇಕವಾಗಿ ಪುರುಷ ಮತ್ತು ಮಹಿಳೆಯರಿಗೆ ಪ್ರಥಮ – 10000,ದ್ವಿತೀಯ 5000,ತೃತೀಯ –3000 ನಗದು ಬಹುಮಾನವನ್ನು ವಿತರಿಸಲಾಗುವುದು ಎಂದು ಹೇಳಿದರು.

ಸಭೆಯಲ್ಲಿ ಮಂಡ್ಯ ಉಪ ವಿಭಾಗಾಧಿಕಾರಿ ಬಿ. ಸಿ. ಶಿವಮೂರ್ತಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತಿಮ್ಮಯ್ಯ , ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನ ನಿರ್ದೇಶಕರಾದ ನರಸಿಂಹಮೂರ್ತಿ, ನಗರ ಸಭೆ ಆಯುಕ್ತೆ ಪಂಪಶ್ರೀ, ಹಾಗೂ ವಿವಿಧ ಸಂಘಟನೆಯ ಮುಖಂಡರು ಉಪಸ್ಥಿತರಿದ್ದರು.

# ರಾಮನಗರ ನಗರಸಭೆ: 81.98 ಲಕ್ಷ ರೂ ಉಳಿತಾಯ ಬಜೆಟ್ ಮಂಡನೆ

**2026–27ನೇ ಸಾಲಿನಲ್ಲಿ ಎಲ್ಲ ಮೂಲಗಳಿಂದ 92.33 ಕೋಟಿ ರೂ ಆದಾಯ ನಿರೀಕ್ಷೆ | ಸಣ್ಣ ಸಮುದಾಯಗಳ ಮೂಲ ವೃತ್ತಿ ಪೋಷಿಸಲು ಗಮನ**

**ರಾಮನಗರ:** 2026–27ನೇ ಸಾಲಿಗೆ ಸ್ಥಳೀಯ ನಗರಸಭೆ 9233.05 ಲಕ್ಷ ರೂಗಳ ಆದಾಯವನ್ನು ನಿರೀಕ್ಷಿಸಿದೆ. ಗುರುವಾರ ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಅವರು ಮಂಡಿಸಿದ ಬಜೆಟ್‌ನಲ್ಲಿ 81.98 ಲಕ್ಷ ರೂಗಳ ಉಳಿತಾಯವನ್ನು ನಿರೀಕ್ಷಿಸಿದ್ದಾರೆ.

ರಾಮನಗರ ನಗರಸಭೆಗೆ ಅತಿಮುಖ್ಯವಾದ ಆದಾಯವೆಂದರೆ ಆಸ್ತಿ ತೆರಿಗೆ, ಮಳಿಗೆ ಬಾಡಿಗೆ, ಕಟ್ಟಡ ಪರವಾನಿಗೆ, ಉದ್ದಿಮೆ ಪರವಾನಿಗೆ ಶುಲ್ಕ ಮತ್ತು ಇತರ ತೆರಿಗೆಗಳು. ವ್ಯಾಪಾರ ಪರವಾನಿಗೆಯಿಂದ 50 ಲಕ್ಷ ರೂ, ಘನತ್ಯಾಜ್ಯ ಶುಲ್ಕದಿಂದ 20 ಲಕ್ಷ ರೂ, ಕಟ್ಟಡ ಪರವಾನಿಗೆಯಿಂದ 40 ಲಕ್ಷ ರೂ, ರೋಡ್ ಕಟ್ಟಿಂಗ್ ಶುಲ್ಕದಿಂದ 200 ಲಕ್ಷ ರೂ, ಖಾತಾ ವರ್ಗಾವಣೆ, ಖಾತಾ ನಕಲು ಹಾಗೂ ಇತರೆ ಆದಾಯ ಮೂಲಗಳಿಂದ 28.50 ಲಕ್ಷ ರೂ, ನೂತನ ಬಡಾವಣೆಗಳ ಅಭಿವೃದ್ಧಿ ಶುಲ್ಕವಾಗಿ 75 ಲಕ್ಷ ರೂ, ಜಾಹೀರಾತು ತೆರಿಗೆಯಿಂದ 10 ಲಕ್ಷ ರೂ ಆದಾಯವನ್ನು ನಿರೀಕ್ಷಿಸಲಾಗಿದೆ.

ಎಸ್.ಎಫ್.ಸಿ (ಮುಕ್ತನಿಧಿ)ಯಿಂದ 250 ಲಕ್ಷ ರೂ, ಎಸ್.ಎಫ್.ಸಿ (ವೇತನ ಅನುದಾನ) 750 ಲಕ್ಷ ರೂ, ಎಸ್.ಎಫ್.ಸಿ (ವಿದ್ಯುತ್ ಅನುದಾನ)ದಲ್ಲಿ ಬೀದಿ ದೀಪಗಳ ನಿರ್ವಹಣೆಗಾಗಿ 300 ಲಕ್ಷ ರೂ, ಕುಡಿಯುವ ನೀರಿನ ಸಂಪರ್ಕಗಳು ಹಾಗೂ ಬೋರ್‌ವೆಲ್‌ಗಳ ಬಿಲ್ ಪಾವತಿಗಾಗಿ 500 ಲಕ್ಷ ರೂ, 16ನೇ ಹಣಕಾಸು ಅನುದಾನ 520 ಲಕ್ಷ ರೂ ಹೀಗೆ ನಗರಸಭೆಯ ಆರ್ಥಿಕ ಮೂಲಗಳು ಹಾಗೂ ಸರ್ಕಾರದಿಂದ ಅನುದಾನಗಳಿಂದ 2026–27ನೇ ಸಾಲಿಗೆ ಒಟ್ಟು 9233.05 ಲಕ್ಷ ರೂಗಳ ಆದಾಯವನ್ನು ನಿರೀಕ್ಷಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ. ಆರಂಭಿಕ ಶುಲ್ಕ 1506.15 ಲಕ್ಷ ರೂ ಸೇರಿದರೆ 2026–27ನೇ ಸಾಲಿಗೆ ನಗರಸಭೆಗೆ 10657.22 ಲಕ್ಷರೂಗಳ ನಿಧಿ ಲಭ್ಯವಾಗಲಿದೆ ಎಂದು ಅವರು ನಿರೀಕ್ಷಿಸಿದ್ದಾರೆ.

**ಸಮುದಾಯಗಳ ಶ್ರೇಯಕ್ಕೆ ಆದ್ಯತೆ:** ಸಮಾಜದಲ್ಲಿರುವ ಸಣ್ಣ, ಸಣ್ಣ ಸಮುದಾಯಗಳಿಗೆ ಸ್ಪಂದಿಸಲು ಕೆ.ಶೇಷಾದ್ರಿ ಹಿಂದಿನಿಂದಲೂ ಪ್ರಯತ್ನಿಸುತ್ತಿದ್ದಾರೆ. ತಮ್ಮ ಈ ಸಾಮಾಜಿಕ ಕಳಕಳಿಯನ್ನು ಬಜೆಟ್ ಮೂಲಕ ವ್ಯಕ್ತಪಡಿಸಿದ್ದಾರೆ. ರಾಮನಗರ ನಗರಸಭಾ ವ್ಯಾಪ್ತಿಯ ಆಟೋಚಾಲಕರು, ಬೀದಿ ಬದಿ ವ್ಯಾಪಾರಸ್ಥರು, ದರ್ಜಿಗಳು, ಮೇದರು, ದೊಂಬಿದಾಸರು, ಅಕ್ಕಸಾಲಿಗರು, ಕುಂಬಾರರು, ಇರುಳಿಗರು, ವಿಶ್ವಕರ್ಮ, ಪಿಲೇರ್ಸ್ ಮತ್ತು ಹುರಿಮಿ?ನ್ ಕಾರ್ಮಿಕರು, ನೇಕಾರರು, ಮಡಿವಾಳರು, ಚಿಂದಿ ಆಯುವವರು, ನಾಯಕರು, ಗಾಣಿಗರು, ಸವಿತಾ ಸಮಾಜಗಳನ್ನು ಪರಿಗಣಿಸಿದ್ದಾರೆ. ಕಳೆದ ಬಾರಿಯೂ ಅವರು ಸಮುದಾಯಗಳ ವೃತ್ತಿಗೆ ಸಂಬಂಧಿಸಿದಂತೆ ಪರಿಕರಗಳನ್ನು ವಿತರಿಸಿದ್ದರು. ಈ ಬಾರಿಯ ಬಜೆಟ್‌ನಲ್ಲಿ ಇದು ಮುಂದುವರೆದಿದೆ. ಜನರ ಸುರಕ್ಷತೆಗಾಗಿ ವಿಮಾ ವಂತಿಕೆಯಾ 30 ಲಕ್ಷ ರೂ ಅನುದಾನ ನಿಗಧಿ ಮಾಡಿರುವುದರ ಜೊತೆಗೆ, ಭಾವಸಾರ ಕ್ಷತ್ರಿಯ ಸಮಾಜ(ದರ್ಜಿ) ಹಾಗೂ ಟೈಲರಿಂಗ್ ವೃತ್ತಿ ಬಾಂಧವರಿಗೆ ಪರಿಕರ ವಿತರಣೆ ಮಾಡಲು ಬಜೆಟ್‌ನಲ್ಲಿ 5 ಲಕ್ಷ ಹಣವನ್ನು ಮೀಸಲಿಟ್ಟಿದ್ದಾರೆ. ಪತ್ರಕರ್ತರಿಗೆ ವಿಮಾ ಯೋಜನೆ ಕಲ್ಪಿಸಿಕೊಡುವ ಸಲುವಾಗಿ 10 ಲಕ್ಷ ರೂಗಳನ್ನು, ಆಟೋ ಚಾಲಕರಿಗೆ ಸಮವಸ್ತ್ರ ಹಾಗೂ ಚಾಲನಾ ಪರವಾನಗಿ ನವೀಕರಣಕ್ಕಾಗಿ ಅನುದಾನ 10 ಲಕ್ಷ ರೂ, ವಿಶ್ವಕರ್ಮ ಜನಾಂಗದ ವೃತ್ತಿದಾರರಿಗೆ ಪರಿಕರ ನೀಡಲು 3 ಲಕ್ಷ ರೂ, ಶಿವಜ್ಯೋತಿಪಣ (ಗಾಣಿಗ) ಸಮುದಾಯದವರ ಮೂಲ ವೃತ್ತಿದಾರರಿಗೆ ಪರಿಕರ ನೀಡಲು 1.00 ಲಕ್ಷ ರೂ, ಚಮ್ಮಾರರಿಗೆ ಕುಟೀರ ರೂ 2.00 ಲಕ್ಷ ರೂ ಅನುದಾನವನ್ನು ಮೀಸಲಿಟ್ಟಿದ್ದಾರೆ.



### ಸ್ವಚ್ಛ ರಾಮನಗರ ಕೇವಲ ಕಲ್ಪನೆಯಲ್ಲ!

ಸ್ವಚ್ಛ ರಾಮನಗರ ಕೇವಲ ಕಲ್ಪನೆಯಲ್ಲ, ಅದು ಜೀವನ ಶೈಲಿ ಆಗಬೇಕು ಎನ್ನುವುದು ರಾಮನಗರದ ಸಮಸ್ತರ ಆಶಯವಾಗಿದೆ. ಕಸ ನಿರ್ವಹಣೆ ಪ್ರತಿ ಮನೆಯಿಂದ ಆರಂಭವಾಗಬೇಕು. ಹಸಿಕಸ, ಒಣಕಸ, ಹಾನಿಕಾರಕ ಕಸ, ಹೀಗೆ ವಿಂಗಡಿಸಿ ಕಸ ಸಂಗ್ರಹಣ ವಾಹನಕ್ಕೆ ಕೊಡಬೇಕು. ಬೀದಿ ಬದಿಯಲ್ಲಿ ಕಸ ಎಸೆಯುವುದನ್ನು ಜನರೇ ಸ್ವತಃ ತಡೆಯಬೇಕು. ಸುಂದರ ರಾಮನಗರಕ್ಕೆ ಕೈ ಜೋಡಿಸಬೇಕು ಎಂಬುದು ನಗರಸಭೆಯ ಆಶಯ ಎಂದು ಕೆ.ಶೇಷಾದ್ರಿ ಮಗದೊಮ್ಮೆ ಆಶಿಸಿದ್ದಾರೆ. ಜನರು ಸ್ಪಂದಿಸಬೇಕು ಎಂಬುದು ವರ್ತಮಾನ ಪತ್ರಿಕೆಯ ಕಾಳಜಿ.

ಅಲೆಮಾರಿ ಹಾಗೂ ಬುಡಕಟ್ಟು ಜನಾಂಗದ ವೃತ್ತಿದಾರರಿಗೆ ಪರಿಕರ ನೀಡಲು 3 ಲಕ್ಷ ರೂ, ಮಹಿಳಾ ಸ್ವ–ಸಹಾಯ ಸಂಘಗಳು ಹಾಗೂ ಒಕ್ಕೂಟಗಳಿಗೆ ಪುಸ್ತಕ ರೈಟಿಂಗ್, ಟ್ರಂಕ್ & ಇತರೆ ಪರಿಕರಕ್ಕಾಗಿ 15.00 ಲಕ್ಷ ರೂ, ಮೇದರ ಸಮುದಾಯದ ವೃತ್ತಿದಾರರಿಗೆ ಪರಿಕರ ನೀಡಲು 2.00 ಲಕ್ಷ ರೂ, ವಿವಿಧ ಶಕ್ತಿ ದೇವತೆಗಳ ಕರಗ ಮಹೋತ್ಸವಕ್ಕೆ 5.00 ಲಕ್ಷ ರೂ, ಚಹಾ ಅಂಗಡಿಗಳಲ್ಲಿ ಸ್ವಚ್ಛತೆ ಮತ್ತು ಆರೋಗ್ಯವನ್ನು ಕಾಪಾಡುವ ದೃಷ್ಟಿಯಿಂದ ಚಹಾ ಪರಿಕರಗಳನ್ನು ಸ್ವಚ್ಛಗೊಳಿಸುವ ಸ್ಟೀಮರ್ ಸಾಧನಗಳ ವಿತರಣೆಗಾಗಿ 8.00 ಲಕ್ಷ ರೂ, ಹಜರತ್ ಪೀರನ್ ಶಾವಾಲಿ ದರ್ಗಾದಲ್ಲಿ ನಡೆಯುವ ಗಂಧ ಮಹೋತ್ಸವಕ್ಕೆ 10.00 ಲಕ್ಷ ರೂ, ಮಸೀದಿಗಳಲ್ಲಿ ಧಾರ್ಮಿಕ ವಿಧಿ ವಿಧಾನಗಳನ್ನು ನಿರ್ವಹಿಸಲು ಖಾತೂಬ್–ಎ–ಇಮಾಮ್ ಮತ್ತು ಮೌಜನ್ ರವರುಗಳಿಗೆ ಗೌರವಧನ ರೂ 10.00 ಲಕ್ಷ ರೂ, ಮುಸ್ಲಿಂ ಗ್ರಾಜುಯೇಟ್ಸ್ ಫೋರಂ ಇವರಿಗೆ ಮೂಲ ಸೌಕರ್ಯ ಕಲ್ಪಿಸಿಕೊಳ್ಳಲು 2.00 ಲಕ್ಷ ರೂ ಅನುದಾನವನ್ನು ಮೀಸಲಿಟಿದ್ದಾರೆ.



ಬನ್ನಿ ಮಹಾಕಾಳಿ ಅಮ್ಮನವರ ದೇವಾಲಯದಲ್ಲಿನ ಕಾಮಗಾರಿಗೆ ಸಹಾಯಧನವನ್ನು 10.00 ಲಕ್ಷ ರೂ, ಲೂರ್ದ್ ಮಾತಾ ಉತ್ಸವಕ್ಕೆ 1.00 ಲಕ್ಷ ರೂ, ನಾಗರೀಕರಿಗಾಗಿ ಆರೋಗ್ಯ ಶಿಬಿರ ಏರ್ಪಡಿಸಲು ರೂ 5.00 ಲಕ್ಷ ರೂ, ಪುರಾತನ ಶಾಸನಗಳ ಸಂರಕ್ಷಣೆಗೆ 2.00 ಲಕ್ಷ ರೂಗಳ ಅನುದಾನವನ್ನು ಮೀಸಲಿಟ್ಟಿದ್ದಾರೆ.

**ಘನತ್ಯಾಜ್ಯ ವಿಲೇವಾರಿ ಘಟಕ ನಿರ್ಮಾಣ:** ನಗರಸಭೆ ವ್ಯಾಪ್ತಿಯಲ್ಲಿ ಉತ್ಪಾದನೆಯಾಗುತ್ತಿರುವ ಟನ್‌ಗಟ್ಟಲೆ ತ್ಯಾಜ್ಯ ವಿಲೇವಾರಿ, ಸಂಸ್ಕರಣೆಗಾಗಿ ವೈಜ್ಞಾನಿಕ ಘಟಕವನ್ನು ನಿರ್ಮಿಸಲಾಗುತ್ತಿದೆ. ಈ ಘಟಕದ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದೆ. ಸಧ್ಯದಲ್ಲೇ ಪೂರ್ಣಗೊಳ್ಳಲಿದೆ. ಈ ಘಟಕ ಆರಂಭವಾದ ನಂತರ ನಗರವ್ಯಾಪ್ತಿಯ ಕಸ ನಿರ್ವಹಣೆ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯಲಿದೆ ಎಂದು ನಗರಸಭೆ ವಿಶ್ವಾಸ ವ್ಯಕ್ತಪಡಿಸಿದೆ.

**ಸ್ಮಾರ್ಟ್ ಬಸ್ ನಿಲ್ದಾಣ:** ಸಧ್ಯ ಜಿಲ್ಲಾ ಕೇಂದ್ರದಲ್ಲಿ ಸುಸಜ್ಜಿತ ಬಸ್ ನಿಲ್ದಾಣದ ಕೊರತೆ ಇದೆ. ಮೈಸೂರು ಕಡೆಗೆ ಪ್ರಯಾಣಿಸಲು ಬಸ್ ನಿಲ್ದಾಣ ಇಲ್ಲ. ಇದನ್ನು ಗಮನಿಸಿರುವ ನಗರಸಭೆ ಲಭ್ಯವಿರುವ ಸ್ಥಳ, ಸಂಪನ್ಮೂಲಗಳನ್ನು ಬಳಸಿಕೊಂಡು ಸ್ಮಾರ್ಟ್ ಬಸ್ ನಿಲ್ದಾಣವನ್ನು ನಿರ್ಮಿಸಲು ಆಸಕ್ತಿವಹಿಸಿದೆ. ಡಸ್ಟ್ ಬಿನ್, ಡಿಜಿಟಲ್ ಗಡಿಯಾರ, ವೈಫೈ, ಚಾರ್ಜಿಂಗ್ ಪಾಯಿಂಟ್‌ಗಳ ವ್ಯವಸ್ಥೆ ಕಲ್ಪಿಸುವುದಾಗಿ ಅಧ್ಯಕ್ಷರು ತಿಳಿಸಿದ್ದಾರೆ.

**ಉದ್ಯಾನವನಗಳಲ್ಲಿ ಸ್ಮಾರ್ಟ್ ಬೆಂಚ್!:** ನಗರಸಭೆ ವ್ಯಾಪ್ತಿಯ ಸಾರ್ವಜನಿಕ ಉದ್ಯಾನವನಗಳಲ್ಲಿ ಸ್ಮಾರ್ಟ್ ಬೆಂಚ್‌ಗಳನ್ನು ಅಳವಡಿಸುವುದಾಗಿ ಅಧ್ಯಕ್ಷರು ಬಜೆಟ್‌ನಲ್ಲಿ ತಿಳಿಸಿದ್ದಾರೆ. ಇದರಲ್ಲಿ ಸೋಲಾರ್ ಶಕ್ತಿ ಬಳಸಿಕೊಂಡು ವೈಫೈ ಚಾರ್ಜಿಂಗ್ ಸೇರಿದಂತೆ ಹಲವು ಸೌಕರ್ಯ ಒದಗಿಸಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

**ಹಸಿರು ರಾಮನಗರ:** ಹಸಿರು ರಾಮನಗರ ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಮತ್ತು ಸದಸ್ಯರ ಕನಸು. ಈ ನಿಟ್ಟಿನಲ್ಲಿ ಹೆಜ್ಜೆ ಇಡಲು, 5000 ಗಿಡಗಳನ್ನು ನೆಡಲು ಉದ್ದೇಶಿಸಲಾಗಿದೆ ಎಂದು ಬಜೆಟ್‌ನಲ್ಲಿ ತಿಳಿಸಿದ್ದಾರೆ. ನಗರದಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿಗೆ ಹೆಚ್ಚು ಗಮನಹರಿಸುವುದಾಗಿ ತಿಳಿಸಿದ್ದಾರೆ. ಇನ್ನುಳಿದಂತೆ ಎಸ್.ಎಫ್.ಸಿ ಅನುದಾನದಲ್ಲಿ ಪೌರಕಾರ್ಮಿಕರಿಗೆ ಹಲವಾರು ಸವಲತ್ತುಗಳನ್ನು ಎಂದಿನಂತೆ ವಿಸ್ತರಿಸುವುದಾಗಿ ತಿಳಿಸಿದ್ದಾರೆ.

ಬಜೆಟ್ ಮಂಡನೆ ವೇಳೆ ಪೌರಾಯುಕ್ತ ಡಾ.ಜಯಣ್ಣ, ಉಪಾಧ್ಯಕ್ಷೆ ಗಿರಿಜಮ್ಮ ಗುರುವೇಗೌಡ ಮತ್ತು ಸದಸ್ಯರು ಉಪಸ್ಥಿತರಿದ್ದರು.

# ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನ ಬಳಕೆ ಮಾಡಿ

**ಮೈಸೂರು:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಿಡುವ ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನವನ್ನು ಆಯಾ ಸಮಾಜದ ಬಡಾವಣೆ ಅಭಿವೃದ್ಧಿಪಡಿಸಲು ಕ್ರಿಯಾ ಯೋಜನೆ ರೂಪಿಸುವ ಜತೆಗೆ ಪೂರ್ಣ ಪ್ರಮಾಣದಲ್ಲಿ ಬಳಕೆಯಾಗುವಂತೆ ನೋಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ ಸಲಹೆ ನೀಡಿದರು.

ಮಾನಸ ಗಂಗೋತ್ರಿಯ ವಿಜ್ಞಾನ ಭವನದ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಕರ್ನಾಟಕ ಅನುಸೂಚಿತ ಜಾತಿಗಳ ಉಪ ಹಂಚಿಕೆ ಮತ್ತು ಬುಡಕಟ್ಟು ಉಪ ಹಂಚಿಕೆ ಅಧಿನಿಯಮ, 2013 ಮತ್ತು ನಿಯಮಗಳು 2017 ಕುರಿತು ಜಿಲ್ಲಾ, ತಾಲೂಕು ಮತ್ತು ನಗರಪಾಲಿಕೆ ವ್ಯಾಪ್ತಿಯ ಅನುಷ್ಠಾನ ಅಧಿಕಾರಿಗಳಿಗೆ ಒಂದು ದಿನದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ವೈಯಕ್ತಿಕ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಯಾವುದೇ ಸಮಸ್ಯೆ ಉಂಟಾಗುವುದಿಲ್ಲ. ಜಾತಿ ಪ್ರಮಾಣ ಪತ್ರ ಇರುವುದನ್ನು ಗಮನಿಸಲಾಗುತ್ತದೆ. ಆದರೆ, ಲೋಕೋಪಯೋಗಿ, ನೀರಾವರಿ, ವಿದ್ಯುತ್ ಇಲಾಖೆಯಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳುವಾಗ ಸಾಮಾನ್ಯ ಜನರು ವಾಸಿಸುವ ಬಡಾವಣೆಗಳಿಗೆ ಕ್ರಿಯಾಯೋಜನೆ ರೂಪಿಸುತ್ತಿರುವ ಬಗ್ಗೆ ದೂರುಗಳು ಬರುತ್ತಿವೆ. ಹಾಗಾಗಿ ಕ್ರಿಯಾಯೋಜನೆ ರೂಪಿಸಿದ ಬಳಿಕ ಸಂಶಯಾಸ್ಪದ ಕಾಮಗಾರಿಗಳ ಕುರಿತಾಗಿ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರಿಂದ ದೃಢೀಕರಣ ಪಡೆಯುವಂತೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಕಾಮಗಾರಿ ಅನುಷ್ಠಾನಗೊಂಡ ಮೇಲೆ ಕ್ರಮ ಕೈಗೊಳ್ಳುವ ಬದಲು ಕ್ರಿಯಾ ಯೋಜನೆ ಹಂತದಲ್ಲಿ ಪರಿಶೀಲನೆ ನಡೆಸಿ ದೃಢೀಕರಣ ಪಡೆದರೆ ಸಮಸ್ಯೆಯಾಗಲ್ಲ. ಒಂದು ವೇಳೆ ಸಾಮಾನ್ಯ ಜನರ ಬಡಾವಣೆಗಳಲ್ಲಿ ಕ್ರಿಯಾ ಯೋಜನೆ ರೂಪಿಸಿದ್ದರೆ ಅಂತಹದನ್ನು ತಿರಸ್ಕರಿಸಿ ಬೇರೆ ಕಾಮಗಾರಿಗೆ ಬದಲಿಸಿಕೊಳ್ಳಬಹುದು ಎಂದರು.



ಪ್ರತಿ ಮೂರು ತಿಂಗಳಿಗೊಮ್ಮೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಭೆ ನಡೆಸಲಾಗುತ್ತದೆ. ಈ ಸಭೆಯಲ್ಲಿ ಹಲವಾರು ಕುಂದುಕೊರತೆಗಳು, ಸಮಸ್ಯೆಗಳನ್ನು ಹೇಳಲಾಗುತ್ತದೆ. ಅದರಲ್ಲಿ ಪ್ರಮುಖವಾಗಿ ಪೊ?ಡಿ ದುರಸ್ತಿ, ನಿವೇಶನ, ಮನೆ ಸಮಸ್ಯೆ ಹೇಳಿಕೊಳ್ಳುತ್ತಾರೆ. ಇತ್ತೀಚಿಗೆ ಎಸ್‌ಸಿ, ಎಸ್‌ಟಿ ಜನರ ಕಲ್ಯಾಣಕ್ಕೆ ವಿವಿಧ ಇಲಾಖೆಗಳಲ್ಲಿ ಮೀಸಲಿಟ್ಟಿರುವ ಅನುದಾನ ಹೆಸರಿಗಷ್ಟೇ ಇದೆ. ಈ ಜನರಿಗೆ ಬಳಕೆಯಾಗುತ್ತಿಲ್ಲ ಎನ್ನುವ ದೂರುಗಳು ಬರುತ್ತಿವೆ. ಹೀಗಾಗಿ ಪರಿಶೀಲನೆ ನಡೆಸಿದಾಗ ಮೂರ್ನಾಲ್ಕು ಕಡೆಗಳಲ್ಲಿ ಸಾಮಾನ್ಯ ಜನರ ಬೀದಿಗಳಲ್ಲಿ ರಸ್ತೆ, ಚರಂಡಿ, ಯುಜಿಡಿ ನಿರ್ಮಾಣ ಮಾಡಿರುವುದರಿಂದ ಇಲಾಖಾ ವಿಚಾರಣೆ ನಡೆಯುತ್ತಿದೆ. ಹೀಗಾಗಿ ಈ ವರ್ಗದ ಜನರು ಇರುವ ಕಡೆಗಳಲ್ಲಿ ಮಾತ್ರ ಕಾಮಗಾರಿ ಕೈಗೆತ್ತಿಗೊಳ್ಳಲು ಕ್ರಿಯಾಯೋಜನೆ ತಯಾರಿಸಬೇಕು ಎಂದು ನುಡಿದರು..

ಇಲಾಖೆಗಳಲ್ಲಿ ಹೊರ ಗುತ್ತಿಗೆ ಏಜೆನ್ಸಿ ಮುಂದುವರಿಸುವಾಗ ಅಧಿಕಾರಿಗಳು ಸೂಕ್ಷ್ಮತೆ ಅರಿಯಬೇಕು.

ಕಾನೂನಿನ ಉದ್ದೇಶ ಗಮನಿಸಬೇಕು. ಬಹಳ ವರ್ಷಗಳಿಂದ ಹಿಂದುಳಿದ ಈ ಸಮಾಜವನ್ನು ಮೇಲೆತ್ತಲು ತಂದಿರುವ ಕಾಯಿದೆಯ ಬಗ್ಗೆ ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತರುವಂತಾಗಬೇಕು ಎಂದು ಕಿವಿಮಾತು ಹೇಳಿದರು.

ಸಂಪನ್ಮೂಲ ವ್ಯಕ್ತಿ ಕೆ.ಆರ್.ಶಂಕರ್ ಎಸ್‌ಸಿಎಸ್‌ಪಿ, ಟಿಎಸ್‌ಪಿ ಕಾಯಿದೆಗಳಲ್ಲಿ ಇರುವ ಅಧಿನಿಯಮದ ಪ್ರಮುಖ ಅಂಶಗಳನ್ನು ವಿವರಿಸುವ ಮೂಲಕ ಯಾವ ರೀತಿಯಲ್ಲಿ ಅನುಷ್ಠಾನಕ್ಕೆ ತರಬೇಕು, ಕ್ರಿಯಾಯೋಜನೆ ರೂಪಿಸುವಾಗ ಅನುಸರಿಸಬೇಕಾದ ಕ್ರಮಗಳ ಕುರಿತು ಮಾಹಿತಿ ನೀಡಿದರು.


ಪ್ರಾಸ್ತಾವಿಕ ನುಡಿಗಳನ್ನಾಡಿದ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ.ರಂಗೇಗೌಡ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ಆರ್ಥಿಕವಾಗಿ ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಲು ಹಲವಾರು ಯೋಜನೆ ರೂಪಿಸಿದೆ. ಅದೇ ರೀತಿ ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಕಾಯಿದೆ ತಂದಿದೆ. ಈ ಕಾಯಿದೆಯನ್ನು ಸಮರ್ಪಕವಾಗಿ ಅನುಷ್ಠಾನಕ್ಕೆ ತರಲು ರಾಜ್ಯಮಟ್ಟದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ಕಾಯಿದೆಯಡಿ ಸರ್ಕಾರದ ಅನುದಾನ ವಾಪಸ್ ಹೋಗದಂತೆ ಅನುಷ್ಠಾನಕ್ಕೆ ತರಬೇಕು. ಈ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸುವ ಅಧಿಕಾರಿಗಳ ಮೇಲೆ ಕ್ರಮ, ಜೈಲು ಶಿಕ್ಷೆಗೆ ಗುರಿಪಡಿಸುವ ಅವಕಾಶ ಇದೆ ಎಂದು ಹೇಳಿದರು.

ಹೊರ ಗುತ್ತಿಗೆಯಲ್ಲೂ ಮೀಸಲಾತಿ ಅಳವಡಿಸಿ: ವಿವಿಧ ಇಲಾಖೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೌಕರರನ್ನು ನೇಮಿಸಿಕೊಳ್ಳುವಾಗ ಮೀಸಲಾತಿ ಪ್ರಕಾರ ನೇಮಕ ಮಾಡಬೇಕು. ಆಯಾಯ ವರ್ಗಕ್ಕೆ ರೋಸ್ಟರ್ ಪದ್ಧತಿಯಂತೆ ಮೀಸಲಿಡಬೇಕು. ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುತ್ತಿದ್ದರೂ ಒಂದೇ ಏಜೆನ್ಸಿಯಲ್ಲಿ ಕೆಲಸ ಮಾಡುವವರೇ ಮುಂದುವರಿಯುತ್ತಿರುವುದರಿಂದ ಹೊಸಬರಿಗೆ ಅವಕಾಶ ಸಿಗದಂತಾಗಲಿದೆ.

ಮೈಸೂರು ವಿವಿ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಸೇರಿದಂತೆ ಬೇರೆ ಬೇರೆ ಕಡೆಗಳಲ್ಲಿ ಈ ಪರಿಸ್ಥಿತಿ ಇರುವುದು ಗಮನಕ್ಕೆ ಬಂದಿದೆ. ಆದ್ದರಿಂದ ಮುಂದಿನ ದಿನಗಳಲ್ಲಿ ಹೊರಗುತ್ತಿಗೆ ನೇಮಕದಲ್ಲೂ ಕಡ್ಡಾಯವಾಗಿ ಮೀಸಲಾತಿ ಪ್ರಕಾರ ನೇಮಕಕ್ಕೆ ಗಮನಹರಿಸಬೇಕು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಸೂಚಿಸಿದರು. ಕಾರ್ಯಕ್ರಮದಲ್ಲಿ ಸ್ವಾಮಿ ವಿವೇಕಾನಂದ ಯುತ್ ಮೂಮೆಂಟ್ ಯೋಜನಾ ನಿರ್ದೇಶಕ ಕೆ.ಆರ್.ಶಂಕರ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.



# ಮಕ್ಕಳು ಮನಸ್ಸು ಮಾಡಿದರೆ ಏನನ್ನಾದರೂ ಮಾಡಬಲ್ಲರು



ಮಕ್ಕಳ ಚಿತ್ರ ಪಂಚ ರತ್ನಗಳು ಚಿತ್ರದ ಟ್ರೇಲರ್ ಮತ್ತು ಹಾಡುಗಳ ಬಿಡುಗಡೆ ಕಾರ್ಯಕ್ರಮ ರೇಣುಕಾಂಬ ಸ್ಟುಡಿಯೋದಲ್ಲಿ ಅದ್ದೂರಿಯಾಗಿ ನಡೆಯಿತು. ಪ್ರದರ್ಶಕ ಮತ್ತು ವಿತರಕರಾಗಿರುವ ಜಿ.ಆರ್.ನಾರಾಯಣ ಗೌಡ ಹೊಸ ಅನುಭವ ಎನ್ನುವಂತೆ ಶ್ರೀ ಕ್ಯಾಲಮ್ಮ ದೇವಿ ಫಿಲಂಸ್ ಬ್ಯಾನರ್ ಅಡಿಯಲ್ಲಿ ನಿರ್ಮಾಣ ಮಾಡಿದ್ದಾರೆ. ಒಂದಷ್ಟು ಚಿತ್ರಗಳಲ್ಲಿ ನಟನೆ ಮಾಡಿರುವ ಮೈಸೂರು ಮೂಲದ ಗಾಯಕ ಗೌತಮ್.ಆರ್ ಚಿತ್ರಕ್ಕೆ ಕಥೆ,ಚಿತ್ರಕಥೆ, ಸಂಭಾಷಣೆ, ಮೂರು ಹಾಡುಗಳಿಗೆ ಸಾಹಿತ್ಯ ಬರೆದು ಎರಡನೇ ಬಾರಿ ನಿರ್ದೇಶನದ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದಾರೆ.

ತಾರಾಗಣದಲ್ಲಿ ಚಿಣ್ಣರುಗಳಾದ ಪ್ರಥಮ್, ಯಶಸ್, ವಿಹಾನ್, ತನ್ವಿ, ಆಧ್ಯ ಪ್ರಥಮ್, ತಾಯಿಯಾಗಿ ಬಿಂದೂ ಆಚಾರ್ಯ, ಶಿಕ್ಷಣ ಸಚಿವರಾಗಿ ಆನಂದ್ ನಗರ್ಕರ್ ಮುಂತಾದವರು ಅಭಿನಯಿಸಿದ್ದಾರೆ. ಸಂಗೀತ ಪ್ರಣವ್, ಛಾಯಾಗ್ರಹಣ ಅನಿಲ್ ಕಶ್ಯಪ್, ಸಂಕಲನ ಅಭಿಷೇಕ್, ಸಿಂಕ್ ಸೌಂಡ್ ಅಜಿತ್, ಪೋಸ್ಟ್ ಪ್ರೊಡಕ್ಷನ್ ಕ್ರಿಷ್ ಸ್ಟುಡಿಯೋಸ್ ಅವರದಾಗಿದೆ. ವೆಂಕಟ್‌ಗೌಡ ಸಾರಥ್ಯದಲ್ಲಿ ಸುಮಾರು 60 ಕೇಂದ್ರಗಳಲ್ಲಿ ಸಿನಿಮಾವು ಸದ್ಯದಲ್ಲೇ ತೆರೆಗೆ ಬರಲಿದೆ.

ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕರು, ಇಂದಿನ ಸಮಾಜದ ದೈನಂದಿಕ ಸಮಸ್ಯೆಗಳನ್ನು ದೊಡ್ಡವರು ಗಮನಕ್ಕೆ ತೆಗೆದುಕೊಳ್ಳದೆ ಇರುವುದರಿಂದ ವಿಷಯವು ಸರ್ಕಾರಕ್ಕೆ ತಲುಪದೆ ಇರುವುದರಿಂದ ಯಾರನ್ನು ದೂರುವುದರಿಂದ ಪ್ರಯೋಜನವಿಲ್ಲ. ಇದನ್ನು ಅರಿತ ಐದು ಮಕ್ಕಳು ನಾವೇ ಮುಂದಾಗಿ ಏಕೆ ಸರಿಪಡಿಸಬಾರದು ಅಂತ ತೀರ್ಮಾನಕ್ಕೆ ಬರುತ್ತಾರೆ. ಪ್ರಾರಂಭದಲ್ಲಿ ?ಪಂಚ ಭೂತಗಳು? ಹೆಸರು ಇಡಲಾಗಿತ್ತು. ವಿತರಕ ವೆಂಕಟ್‌ಗೌಡ ಶೀರ್ಷಿಕೆ ನಕರಾತ್ಮಕ ಸಂದೇಶ ಸಾರುವುದರಿಂದ ?ಪಂಚ ರತ್ನಗಳು? ಸೂಕ್ತವಾಗಿದೆ ಎಂದು ಸಲಹೆ ನೀಡಿದ್ದರಿಂದ ಅದನ್ನೆ ಇಡಲಾಯಿತು. ಪ್ರಕೃತಿಯ ಅಂಶಗಳಾದ ಭೂಮಿ, ನೀರು, ಬೆಂಕಿ, ಗಾಳಿ, ಆಕಾಶ ಇವುಗಳನ್ನು ಭುವನ್, ಜೀವಿತ, ಜ್ಯೋತಿ, ಅನಿಲ್ ಹಾಗೂ ಆಕಾಶ್ ಪಾತ್ರದ ಹೆಸರಿನಲ್ಲಿ ಬಿಂಬಿಸಲಾಗಿದೆ. ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ ಎಂಬುದರ ಮಾಹಿತಿಯನ್ನು ಗೌತಮ್.ಆರ್ ತೆರೆದಿಟ್ಟರು.



ಕನ್ನಡ ವಾಕ್ಚಿತ್ರಕ್ಕೆ 93.. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ವೈಭವದ ಹುಟ್ಟುಹಬ್ಬ ಆಚರಣೆ.. ಜಯಮಾಲಾ ಗಿರಿಜಾ ಲೋಕೇಶ್ ಅವರಿಗೆ ಸಿಹಿ ತಿನಿಸಿದರು.

# ಸರ್ಕಾರಿ ನ್ಯಾಯಬೆಲೆ ಅಂಗಡಿ' ಚಿತ್ರದ ಪೋಸ್ಟರ್ ಬಿಡುಗಡೆ

'ಸರ್ಕಾರಿ ನ್ಯಾಯಬೆಲೆ ಅಂಗಡಿ' ಹೀಗೊಂದು ಹೆಸರಿನಲ್ಲಿ ಕನ್ನಡದಲ್ಲಿ ಸಿನಿಮಾವೊಂದು ತೆರೆಗೆ ಬರುತ್ತಿರುವುದು ನಿಮಗೆ ಗೊತ್ತಿರಬಹುದು.

ಇದೀಗ ಈ ಸಿನಿಮಾ ಸದ್ದಿಲ್ಲದೆ ತನ್ನ ಚಿತ್ರೀಕರಣವನ್ನು ಪೂರೈಸಿದೆ.

ಸಿನಿಮಾದ ಹೆಸರೇ ಹೇಳುವಂತೆ, ಇದು 'ಸರ್ಕಾರಿ ನ್ಯಾಯಬೆಲೆ ಅಂಗಡಿ' ಮತ್ತು ಪಡಿತರ ವ್ಯವಸ್ಥೆಯ ಸುತ್ತ ನಡೆಯುವಂಥ ಕಥಾಹಂದರದ ಚಿತ್ರ. ಪಕ್ಕಾ ಗ್ರಾಮೀಣ ಸೊಗಡಿನ ಕಥಾಹಂದರದ ಈ ಸಿನಿಮಾದ ಸಂಪೂರ್ಣ ಚಿತ್ರೀಕರಣವನ್ನು ಮಂಡ್ಯ ಜಿಲ್ಲೆಯಲ್ಲೇ ನಡೆಸಿರುವುದು ವಿಶೇಷ.

ಇನ್ನು ನಟಿ ರಾಗಿಣಿ ದ್ವಿವೇದಿ, ನಟರಾದ ಕುಮಾರ ಬಂಗಾರಪ್ಪ, ದೊಡ್ಡಣ್ಣ ಮೊದಲಾದ ಕಲಾವಿದರು ಮುಖ್ಯಭೂಮಿಕೆಯಲ್ಲಿ ಅಭಿನಯಿಸುತ್ತಿರುವ ಈ ಸಿನಿಮಾದ ಪೋಸ್ಟರ್ ಅನ್ನು ಕೇಂದ್ರ ಜಲ ಶಕ್ತಿ ಮತ್ತು ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಬಿಡುಗಡೆಗೊಳಿಸಿದರು.

ಇದೇ ವೇಳೆ ಮಾತನಾಡಿದ ಕೇಂದ್ರ ಸಚಿವ ವಿ. ಸೋಮಣ್ಣ, 'ಜನ ಸಾಮಾನ್ಯರು, ಬಡವರು ಹಸಿವಿನಿಂದ ಬಳಲಬಾರದು ಎಂಬ ಉದ್ದೇಶದಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 'ಸರ್ಕಾರಿ ನ್ಯಾಯಬೆಲೆ ಅಂಗಡಿ'ಗಳ ಮೂಲಕ ದಿನಸಿ ಮತ್ತು ಆಹಾರವನ್ನು ಜನರಿಗೆ ತಲುಪಿಸುವ ಕೆಲಸ ಮಾಡುತ್ತಿದೆ. ಆದರೆ, ಈ ವ್ಯವಸ್ಥೆಯಲ್ಲಿರುವ ಕೆಲವು ಲೋಪಗಳಿಂದ ಇದರ ಉದ್ದೇಶ ಪರಿಣಾಮಕಾರಿಯಾಗಿ ಈಡೇರುತ್ತಿಲ್ಲ. ಈಗ ಇದೇ ವಿಷಯವನ್ನು ಸಿನಿಮಾವಾಗಿಸಿ 'ಸರ್ಕಾರಿ ನ್ಯಾಯಬೆಲೆ ಅಂಗಡಿ' ಚಿತ್ರತಂಡ ಪ್ರೇಕ್ಷಕರ ಮುಂದೆ ಹೇಳಲು ಹೊರಟಿದೆ. ಚಿತ್ರ ತಂಡದ ಇಂಥದ್ದೊಂದು ಪ್ರಯತ್ನ ನಿಜಕ್ಕೂ ಶ್ಲಾಘನೀಯ. ಸಾಮಾಜಿಕ ಕಳಕಳಿಯ ವಿಷಯಗಳನ್ನು ಸಿನಿಮಾ ಮೂಲಕ ಹೇಳಿದಾಗ, ಅದು ಪರಿಣಾಮಕಾರಿಯಾಗಿ ಪ್ರೇಕ್ಷಕರನ್ನು ತಲುಪುತ್ತದೆ. ಈ ಚಿತ್ರ ಜನ ಜಾಗೃತಿ ಮೂಡಿಸಿ, ಯಶಸ್ವಿಯಾಗಲಿ' ಎಂದು ಶುಭ ಹಾರೈಸಿದರು.

ಇದೇ ವೇಳೆ ಮಾತನಾಡಿದ ಚಿತ್ರದ ನಾಯಕ ನಟ ಕುಮಾರ್ ಬಂಗಾರಪ್ಪ, 'ಇಡೀ ದೇಶದಲ್ಲಿಯೇ ಸರ್ಕಾರಿ ನ್ಯಾಯಬೆಲೆ ಅಂಗಡಿ ಮತ್ತು ಪಡಿತರ ವ್ಯವಸ್ಥೆಯ ಮೇಲೆ ಮೂಡಿ ಬರುತ್ತಿರುವ ಮೊಟ್ಟ ಮೊದಲ ಸಿನಿಮಾ ಇದಾಗಿದೆ. ಇಡೀ ಗ್ರಾಮೀಣ ಪರಿಸರದ ಹಿನ್ನೆಲೆಯಲ್ಲಿ ಈ ಸಿನಿಮಾ ಸಾಗುತ್ತದೆ. ಮನರಂಜನೆ ಜೊತೆಗೆ ಒಂದು ಒಳ್ಳೆಯ ಸಂದೇಶ ಕೂಡ ಈ ಸಿನಿಮಾದಲ್ಲಿದೆ. ಸರ್ಕಾರಿ ನ್ಯಾಯಬೆಲೆ ಅಂಗಡಿಯಲ್ಲಿ ಏನೇನು ವ್ಯವಹಾರಗಳು, ಅವ್ಯವಹಾರಗಳು ನಡೆಯುತ್ತದೆ ಎಂಬುದನ್ನು ಸಮಾಜಕ್ಕೆ ತೋರಿಸುವಂಥ ಕಥೆ ಈ ಸಿನಿಮಾದಲ್ಲಿದೆ. ಇದು ಎಲ್ಲಾ ಥರದ ಆಡಿಯನ್ಸ್‌ಗೂ ಕನೆಕ್ಟ್ ಆಗುವಂಥ ಸಿನಿಮಾ.

ಇಡೀ ಸಿನಿಮಾವನನ್ನು ಮಂಡ್ಯ ಜಿಲ್ಲೆಯ ಗ್ರಾಮೀಣ ಪರಿಸರದಲ್ಲಿ ಚಿತ್ರೀಕರಿಸಿದ್ದು, ಒಂದು ಅದ್ಭುತ ಅನುಭವ. ನಿರ್ಮಾಪಕರು, ನಿರ್ದೇಶಕರು ಮತ್ತು ತಂತ್ರಜ್ಞರ ಸಹಕಾರದಿಂದ 'ಸರ್ಕಾರಿ ನ್ಯಾಯಬೆಲೆ ಅಂಗಡಿ? ಚಿತ್ರ ತುಂಬ ಚೆನ್ನಾಗಿ ಮೂಡಿಬರುತ್ತಿದೆ. ಸಿನಿಮಾದ ಚಿತ್ರೀಕರಣ ಮುಗಿದಿದ್ದೇ ಗೊತ್ತಾಗಲಿಲ್ಲ. ಬಹುಕಾಲದ ಬಳಿಕ ಇಂಥದ್ದೊಂದು ಸಾಮಾಜಿಕ ಕಳಕಳಿಯ ಚಿತ್ರದಲ್ಲಿ ಅಭಿನಯಿಸಿರುವುದಕ್ಕೆ ಖುಷಿಯಿದೆ ' ಎಂದರು. 'ಸರ್ಕಾರಿ ನ್ಯಾಯಬೆಲೆ ಅಂಗಡಿ? ಚಿತ್ರದಲ್ಲಿ ನಟಿ ರಾಗಿಣಿ ದ್ವಿವೇದಿ ಪಾರ್ವತಿ ಎಂಬ ಗ್ರಾಮೀಣ ಮಹಿಳೆಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ?ಜಯಶಂಕರ ಟಾಕೀಸ್? ಬ್ಯಾನರಿನಲ್ಲಿ ನಿರ್ಮಾಣವಾಗುತ್ತಿರುವ 'ಸರ್ಕಾರಿ ನ್ಯಾಯಬೆಲೆ ಅಂಗಡಿ? ಚಿತ್ರವನ್ನು ತೇಜು ಮೂರ್ತಿ ಮತ್ತು ಪದ್ಮಾವತಿ ಚಂದ್ರಶೇಖರ್ ಜಂಟಿಯಾಗಿ ನಿರ್ಮಾಣ ಮಾಡುತ್ತಿದ್ದಾರೆ. ಚಿತ್ರದ ಹಾಡುಗಳಿಗೆ ಅನಂತ್ ಆರ್ಯನ್ ಸಂಗೀತ ಸಂಯೋಜಿಸುತ್ತಿದ್ದಾರೆ. ಬಿ. ರಾಮಮೂರ್ತಿ ಕಥೆ, ಚಿತ್ರಕಥೆ ಮತ್ತು ಸಂಭಾಷಣೆಯಿರುವ 'ಸರ್ಕಾರಿ ನ್ಯಾಯಬೆಲೆ ಅಂಗಡಿ? ಚಿತ್ರಕ್ಕೆ ಸಾತ್ವಿಕ್ ಪವನ್ ಕುಮಾರ್ ಛಾಯಾಗ್ರಹಣ ಮತ್ತು ನಿರ್ದೇಶನ ಮಾಡುತ್ತಿದ್ದಾರೆ.





# `ಪ್ರೇಮದ ಊರಲಿ' ಟೀಸರ್ ರಿಲೀಸ್..

ಮನೋಜ್ ಕುಮಾರ್ ಅವರ ಪ್ರೇಮದ ಊರಲಿ ಚಿತ್ರದ ಟೀಸರ್ ಬಿಡುಗಡೆ ಮಾಡಲಾಯಿತು.

ಈ ವೇಳೆ ಮಾತನಾಡಿದ ರಂಗಾಯಣ ರಘು, ತಪ್ಪುಗಳನ್ನು ಮಾಡ್ತಾ ಹೋಗಿ ಜೀವನ ಕಲಿಯುವ ಪಾತ್ರದಲ್ಲಿ ನಾನು ನಟಿಸಿದ್ದೇನೆ. ಶ್ರೀ ಮೊದಲು ಫೋನ್ ಮಾಡಿ ಹಳ್ಳಿ ಕಥೆ ಇದು ಹೇಳಿದರು. ನನಗೆ ಹಳ್ಳಿ ಕಥೆ ಇಷ್ಟವಾಗುತ್ತದೆ. ಡೈರೆಕ್ಟರ್ ಕಥೆ ಹೇಳಿದರು. ಇಷ್ಟವಾಯ್ತು. ಶೂಟಿಂಗ್ ಜಾಗ ತುಂಬಾನೇ ಸೊಗಸಾಗಿತ್ತು. ನಾನು ಶೂಟಿಂಗ್ ಮುಗಿಸಿದ ಬಳಿಕ ನಾನು ಅಲ್ಲಿನ ಹಳ್ಳಿಯವನು ಅದೇ. ನಿರ್ದೇಶಕರು ಕೆಲಸ ಮಾಡುವ ರೀತಿ ನನಗೆ ಇಷ್ಟವಾಯ್ತು. ಹಳ್ಳಿ ಕಥೆ.ಈ ನಿಮ್ಮ ಪ್ರೀತಿ, ಸಹಕಾರ ನಮ್ಮ ಚಿತ್ರದ ಮೇಲೆ ಇರಲಿ ಎಂದರು.

ನಿರ್ದೇಶಕ ಮನೋಜ್ ಕುಮಾರ್ ಮಾತನಾಡಿ, ರಂಗಾಯಣ ರಘು ಸರ್ ಈ ಸಿನಿಮಾಗೆ ಹಾಗೂ ನನಗೆ ಬೆಳಕು. ಅವರ ಅಭಿನಯದ ಬಗ್ಗೆ ಮಾತಾಡುವಷ್ಟು ನಾನು ದೊಡ್ಡವನಲ್ಲ. ಅವರು ಒಂದು ವಿಶಿಷ್ಟವಾದ ಪಾತ್ರದಲ್ಲಿ ನಟಿಸಿದ್ದಾರೆ. ಹಾಸನದ ಸದಾ ಮಳೆ ಬರುವ ಜಾಗದಲ್ಲಿ ಶೂಟಿಂಗ್ ಮಾಡಿದ್ದೇವೆ. ಹೀರೋ ಚಿತ್ರಕ್ಕೆ ಸಾಕಷ್ಟು ಶ್ರಮ ಹಾಕಿದ್ದಾರೆ. ನಾಯಕಿರು ಅದ್ಭುತವಾಗಿ ನಟಿಸಿದ್ದಾರೆ. ನನಗೆ ಈ ಅವಕಾಶ ಕೊಟ್ಟ ನಿರ್ಮಾಪಕರಿಗೆ ಧನ್ಯವಾದಗಳು. ಚಿತ್ರಕ್ಕೆ ಏನು ಬೇಕು ಎಲ್ಲವನ್ನೂ ನೀಡಿದ್ದಾರೆ. ಸಂಪೂರ್ಣ ಬೆಂಬಲ ಕೊಟ್ಟಿದ್ದಾರೆ. ಪ್ರೇಮದ ಊರಲಿ ಸಿನಿಮಾ ಮ್ಯೂಸಿಕಲ್ ಲವ್ ಸ್ಟೋರಿ.



ಚಿತ್ರದ ಹಿನ್ನೆಲೆ ಸಂಗೀತ ಅದ್ಭುತವಾಗಿದೆ. ಟೀಸರ್ ನೋಡಿದ್ರೆ ಗೊತ್ತಗುತ್ತದೆ ಇದು ನಾಗಣ್ಣ ಹಾಗೂ ಸಂತುವಿನ ಪುಟ್ಟ ಲೋಕ. ಊರು ಅಂದರೆ ಸಾವಿರ ಮನೆ, ನೂರು ಮನೆ ಇರಬೇಕು ಎಂಬುದು ಇಲ್ಲ. ಒಂದು ಮನೆಯಲ್ಲಿ ಎಲ್ಲರೂ ಲವಲವಿಕೆಯಿಂದ, ಖುಷಿಯಿಂದ, ಪ್ರೀತಿಯಿಂದ ಇದ್ದರೆ ಅದೇ ನಮಗೆ ದೊಡ್ಡ ಊರು. ಅದೇ ಪ್ರೇಮದ ಊರಲಿ ಎಂದು ಹೇಳಿದರು. ನಟ ಶ್ರೀರಾಮ್ ಚಿತ್ರದ ನಾಯಕನಾಗಿ ನಟಿಸಿದ್ದು, ತಪಸ್ವಿನಿ ಪೂಣಚ್ಚ ಹಾಗೂ ರಮಿಕಾ ಶಿವು ನಾಯಕಿಯರಾಗಿ ಸಾಥ್ ಕೊಟ್ಟಿದ್ದಾರೆ. ಈ ಚಿತ್ರದಲ್ಲಿ ಶ್ರೀರಾಮ್ ತಂದೆ ಪಾತ್ರದಲ್ಲಿ ರಂಗಾಯಣ ರಘು ನಟಿಸಿದ್ದಾರೆ. 'ಪ್ರೇಮದ ಊರಲಿ? ಚಿತ್ರವನ್ನು ವೆನಿಲ್ಲಾ ಎಂಟರ್ಟೈನ್ಮೆಂಟ್ಸ್, ಜಾನಕಮ್ಮ ಪ್ರೊಡಕ್ಷನ್ ನಡಿ ಮಮತಾ ದೇವೇಂದ್ರ, ಪ್ರಶಾಂತ್ ಹಾಗೂ ರಮೇಶ್ ಅವರು ನಿರ್ಮಾಣ ಮಾಡಿದ್ದಾರೆ. ಸುನಾದ ಗೌತಮ್ ಸಂಗೀತ ನಿರ್ದೇಶನ, ರಾಜ್ಕಾಂತ್ ಎಸ್ ಕೆ ಛಾಯಾಗ್ರಹಣ, ಹರ್ಷಿತ್ ಪ್ರಭು ಸಂಕಲನ ಚಿತ್ರಕ್ಕಿದೆ.

# ಸೆಲೆಬ್ರಿಟಿಗೆ ಅಶ್ವಿನ್



ಸೆಲೆಬ್ರಿಟಿ ಚಿತ್ರದ ಟೈಟಲ್ ಲಾಂಚ್ ಇವೆಂಟ್ ಸುದೀಪ್ ಉಪಸ್ಥಿತಿ ಯಲ್ಲಿ ನಡೆಯಿತು. ಟೈಟಲ್ ಲಾಂಚ್ ಮಾಡಿದ ಅವರು ಇಡೀ ತಂಡಕ್ಕೆ ಶುಭ ಹಾರೈಸಿದರು.

ಸುದೀಪ್ ಮಾತನಾಡಿ, ನನಗೆ ಟೀಸರ್ ತುಂಬಾ ಇಷ್ಟವಾಯ್ತು. ಟೆಕ್ನಿಕಲ್ ಆಗಿ ಬ್ಯೂಟಿಫುಲ್ ಆಗಿದೆ. ವಿಜಯ್ ಮ್ಯೂಸಿಕ್ ಚೆನ್ನಾಗಿದೆ. ಇವ್ರು ಅರ್ಜುನ್ ಜನ್ಯ ಶಿಷ್ಯ. ಅಂಬಿ ನಿಂಗೆ ವಯಸ್ಸಾಯ್ತು ಚಿತ್ರದ ಮಾತಾಡೋ ತಾರೆಯ ಕಂಡ ಹಾಗೇ ಹಾಡು ಹಾಡಿರುವುದು ಇವರೇ. ಇವ್ರ ವಾಯ್ಸ್ ಬ್ಯೂಟಿಫುಲ್ ಆಗಿದೆ. ಟೀಸರ್ ಚೆನ್ನಾಗಿ ತೆಗೆದಿದ್ದಾರೆ. ಹೀರೋ ಅದ್ಭುತವಾಗಿ ಡ್ಯಾನ್ಸ್ ಮಾಡಿದ್ದಾರೆ. ನೀವು ಮಾಡಿರುವ ಡ್ಯಾನ್ಸ್ ನಮಗೆ ಮಾಡಲು ಹೇಳಿದರೆ ನಾವು ಭಯಪಡುತ್ತೇವೆ. ನಮಗೆ ಅಷ್ಟೆಲ್ಲಾ ಬರಲ್ಲ. ನಿಮಗೆ ಒಳ್ಳೆ ಕಲೆ ಇದೆ. ನಾನು ಇಲ್ಲಿಗೆ ಬರಲು ಮೂಲ ಕಾರಣ ಮಹೇಶ್..

ಬಹಳ ವರ್ಷಗಳ ಪರಿಚಯ. ನನಗೆ ಬಹಳ ಬೇಕಾದ ವ್ಯಕ್ತಿ. ಸೆಲೆಬ್ರಿಟಿ ಸಿನಿಮಾ ಇವತ್ತು ಇಲ್ಲಿ ಲಾಂಚ್ ಆಗಿದೆ. ಒಂದು ಸಿನಿಮಾ ಮಾಡುವುದು ಇಸಿ ಕೆಲಸವಾದರೆ, ಅದು ಬೆಳೆಯಬೇಕು ಎಂದರೆ ಅದಕ್ಕೆ ನಿಮ್ಮ ಸಹಕಾರ ಬೇಕು. ಟೆಕ್ನಿಕಲ್ ಚಿತ್ರ ಎಕ್ಸಲೆಂಟ್ ಆಗಿದೆ. ಸಿನಿಮಾದಲ್ಲಿ ಇರುವ ಪ್ರತಿಯೊಬ್ಬರಿಗೂ ಒಳ್ಳೆದಾಗಲಿ ಎಂದರು.

ನಾಯಕ ಅಶ್ವಿನ್ ಮಾತನಾಡಿ, ನಾನು ಇದೇ ಮೊದಲ ಬಾರಿಗೆ ಸುದೀಪ್ ಅವರಿಗೆ ಧನ್ಯವಾದ. ಚಿಕ್ಕ ವಯಸ್ಸಿನಿಂದ ಕನಸು ಇಟ್ಕೊಂಡು ಬಂದಿದ್ದೇನೆ. ನಿಮ್ಮೆಲ್ಲರ ಹಾರೈಕೆ ನನ್ನ ಮೇಲೆ ಇರಲಿ ಎಂದರು.

ನಟಿ ಸಂಗೀತ, ನನಗೆ ತುಂಬಾ ಸಂತೋಷವಾಗ್ತಿದೆ. ನಾನು ಇಷ್ಟು ವರ್ಷವಾದ್ಮೇಲೆ ಸೆಲೆಬ್ರಿಟಿ ಸಿನಿಮಾ ಮೂಲಕ ಕಂಬ್ಯಾಕ್ ಆಗುತ್ತಿದ್ದೇನೆ. ನಿರ್ದೇಶಕ ಕಿರಣ್ ಅವರು, ಮಹೇಶ್ ಸರ್ ಹಾಗೂ ಇಡೀ ತಂಡಕ್ಕೆ ಧನ್ಯವಾದಗಳು. ಸುದೀಪ್ ಅವರ ಅಭಿಮಾನಿ ನಾನು. ಹೀರೋ ತುಂಬಾ ಹಾರ್ಡ್ ವರ್ಕ್ ಮಾಡ್ತಾರೆ. ಈ ತಂಡದ ಜೊತೆ ಕೆಲಸ ಮಾಡುತ್ತಿರುವುದು ಖುಷಿ ಕೊಟ್ಟಿದೆ ಎಂದರು.

ಸೆಲೆಬ್ರಿಟಿ ಸಿನಿಮಾವನ್ನು ಗೌರಿ ಆರ್ಟ್ಸ್ ಬ್ಯಾನರ್ ನಡಿ ಜೆಡಿಎಸ್ ನಾಯಕ ಸಾರಾ ಮಹೇಶ್ ಹಾಗೂ ಸುಷ್ಮಾ ಅಶ್ವಿನ್ ನಿರ್ಮಾಣ ಮಾಡುತ್ತಿದ್ದಾರೆ.

ಕಿರಣ್ ವಿಶ್ವನಾಥ್ ಸೆಲೆಬ್ರಿಟಿ ಚಿತ್ರವನ್ನು ನಿರ್ದೇಶಿಸಲಿದ್ದಾರೆ. ನಾಯಕಿಯಾಗಿ ನಟಿ ಪ್ರಿಯಾಂಕಾ ಆಚಾರ್ ಅಭಿನಯಿಸುತ್ತಿದ್ದು, ಯಾರೇ ನೀನು ಚೆಲುವೆ ಖ್ಯಾತಿಯ ಸಂಗೀತ ಈ ಚಿತ್ರದ ಮೂಲಕ ಸ್ಯಾಂಡಲ್ ವುಡ್ ಗೆ ಕಂಬ್ಯಾಕ್ ಆಗುತ್ತಿದ್ದಾರೆ.

# ಪೀಟರ್ ಚಿತ್ರದ ಜೋಶ್ ಜವಾನಿ ಹಾಡಿಗೆ ಅಜಯ್ ಗೋಗವಾಲೆ ಧ್ವನಿ

ಪೀಟರ್ ಸಿನಿಮಾ ಟೀಸರ್ ಹಾಗೂ ಹಾಡುಗಳ ಮೂಲಕ ಪ್ರೇಕ್ಷಕರ ವಲಯದಲ್ಲಿ ಕುತೂಹಲ ಗರಿಗೆದರುವಂತೆ ಮಾಡಿದೆ. ಇದೀಗ ಚಿತ್ರತಂಡ ಜೋಶ್ ಜವಾನಿ ಎಂಬ ಮತ್ತೊಂದು ಸಿಂಗಿಂಗ್ ಮಸ್ತಿಯನ್ನು ಅನಾವರಣಗೊಳಿಸಿದೆ. ಬಾಲಿವುಡ್ ಪವರ್ ಹೌಸ್ ಎನಿಸಿಕೊಂಡಿರುವ, ಪ್ರಭಾಸ್ ನಟನೆಯ ಆದಿ ಪುರುಷ್, ಅಮೀರ್ ಖಾನ್ ನಟನೆಯ ಪೀ ಕೆ , ಶಾರುಖ್ ನಟನೆಯ ಝೀರೋ ಮತ್ತು ಹಲವಾರು ದಿಗ್ಗಜರ ಚಿತ್ರಗಳಿಗೆ ಸಂಗೀತ ನಿರ್ದೇಶಿಸಿ ಹಾಡಿರುವ ಅಜಯ್ ಗೋಗವಾಲೆ ಈ ಹಾಡಿಗೆ ಕಂಠ ಕುಣಿಸಿದ್ದಾರೆ.

ಪಕ್ಕ ಫಾಸ್ಟ್ ಬೀಟ್ ಸಾಂಗ್ ಆಗಿರುವ ಜೋಶ್ ಜವಾನಿ ಹಾಡು ಕನ್ನಡದ ಜೊತೆಗೆ ತೆಲುಗು, ತಮಿಳು ಹಾಗೂ ಮಲಯಾಳಂನಲ್ಲಿ ರಿಲೀಸ್ ಆಗಿದೆ. ಕನ್ನಡ ವರ್ಷನ್ ಹಾಡಿಗೆ ಅಜಯ್ ಗೋಗವಾಲೆ ಧ್ವನಿಯಾದ್ರೆ, ಅಭಿಷೇಕ್ ತಮಿಳು, ಅನ್ವರ್ ಸಾಧದ್ ಮಲಯಾಳಂ ಹಾಗೂ ತೆಲುಗು ವರ್ಷನ್ ಹಾಡನ್ನು ರಿತ್ವಿಕ್ ಮುರುಳೀಧರ್ ಹಾಡಿದ್ದಾರೆ.

ದೂರದರ್ಶನ ಸಿನಿಮಾ ಖ್ಯಾತಿಯ ನಿರ್ದೇಶಕ ಸುಕೇಶ್ ಶೆಟ್ಟಿ ಮಡಿಕೇರಿಯ ಭಾಗಮಂಡಲದಲ್ಲಿ ನಡೆದ ಸ್ಥಳೀಯ ಕಥೆಯನ್ನು ಹದವಾಗಿ ಹೆಣೆದಿದ್ದಾರೆ. ಅದಕ್ಕೆ ಬೇಕಾದ ರೀತಿ ಸೆಟ್, ಪ್ರಾಪರ್ಟಿ ಜೊತೆಗೆ ಅಧ್ಯಯನ ನಡೆಸಿಯೇ ಚಿತ್ರವನ್ನು ರೂಪಿಸಲಾಗಿದೆ.



ಸುಕೇಶ್ ಅವರು ಹೇಳುವಂತೆ ಪೀಟರ್ ಸಿನಿಮಾದ ಪ್ರತಿ ಪಾತ್ರ ಮನುಷ್ಯನಿಗೆ ಕನೆಕ್ಟ್ ಆಗುತ್ತದೆ. ಪ್ರೇಕ್ಷಕರನ್ನು ಎಂಗೇಜ್ ಆಗಿ ಕೂರಿಸುವಂತ ಸ್ಕ್ರೀನ್ ಪ್ಲೇ, ಸೌಂಡ್ ಡಿಸೈನ್, ವಿಷ್ಯುವಲ್ ಕ್ವಾಲಿಟಿ, ಕಥೆ ಮೇಕಿಂಗ್ ಎಲ್ಲವೂ ಚಿತ್ರದಲ್ಲಿದೆ. ಈ ಚಿತ್ರದಲ್ಲಿ ಮಳೆ, ಮಂಜು, ಹಚ್ಚ ಹಸಿರಿನ ನಡುವೆ ನಡೆಯೋ ರೋಚಕ ಕಥೆ ಯನ್ನ ಚಿತ್ರಮಂದಿರದಲ್ಲಿ ಕೂತು ಅನುಭವಿಸಬೇಕು ಅನ್ನೋದು ವಿಶೇಷ.

ಥಿಂಕ್ ಮ್ಯೂಸಿಕ್ ಆಡಿಯೋ ಹಕ್ಕು ಖರೀದಿಸಿರುವ ಮೊದಲ ಕನ್ನಡ ಸಿನಿಮಾ ಎಂಬ ಖ್ಯಾತಿ ಕೂಡ ಪೀಟರ್ ಚಿತ್ರಕ್ಕಿದೆ. ಸಸ್ಪೆನ್ಸ್ ಡ್ರಾಮಾ ಕಥಾ ಹಂದರ ಹೊಂದಿರುವ ಚಿತ್ರಕ್ಕೆ ರಿತ್ವಿಕ್ ಮುರಳೀಧರ್ ಸಂಗೀತ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಪೀಟರ್ ಸಿನಿಮಾದಲ್ಲಿ ರಾಜೇಶ್ ಧ್ರುವ, ಜಾನ್ವಿ ರಾಯಲ, ರವೀಕ್ಷಾ ಶೆಟ್ಟಿ,ಪ್ರತಿಮಾ ನಾಯಕ್, ರಘು ಪಾಂಡೇಶ್ವರ್, ರಾಮ ನಾಡಗೌಡ, ವರುಣ್ ಪಟೇಲ್ ತಾರಾಬಳಗದಲ್ಲಿದ್ದಾರೆ.

ರವಿ ಹೀರೆಮಠ್ ಹಾಗೂ ರಾಕೇಶ್ ಹೆಗಡೆ ವೃದ್ಧಿ ಸ್ಟುಡಿಯೊಸ್ ಬ್ಯಾನರ್ ನಡಿ ಪೀಟರ್ ಸಿನಿಮಾ ನಿರ್ಮಿಸಿದ್ದಾರೆ.

ಗುರುಪ್ರಸಾದ್ ನರ್ನಾಡ್ ಛಾಯಾಗ್ರಹಣ, ನವೀನ್ ಶೆಟ್ಟಿ ಸಂಕಲನ, ದೇವರಾಜ್ ಕಲಾ ನಿರ್ದೇಶನ ಚಿತ್ರಕ್ಕಿದೆ. ಇನ್ನೂ ಎರಡು ವಾರದಲ್ಲಿ ಚಿತ್ರತಂಡ ಬಿಡುಗಡೆ ದಿನಾಂಕ ಘೋಷಣೆ ಮಾಡಲಿದೆ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,